ಉದಯಭಾನು
ಸುವರ್ಣ ಪುಸ್ತಕಮಾಲೆ ೩೯

ಶ್ರೀನಿವಾಸ ಹಾವನೂರ

ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ

ಉದಯಭಾನು ಕಲಾಸಂಘ (ನೋಂ.)
ಉದಯಭಾನು ಉನ್ನತ ಅಧ್ಯಯನ ಕೇಂದ್ರ
ಕೆಂಪೇಗೌಡನಗರ, ಬೆಂಗಳೂರು – ೫೬೦ ೦೧೯

ಉದಯಭಾನು ಸುವರ್ಣ ಪುಸ್ತಕ ಮಾಲೆ-೩೯

ಶ್ರೀನಿವಾಸ ಹಾವನೂರ

ಪ್ರಧಾನ ಸಂಪಾದಕರು

ಡಾ. ಪಿ.ವಿ. ನಾರಾಯಣ

ಲೇಖಕರು

ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ

ಉದಯಭಾನು ಕಲಾಸಂಘ (ನೋಂ.)

ಉದಯಭಾನು ಉನ್ನತ ಅಧ್ಯಯನ ಕೇಂದ್ರ

ಕೆಂಪೇಗೌಡನಗರ, ಬೆಂಗಳೂರು - ೫೬೦ ೦೧೯

SHRINIVASA HAVANOORA - A Biography written by Dr. S.L. Srinivasa Murthy Published by Udayabhanu Kalasangha-Udayabhanu Centre for Advanced Studies, Kempegowdanagara, Bengaluru-560 019.

First Edition : 2015
Pages : x +70 = 80
Price : ₹ **60/-**
© Publishers

Editorial Board:
Editor in Chief : **Dr. P. V. Narayana**
Editors : **Dr. K. V. Ramakrishne Gowda**
Dr. Y. C. Kamala
Dr. T. Padma

ಪ್ರಧಾನ ಸಂಪಾದಕರು
ಡಾ. ಪಿ.ವಿ. ನಾರಾಯಣ

ಸಂಪಾದಕರು
ಡಾ. ಕೋ.ವೆಂ. ರಾಮಕೃಷ್ಣೇಗೌಡ
ಡಾ. ವೈ.ಸಿ. ಕಮಲ
ಡಾ. ಟಿ. ಪದ್ಮ

ಮೊದಲ ಮುದ್ರಣ : ೨೦೧೫
ಹಕ್ಕುಗಳು : ಪ್ರಕಾಶಕರು
ಕಾಗದದ ಗುಣಮಟ್ಟ : ೮೦ ಜಿ.ಎಸ್.ಎಂ. ಮ್ಯಾಪ್‌ಲಿಥೋ
ಆಕಾರ : ೧/೮ ಡೆಮಿ
ಪ್ರತಿಗಳು : ೧೦೦೦
ಪುಟಗಳು : x + ೭೦ = ೮೦
ಬೆಲೆ : ₹೬೦/-

ಪ್ರಕಾಶಕರು
ಉದಯಭಾನು ಕಲಾಸಂಘ (ನೋಂ.)
ಉದಯಭಾನು ಉನ್ನತ ಅಧ್ಯಯನ ಕೇಂದ್ರ
ಗವಿಪುರ ಸಾಲುಛತ್ರಗಳ ಎದುರು
ರಾಮಕೃಷ್ಣ ಮಠ ಬಡಾವಣೆ
ಕೆಂಪೇಗೌಡನಗರ, ಬೆಂಗಳೂರು – ೫೬೦ ೦೧೯
ದೂರವಾಣಿ : ೨೬೬೮೦೯೩೪೩

ಮುಖಪುಟದ ಛಾಯಚಿತ್ರ : **'ಯಜ್ಞ'** ಮಂಗಳೂರು
ಮುಖಪುಟ ವಿನ್ಯಾಸ : **ಜಿ. ಅರುಣ್‌ಕುಮಾರ್**

ಅಕ್ಷರ ಜೋಡಣೆ ಮತ್ತು ಮುದ್ರಣ
ಇಳಾ ಮುದ್ರಣ
ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇ-ಔಟ್
ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫೭೧೫೯

ಪ್ರತಿಗಳಿಗೆ ಸಂಪರ್ಕಿಸಿ : **ಉದಯಭಾನು ಕಲಾಸಂಘ,** ಕೆಂಪೇಗೌಡನಗರ, ಬೆಂಗಳೂರು – ೫೬೦ ೦೧೯

ಉದಯಭಾನು ಸುವರ್ಣ ಪುಸ್ತಕ ಮಾಲೆ

ನಾಡಿನ ಸಾಹಿತ್ಯಿಕ - ಸಾಂಸ್ಕೃತಿಕ ಕ್ಷೇತ್ರಗಳು ಇಂದಿನ ಸಾಮಾಜಿಕ ಸ್ಥಿತಿಯಲ್ಲಿ ವಿವಿಧ ಹಂತಗಳಲ್ಲಿ ಹೊಸ ಆಯಾಮಗಳನ್ನು ಪಡೆದುಕೊಂಡು ಸಾಧನೆಯ ಪಥದಲ್ಲಿ ಸಾಗಿವೆ. ಸಾಧನೆಯ ಪಥದಲ್ಲಿ ಇಂದು ಕನ್ನಡ-ಕನ್ನಡಿಗ-ಕರ್ನಾಟಕದ ಬದುಕನ್ನು ಕಟ್ಟಿಕೊಡುವ ಬಗ್ಗೆ ಆಳವಾದ ಚಿಂತನೆ ನಡೆಯುತ್ತಿದೆ. ಇಂತಹ ಚಿಂತನೆಯ ತಳಹದಿಯ ಮೇಲೆ **ಉದಯಭಾನು ಕಲಾಸಂಘವು** ೧೯೬೫ರಲ್ಲೇ ಸ್ಥಾಪನೆಯಾಗಿ, ಇದೀಗ ಜೂನ್ ೨೦೧೪ ರಿಂದ ಜೂನ್ ೨೦೧೫ರ ವರೆಗೆ ಸುವರ್ಣ ಮಹೋತ್ಸವ ಆಚರಿಸುತ್ತಿದೆ.

ಸಂಘವು ಕೇವಲ ೧೦ ಅಡಿ ಉದ್ದಗಲದ ಮಳಿಗೆಯಲ್ಲಿ ಪ್ರಾರಂಭವಾಗಿ, ಇಂದು ಸುಮಾರು ೧೫,೦೦೦ ಚ. ಅಡಿ ವಿಸ್ತೀರ್ಣದ ಕಟ್ಟಡಗಳಲ್ಲಿ ಕೆಲಸಗಳನ್ನು ನಿರ್ವಹಿಸುತ್ತಿದೆ. ಸುಸಜ್ಜಿತ ಸಾಂಸ್ಕೃತಿಕ ಭವನ ತಲೆ ಎತ್ತಿ ನಿಂತಿದೆ. ತಳಮನೆ, ನೆಲಮನೆ, ಮೊದಲ ಮಹಡಿ ಕಟ್ಟಡಗಳೊಂದಿಗೆ ಆಡಳಿತ ಕಟ್ಟಡಗಳಲ್ಲಿ ಸಂಘದ ಸಮಾಜಮುಖಿ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ. ಸಾಹಿತ್ಯ, ಸಂಸ್ಕೃತಿ, ಸಾಮಾಜಿಕ ಸೇವೆ, ಉಚಿತ ಶಿಕ್ಷಣ, ನಾಗರಿಕ ಆರೋಗ್ಯ ಕಲ್ಯಾಣ, ಮಹಿಳಾ - ಯುವಜನ ಕಲ್ಯಾಣ, ಕಂಪ್ಯೂಟರ್ ತರಬೇತಿ, ಸಮಾಜಮುಖಿ ಸಾರ್ವಕಾಲಿಕ ಉಪಯುಕ್ತ ಸಾಹಿತ್ಯಿಕ ಪ್ರಕಟಣೆಗಳು ಸಂಘದ ಪ್ರಗತಿಯ ಮೈಲುಗಲ್ಲುಗಳಾಗಿವೆ.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಶಾಸ್ತ್ರೀಯ ಕನ್ನಡದಲ್ಲಿ ಸ್ನಾತಕೋತ್ತರ ಡಿಪ್ಲೊಮಾ, ಫೈನಾನ್ಸಿಯಲ್ ಅಕೌಂಟಿಂಗ್ ಅಂಡ್ ಆಡಿಟಿಂಗ್ ಮತ್ತು ಕಂಪ್ಯೂಟರ್ ಶಿಕ್ಷಣದಲ್ಲಿ ಡಿಪ್ಲೊಮಾ ಶಿಕ್ಷಣ ನೀಡಲಾಗುತ್ತಿದೆ. ನಾರಾಯಣ ನೇತ್ರಾಲಯದ ಸಹಕಾರದಿಂದ ಉಚಿತ ಕಣ್ಣು ಪರೀಕ್ಷೆ ಮತ್ತು ಪೊರೆ ಶಸ್ತ್ರಚಿಕಿತ್ಸೆ, ಶ್ರೀ ಜಯದೇವ ಹೃದ್ರೋಗ ಸಂಸ್ಥೆ ವತಿಯಿಂದ ಹೃದಯ ಪರೀಕ್ಷೆ ಮತ್ತು ಸಲಹೆ ಹಾಗೂ ಶ್ರೀ ಶಂಕರ ಕ್ಯಾನ್ಸರ್ ಫೌಂಡೇಷನ್ ಸಹಕಾರದಿಂದ ಕ್ಯಾನ್ಸರ್ ತಪಾಸಣಾ ಶಿಬಿರಗಳನ್ನು ನಡೆಸಿಕೊಂಡು ಬರಲಾಗುತ್ತಿದೆ.

ಬೆಂಗಳೂರು ದರ್ಶನ (೧೯೭೫), ಕೆಂಪೇಗೌಡನಗರ ದರ್ಶನ (೧೯೮೦), ಆಸ್ವಾದ- ಪ್ರೊ. ಎಂ.ವಿ. ಸೀತಾರಾಮಯ್ಯ ಅಭಿನಂದನಾ ಗ್ರಂಥ (೧೯೮೩), ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ (೧೯೯೩), ಬೆಂಗಳೂರು ದರ್ಶನ ಎರಡು ಬೃಹತ್ ಸಂಪುಟಗಳು (೨೦೦೫), ಉನ್ನತ ಅಧ್ಯಯನ ಮಾಲೆ, ಸುವರ್ಣ ಪುಸ್ತಕ ಮಾಲೆ - ಹೀಗೆ ಸಂಘವು

ಉತ್ತಮ ಸಾಹಿತ್ಯವನ್ನು ನಾಡಿಗೆ ಸಮರ್ಪಿಸಿದೆ. ಸಂಘದ ವಾರ್ಷಿಕ ಸಂಚಿಕೆ **'ಕಲಾವಿಕಾಸ',** ಉದಯಭಾನು ಉನ್ನತ ಅಧ್ಯಯನ ಪುಸ್ತಕ ಮಾಲಿಕೆಯಲ್ಲಿ ಇತ್ತೀಚೆಗೆ ಪ್ರಕಟವಾದ ಹಲವು ಕೃತಿಗಳು, **ಉದಯ ಸೌರಭ ತ್ರೈಮಾಸಿಕ**-ಸಂಘದ ಮುಖವಾಣಿ ಮುಂತಾದ ಪ್ರಕಟಣೆಗಳು ಸಂಘವನ್ನು ನಾಡಿನ ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರಗಳ ಮೂಲವಾಹಿನಿಯಲ್ಲಿ ನಿಲ್ಲಿಸಿವೆ.

ಉದಯಭಾನು ಕಲಾಸಂಘವು ಸಾರ್ವತ್ರಿಕ ಬದುಕನ್ನು ಕಟ್ಟಿಕೊಡುವ, ಬದುಕಿನ ಔನ್ನತ್ಯದ ಸಾಧನೆಗಾಗಿ ಶ್ರಮಿಸುತ್ತಿದೆ. ಈ ತಳಹದಿಯ ಪರಿಕಲ್ಪನೆಯೇ **'ಉದಯಭಾನು ಉನ್ನತ ಅಧ್ಯಯನ ಕೇಂದ್ರ'.** ಕೇಂದ್ರದಡಿಯಲ್ಲಿ ನಾಲ್ಕು ಅಧ್ಯಯನಾಂಗಗಳು ಕಾರ್ಯೋನ್ಮುಖವಾಗಿವೆ-**ಭಾಷೆ, ಸಾಹಿತ್ಯ-ಸಂಸ್ಕೃತಿ, ಸಮಾಜ ವಿಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ವಾಣಿಜ್ಯ ಮತ್ತು ನಿರ್ವಹಣೆ. ಈ ಕೇಂದ್ರದ ಗೌರವ ನಿರ್ದೇಶಕರಾಗಿ ಪ್ರೊ. ಎಚ್.ಆರ್. ರಾಮಕೃಷ್ಣ ರಾವ್ ಅವರು ಮಾರ್ಗದರ್ಶನ ಮಾಡುತ್ತಿದ್ದಾರೆ.** ಕನ್ನಡಕ್ಕೆ **ಅಭಿಜಾತ ಭಾಷಾ** ಗೌರವ ಪ್ರಾಪ್ತವಾಗಿರುವ ಸಂದರ್ಭದಲ್ಲಿ ಈ ಅಧ್ಯಯನಾಂಗಗಳ ಕ್ರಿಯಾಶೀಲತೆ ಕನ್ನಡದ ಬೆಳವಣಿಗೆಗೆ ಅಡಿಪಾಯವಾಗುವುದು. ಕಳೆದ ಐದು ವರ್ಷಗಳಲ್ಲಿ ಕೇಂದ್ರವು ಹತ್ತು – ಹಲವು ಕ್ರಿಯಾತ್ಮಕ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತಂದಿದೆ.

ಕರ್ನಾಟಕ ಸರ್ಕಾರ ಸಂಘದ ಸಾಧನೆಯನ್ನು ಮನಗಂಡು ೨೦೦೫ರಲ್ಲಿ **ರಾಜ್ಯ ಪ್ರಶಸ್ತಿಯನ್ನು** ನೀಡಿ ಗೌರವಿಸಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಘದ ನಗರ ಕಲ್ಯಾಣ ಚಟುವಟಿಕೆಗಳನ್ನು ಗುರುತಿಸಿ ಬಸವನಗುಡಿ ರಸ್ತೆಯ ಆಟದ ಮೈದಾನವೊಂದಕ್ಕೆ ೧೯೯೦ರಲ್ಲಿ **'ಉದಯಭಾನು ಕಲಾಸಂಘ ಆಟದ ಮೈದಾನ'** ಎಂದು ನಾಮಕರಣ ಮಾಡಿ ಪೌರ ಸನ್ಮಾನ ಸಲ್ಲಿಸಿದೆ.

ಸಂಘವು ೨೦೧೪-೨೦೧೫ರಲ್ಲಿ ತನ್ನ **ಸುವರ್ಣ ಮಹೋತ್ಸವವನ್ನು** ಆಚರಿಸುವ ಸಿದ್ಧತೆಯಲ್ಲಿ ತೊಡಗಿದೆ. ಅದಕ್ಕಾಗಿ **ಉದಯಭಾನು ಸುವರ್ಣ ಪುಸ್ತಕ ಮಾಲಿಕೆಯಾಗಿ** ಸಮಕಾಲೀನ ಸಾಧಕರ ೫೦ ಕೃತಿಗಳನ್ನು ಪ್ರಕಟಿಸಲು ಯೋಜಿಸಲಾಗಿದೆ. ಇದಕ್ಕೆ 'ಉದಯಭಾನು ಸುವರ್ಣ ಪುಸ್ತಕ ಮಾಲೆ' ಎಂದು ನಾಮಕರಣ ಮಾಡಲಾಗಿದೆ. ಈ ಮಾಲೆಯಡಿಯಲ್ಲಿ ಈಗಾಗಲೇ ಮೂವತ್ತೈದು ಮಂದಿ ಸಾಧಕರ ಬಗ್ಗೆ ಪುಸ್ತಕಗಳು ಪ್ರಕಟವಾಗಿವೆ. ಇದೀಗ ಎಂಟನೇ ಕಂತಿನ ಆರು ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಗ್ರಂಥಮಾಲೆಯ ಸಿದ್ಧತೆ ಹಾಗೂ ರಚನೆಗಳ ಹೊಣೆ ಹೊರಲು ಒಂದು ಸಂಪಾದಕ ಮಂಡಲಿ ರಚಿತವಾಗಿದೆ. ಪ್ರಧಾನ ಸಂಪಾದಕರು ಮತ್ತು ಮೂರು ಮಂದಿ ಸಂಪಾದಕರು ಇರುವ ಸಂಪಾದಕ ಸಮಿತಿಯೊಂದು ಕಾರ್ಯಶೀಲವಾಗಿದೆ. ನಮ್ಮ ಈ ಪ್ರಯತ್ನಕ್ಕೆ ನಾಡಿನ ಲೇಖಕ ಬಳಗ ತೆರೆದ ಮನಸ್ಸಿನಿಂದ ಸಹಕಾರ ನೀಡುತ್ತಿದೆ. ಗ್ರಂಥಗಳನ್ನು ರಚಿಸಲು ನಾವು ಕೇಳಿಕೊಂಡಾಗ ಬಹುತೇಕ ಕೇಳಿದವರೆಲ್ಲ ಸಹಕರಿಸಲು ಒಪ್ಪಿ ನಮ್ಮ ಉತ್ಸಾಹ ಉಕ್ಕುವಂತೆ ಮಾಡಿದ್ದಾರೆ.

ಇದೇ ಸಂದರ್ಭದಲ್ಲಿ **'ಬೆಂಗಳೂರು ದರ್ಶನ'** (೨೦೦೫) ಎರಡು ಬೃಹತ್ ಸಂಪುಟಗಳನ್ನು ಪರಿಷ್ಕರಿಸಿ ಪುನರ್ ಮುದ್ರಿಸುವ ಕಾರ್ಯ ಪ್ರಗತಿಯಲ್ಲಿದೆ. ಇದಕ್ಕಾಗಿ

ಸಲಹಾ ಮಂಡಳಿ–ಸಂಪಾದಕ ಮಂಡಳಿ ರಚನೆಯಾಗಿದೆ. ಈ ಗ್ರಂಥ ಕನ್ನಡಕ್ಕೆ ಸಮಕಾಲೀನ ಮಹತ್ವದ ಕೊಡುಗೆಯಾಗುವುದೆಂಬುದು ನಮ್ಮ ನಿರೀಕ್ಷೆ.

ಸಂಘದ ಎಲ್ಲ ಕಾರ್ಯಸಾಧನೆಗಳ ಹಿಂದೆ ಪದಾಧಿಕಾರಿಗಳ, ಕಾರ್ಯಕಾರಿ ಸಮಿತಿಯ ಹಾಗೂ ಸದಸ್ಯರ ಸಹಕಾರ ಮತ್ತು ಶ್ರಮದಾನ ಸದಾ ಬತ್ತದ ಚಿಲುಮೆಯಾಗಿ ಹರಿಯುತ್ತಿದೆ. ಕರ್ನಾಟಕ ಸರ್ಕಾರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಜನಪ್ರತಿನಿಧಿಗಳು, ಉಳ್ಳವರ ಹಾಗೂ ಅಭಿಮಾನಿಗಳ ಸಹಕಾರ ನಮ್ಮ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ಇಂತಹ ಉನ್ನತ ಸಾಧನೆಗೆ ನೆರವಾದ, ಪ್ರತ್ಯಕ್ಷವಾಗಿ–ಪರೋಕ್ಷವಾಗಿ ನಮ್ಮ ಜೊತೆಗೂಡಿದ ಎಲ್ಲಾ ಮಹನೀಯರಿಗೂ ನಾವು ಆಭಾರಿಗಳಾಗಿದ್ದೇವೆ.

ನಮ್ಮ ಸಂಸ್ಥೆಯ ಸುವರ್ಣ ಮಹೋತ್ಸವದ ಆಚರಣೆಯ ವರ್ಷದಲ್ಲಿ ಏಳನೆಯ ಕಂತಿನ ಐದು ಪುಸ್ತಕಗಳ ಬಿಡುಗಡೆಯ ಸಂಭ್ರಮ ಮುಗಿದು ಈಗ ಎಂಟನೆಯ ಕಂತು ಬಿಡುಗಡೆಗೊಳ್ಳುತ್ತಲಿದೆ. ಅಂದುಕೊಂಡಂತೆಯೇ ಈ ಕಾರ್ಯ ಸಾಗಿರುವುದು ನಮಗೆ ತೃಪ್ತಿ ತಂದಿದೆ.

ಪುಸ್ತಕ ಪ್ರಕಟಣೆಗೆ ಸಾಧಕ ಮಹನೀಯರು ಕೃಪೆಯಿಟ್ಟು ಒಪ್ಪಿಗೆ ನೀಡಿರುವುದು ನಮಗೆ ಧನ್ಯತಾ ಭಾವನೆ ಮೂಡಿಸಿದೆ. ಈ ಸಾಧಕರ ಕೃತಿಗಳನ್ನು ಸಿದ್ಧಪಡಿಸಿದ ಲೇಖಕರು ಶ್ರಮವಹಿಸಿ ಉಪಕರಿಸಿದ್ದಾರೆ. ಇವರಿಗೆ ನಮ್ಮ ಆತ್ಮೀಯ ವಂದನೆಗಳು.

ಈ ಪುಸ್ತಕಗಳಿಗೆ ಅಂದವಾದ ಮುಖಚಿತ್ರ ರಚಿಸಿದ ಶ್ರೀ ಜಿ. ಅರುಣ್‌ಕುಮಾರ್ ಮತ್ತು ಮುದ್ರಣ ಕಾರ್ಯ ನಿರ್ವಹಿಸಿದ ಇಳಾ ಮುದ್ರಣದವರಿಗೆ ನಮ್ಮ ವಂದನೆಗಳು. ಸಂಪಾದಕ ಸಮಿತಿಯ ಎಲ್ಲ ಸದಸ್ಯರಿಗೆ ಹಾಗೂ ಲೇಖಕರಿಗೆ ನಮ್ಮ ವಂದನೆಗಳು.

ಎಚ್.ಆರ್. ರಾಮಕೃಷ್ಣ ರಾವ್
ಗೌರವ ನಿರ್ದೇಶಕರು
ಉದಯಭಾನು ಉನ್ನತ
ಅಧ್ಯಯನ ಕೇಂದ್ರ

ಎಂ. ನರಸಿಂಹ
ಸಂಸ್ಥಾಪಕ
ಗೌರವ ಕಾರ್ಯದರ್ಶಿ

ಬಿ. ಕೃಷ್ಣ
ಅಧ್ಯಕ್ಷರು

ಉದಯಭಾನು ಕಲಾಸಂಘ

ಸಂಪಾದಕರ ನುಡಿ

ಉದಯಭಾನು ಕಲಾಸಂಘವು ಕಳೆದ ಐವತ್ತು ವರ್ಷಗಳಿಂದ ಸಾರ್ವಜನಿಕ ಸೇವೆಯಲ್ಲಿ ನಿರತವಾಗಿರುವ ಸಂಸ್ಥೆ. ತಳವರ್ಗದ ಜನಗಳೇ ಹೆಚ್ಚಿರುವ ಜಾಗದಲ್ಲಿ ಕಾರ್ಯಶೀಲವಾಗಿರುವ ಈ ಸಂಸ್ಥೆಯು ಯುವ ಜನಾಂಗವು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಹಾಗೂ ಸಮಾಜಕ್ಕೆ ಉಪಯುಕ್ತವಾಗಲು ಅನುಕೂಲವಾಗುವಂತಹ ಚಟುವಟಿಕೆಗಳಲ್ಲಿ ತೊಡಗಿದೆ. 'ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ' ಹಾಗೂ 'ಬೆಂಗಳೂರು ದರ್ಶನ'ದಂತಹ ಬೃಹತ್ ಮಾಹಿತಿಪೂರ್ಣ ಕೃತಿಗಳನ್ನು ಹೊರತರುವ ಮೂಲಕ ಮಾದರಿ ಪ್ರಕಟಣೆಗಳನ್ನು ಮಾಡಿದೆ; ಜೊತೆಗೆ ಪ್ರೊ. ಎಂವಿಸೀ ಅವರ ಅಭಿನಂದನ ಗ್ರಂಥ 'ಆಸ್ವಾದ' ಮತ್ತಿತರ ಸಾರ್ವಜನಿಕ ಮಹತ್ವದ ಗ್ರಂಥಗಳನ್ನು ಪ್ರಕಟಿಸಿದೆ. ನಾನಾ ಬಗೆಯ ಸಾಂಸ್ಕೃತಿಕ ಕಾರ್ಯಗಳನ್ನು ಆಯೋಜಿಸುತ್ತ ಸುತ್ತಲೂ ಲವಲವಿಕೆಯ ವಾತಾವರಣವನ್ನು ಸೃಷ್ಟಿಸಿದೆ. ಸುಸಜ್ಜಿತವಾದ ಸಭಾಂಗಣವನ್ನು ಹೊಂದಿರುವ ಸಂಸ್ಥೆಯಲ್ಲಿ ಪ್ರತಿನಿತ್ಯವೂ ಒಂದಿಲ್ಲೊಂದು ಸಾಂಸ್ಕೃತಿಕ ಕಾರ್ಯಕ್ರಮವು ಜರುಗುತ್ತಲೇ ಇರುತ್ತದೆ. ಸಾಮಾನ್ಯ ಜನತೆಗಾಗಿ ಪ್ರತಿದಿನ ಆರೋಗ್ಯ ತಪಾಸಣೆ ಮತ್ತು ಔಷಧಿ ವಿತರಣೆಯನ್ನು ಉಚಿತವಾಗಿ ಮಾಡುತ್ತಿದೆ; ಅವಕಾಶವಂಚಿತ ವಿದ್ಯಾರ್ಥಿಗಳಿಗಾಗಿ ನಾನಾ ಕೋರ್ಸುಗಳಿಗೆ ಉಚಿತ ಪಾಠಪ್ರವಚನಗಳನ್ನು ಏರ್ಪಡಿಸುತ್ತಿದೆ.

ಕೆಲ ವರ್ಷಗಳ ಹಿಂದೆ ಉನ್ನತ ಅಧ್ಯಯನ ಕೇಂದ್ರವೊಂದನ್ನು ಸ್ಥಾಪಿಸಿ, ಸಾಹಿತ್ಯ-ಸಂಸ್ಕೃತಿ, ವಿಜ್ಞಾನ-ತಂತ್ರಜ್ಞಾನ, ವಾಣಿಜ್ಯ-ನಿರ್ವಹಣೆ ಹಾಗೂ ಸಮಾಜ ವಿಜ್ಞಾನಗಳ ಕ್ಷೇತ್ರದಲ್ಲಿ ಹೆಚ್ಚಿನದನ್ನು ಸಾಧಿಸಹೊರಟಿದೆ: ಪ್ರೊ. ಎಚ್.ಆರ್. ರಾಮಕೃಷ್ಣರಾವ್ ಅವರು ಈ ಕೇಂದ್ರದ ಗೌರವ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಳೆದ ವರ್ಷದಿಂದ ಶಾಸ್ತ್ರೀಯ ಕನ್ನಡ (ಹಳಗನ್ನಡ), ಕಂಪ್ಯೂಟರ್, ಮಾರ್ಕೆಟಿಂಗ್ ಹಾಗೂ ಅಕೌಂಟಿಂಗ್ ವಿಷಯಗಳಲ್ಲಿ ಡಿಪ್ಲೊಮಾ ತರಗತಿಗಳನ್ನು ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯದ ಮಾನ್ಯತೆಯೊಡನೆ ಪ್ರಾರಂಭಿಸಿದೆ. ಈ ಎಲ್ಲ ಕಾರ್ಯಗಳಲ್ಲಿ ಸಹಕರಿಸಿರುವ ನಾಡಿನ ಹಿರಿಯ ಹಾಗೂ ಕ್ರಿಯಾಪೂರ್ಣ ಚೇತನಗಳ ಸಾಲನ್ನು ಕಂಡಾಗ ಸಂಸ್ಥೆಯು ಸಮಾಜದಲ್ಲಿ ಗಳಿಸಿರುವ ಸ್ಥಾನದ ಬಗ್ಗೆ ಹೆಮ್ಮೆಯುಂಟಾಗುವುದು ಸಹಜ.

ಈ ಸಂಸ್ಥೆ ಆರಂಭಗೊಂಡದ್ದು ೧೯೬೫ರಲ್ಲಿ, ಸಹಜವಾಗಿಯೇ ಸಣ್ಣ ಪ್ರಮಾಣದಲ್ಲಿ; ತನ್ನ ಐವತ್ತು ವರ್ಷಗಳ ಇರುವಿಕೆಯಲ್ಲಿ ಕ್ರಮೇಣ ವಿಕಾಸಗೊಳ್ಳುತ್ತ ಸುವರ್ಣ ಮಹೋತ್ಸವದತ್ತ ಈಗ ದಾಪುಗಾಲು ಹಾಕುತ್ತಿದೆ. ಆ ಸನ್ನಿವೇಶವುಂಟಾಗುವುದು ೨೦೧೫ರಲ್ಲಿ. ಆ ಹೆಮ್ಮೆಯ ಕ್ಷಣವನ್ನು ಚಿರಸ್ಮರಣೀಯವಾಗಿಸಲು ಸಂಸ್ಥೆಯು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಅವುಗಳಲ್ಲಿ ಮುಖ್ಯವಾದ ಒಂದು ಎಂದರೆ ಐವತ್ತು ಕಿರುಹೊತ್ತಗೆಗಳ ಪ್ರಕಟಣೆ. ವಿವಿಧ ಕ್ಷೇತ್ರಗಳ ಐವತ್ತು ಮಂದಿ ಕನ್ನಡ ನಾಡಿನ ಸಮಕಾಲೀನ ಸಾಧಕರ ಬದುಕು ಮತ್ತವರ ಕೊಡುಗೆಗಳ ಬಗ್ಗೆ ಆಯಾ ಕ್ಷೇತ್ರದ ಪರಿಣತರಿಂದ ಗ್ರಂಥಗಳನ್ನು ಬರೆಸಿ ಪ್ರಕಟಿಸುವುದು. ಈ ಸಾಧಕರಲ್ಲಿ ಬಹುಮಂದಿ ನಮ್ಮ ಕಣ್ಣೆದುರಿಗೇ ಇರುವವರು, ಮತ್ತೆ ಕೆಲವರು ಕೆಲಕಾಲದ ಹಿಂದಷ್ಟೇ ಕಣ್ಮರೆಯಾದವರು. ಇದಕ್ಕೆ 'ಉದಯಭಾನು ಸುವರ್ಣ ಪುಸ್ತಕ ಮಾಲೆ' ಎಂಬ ಹೆಸರನ್ನು ನೀಡಲಾಗಿದೆ. ಈ ಸಾಧಕರು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದವರಾಗಿರಬೇಕು; ಅವರ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆಯನ್ನು ಕೊಟ್ಟಿರಬೇಕು. ಅವರ ಬಗ್ಗೆ ಜನರಿಗೆ ಸ್ಥೂಲವಾಗಿ ತಿಳಿದಿರ ಬಹುದಾದರೂ ಅವರ ಕಾರ್ಯವೈಶಿಷ್ಟ್ಯದ ವಿವರಣೆ ನೀಡುವುದು; ಮತ್ತೆ ಕೆಲವರು ಎಲೆಮರೆಯ ಕಾಯಿಯಂತಿದ್ದುಕೊಂಡು ಜನರ ಗಮನದಿಂದ ದೂರವೇ ಉಳಿದವರಿರ ಬಹುದು. ಅಂಥವರ ಬದುಕು–ಸಾಧನೆಗಳ ಬಗ್ಗೆ ತಿಳಿವಳಿಕೆ ನೀಡುವುದು–ಈ ಮಾಲೆಯ ಉದ್ದೇಶ. ಸುಮಾರು ೬೦–೭೦ ಪುಟಗಳಷ್ಟು ಗಾತ್ರದ ಪುಸ್ತಕಗಳಲ್ಲಿ ಸಾಧಕರ ಬದುಕಿನ ಮುಖ್ಯ ವಿವರಗಳು ಮೊದಲಲ್ಲಿದ್ದು, ಆ ಮುಂದೆ ಅವರ ಸಾಧನೆಯ ಮಹತ್ತನ್ನು ಮನವರಿಕೆ ಮಾಡಿಕೊಡುವ ನಿರೂಪಣೆಯಿರುತ್ತದೆ. ಒಂದು ಬಾರಿಗೆ ಐದೈದರಂತೆ ಗ್ರಂಥಗಳನ್ನು ಸಿದ್ಧಪಡಿಸಿ ನಾಡಿನ ಬೇರೆ ಬೇರೆ ಕಡೆಗಳಲ್ಲಿ (ವಿಶೇಷವಾಗಿ ಸಾಧಕರ ಕ್ಷೇತ್ರಗಳಲ್ಲಿ/ಜಿಲ್ಲಾ ಕೇಂದ್ರಗಳಲ್ಲಿ) ಬಿಡುಗಡೆಗೊಳಿಸುವುದು. ಒಂದು ವರ್ಷದಲ್ಲಿ, ಅಂದರೆ ಸಂಸ್ಥೆಯ ಸುವರ್ಣ ಮಹೋತ್ಸವದ ಮುಕ್ತಾಯದ ಹೊತ್ತಿಗೆ ಐವತ್ತೂ ಪುಸ್ತಕಗಳ ರಚನೆ, ಮುದ್ರಣ ಹಾಗೂ ಲೋಕಾರ್ಪಣೆ ಮುಗಿಯಬೇಕೆಂಬುದು ಅಪೇಕ್ಷೆ. ಆ ಹೊತ್ತಿಗೆ 'ಸುವರ್ಣ ಪುಸ್ತಕ ಮಾಲೆ' ಅರ್ಪಣೆಯಾಗಬೇಕೆಂಬುದು ಸಂಘದ ಆಶಯ.

ಈ ಗ್ರಂಥಮಾಲೆಯ ಸಿದ್ಧತೆ ಹಾಗೂ ರಚನೆಗಳ ಹೊಣೆ ಹೊರಲು ಒಂದು ಸಂಪಾದಕ ಸಮಿತಿ ರಚಿತವಾಗಿದೆ. ಪ್ರಧಾನ ಸಂಪಾದಕರೂ, ಮೂರು ಮಂದಿ ಸಂಪಾದಕರು ಇರುವ ಸಂಪಾದಕ ಸಮಿತಿಯೊಂದು ಕಾರ್ಯಶೀಲವಾಗಿದೆ. ನಮ್ಮ ಈ ಪ್ರಯತ್ನಕ್ಕೆ ನಾಡಿನ ಲೇಖಕ ಬಳಗ ತೆರೆದ ಮನಸ್ಸಿನಿಂದ ಸಹಕಾರ ನೀಡುತ್ತಿದೆ. ಗ್ರಂಥಗಳನ್ನು ರಚಿಸಲು ನಾವು ಕೇಳಿಕೊಂಡಾಗ ಬಹುತೇಕ ಕೇಳಿದವರೆಲ್ಲ ಸಹಕರಿಸಲು ಒಪ್ಪಿ ನಮ್ಮ ಉತ್ಸಾಹ ಉಕ್ಕುವಂತೆ ಮಾಡಿದ್ದಾರೆ.

ಈಗ ಎಂಟನೇ ಕಂತಿನ ಆರು ಪುಸ್ತಕಗಳ ಬಿಡುಗಡೆಯ ಸಂಭ್ರಮ. ಅಂದು ಕೊಂಡಂತೆಯೇ ಈ ಕಾರ್ಯ ಸಾಗಿರುವುದು ನಮಗೆ ತೃಪ್ತಿ ತಂದಿದೆ. ಈಗ ಬಿಡುಗಡೆ ಯಾಗುತ್ತಿರುವ ಏಳನೆಯ ಕಂತಿನ ಪುಸ್ತಕಗಳೆಂದರೆ :

೧) ಕ್ಯಾಪ್ಟನ್ ಜಿ.ಆರ್. ಗೋಪಿನಾಥ್ ಲೇಖಕರು : ಶಶಿಕಾಂತ ಎಂ. ಮುಮ್ಮಿಗಟ್ಟಿ
೨) ಪ್ರೊ. ಎಮ್.ಪಿ.ಎಲ್. ಶಾಸ್ತ್ರಿ ಲೇಖಕರು : ಡಾ. ಎಸ್.ಎನ್. ಪ್ರಾಣೇಶ್
೩) ಡಾ. ಎಂ.ಎಚ್. ಮರಿಗೌಡ ಲೇಖಕರು : ಪ್ರೊ. ಆರ್. ವಸಂತ್ ಕುಮಾರ್
೪) ಶ್ರೀನಿವಾಸ ಹಾವನೂರ ಲೇಖಕರು : ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ
೫) ಬಿ. ರಾಚಯ್ಯ ಲೇಖಕರು : ನಾಗೇಶ್ ಸೋಸ್ಲೆ
೬) ಪ್ರೊ.ಎಸ್.ಕೆ. ರಾಮಚಂದ್ರರಾಯರು ಲೇಖಕರು : ಡಾ. ಜಿ.ಬಿ. ಹರೀಶ್

ಪುಸ್ತಕ ಪ್ರಕಟಣೆಗೆ ಸಾಧಕ ಮಹನೀಯರು ಕೃಪೆಯಿಟ್ಟು ಒಪ್ಪಿಗೆ ನೀಡಿರುವುದು ನಮಗೆ ಧನ್ಯತಾ ಭಾವನೆ ಮೂಡಿಸಿದೆ. ಈ ಸಾಧಕರ ಕೃತಿಗಳನ್ನು ಸಿದ್ಧಪಡಿಸಿದ ಲೇಖಕರು ಶ್ರಮವಹಿಸಿ ಉಪಕರಿಸಿದ್ದಾರೆ. ಈ ಕೃತಿಯನ್ನು ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ ಅವರು ಕೃಪೆಯಿಟ್ಟು ಬರೆದುಕೊಟ್ಟು ಉಪಕರಿಸಿದ್ದಾರೆ. ಇವರಿಗೆ ನಮ್ಮ ಆತ್ಮೀಯ ವಂದನೆಗಳು.

ಈ ಪುಸ್ತಕಗಳಿಗೆ ಅಂದವಾದ ಮುಖಚಿತ್ರ ರಚಿಸಿದ ಶ್ರೀ ಜಿ. ಅರುಣ್‌ಕುಮಾರ್ ಮತ್ತು ಪುಟ ವಿನ್ಯಾಸ ಹಾಗೂ ಮುದ್ರಣ ಕಾರ್ಯನಿರ್ವಹಿಸಿದ ಇಳಾ ಮುದ್ರಣದವರಿಗೆ ನಮ್ಮ ವಂದನೆಗಳು. ಸಂಪಾದಕ ಸಮಿತಿಯ ಎಲ್ಲ ಸದಸ್ಯರಿಗೆ ಹಾಗೂ ನಮ್ಮ ಮೇಲೆ ಭರವಸೆ ಇಟ್ಟು ಈ ಕಾರ್ಯವನ್ನು ನಮ್ಮಿಂದ ಮಾಡಿಸುತ್ತಿರುವ ಸಂಘದ ಆಡಳಿತ ವರ್ಗಕ್ಕೆ ನಮ್ಮ ವಂದನೆಗಳು.

ಬೆಂಗಳೂರು

ಡಾ. ಪಿ.ವಿ. ನಾರಾಯಣ
ಪ್ರಧಾನ ಸಂಪಾದಕರು
ಉದಯಭಾನು ಸುವರ್ಣ ಪುಸ್ತಕ ಮಾಲೆ

ಲೇಖಕರ ಮಾತು

ಡಾ. ಶ್ರೀನಿವಾಸ ಹಾವನೂರರು ಈ ನಾಡು ಕಂಡ ಅಪರೂಪದ ಸಂಶೋಧಕರು. ಇಡಿಯ ಜೀವಮಾನವನ್ನು ಸಂಶೋಧನೆ – ಸಾಹಿತ್ಯ ರಚನೆ – ಗ್ರಂಥಾಲಯಗಳ ಅಭಿವೃದ್ಧಿಗೆ ಮುಡುಪಿಟ್ಟವರು. ಸುಮಾರು ಹದಿನೈದು ವರ್ಷಗಳ ಕಾಲ ಅವರ ಒಡನಾಟದಲ್ಲಿ ನಾನು ಪ್ರತಿ ಕ್ಷಣವೂ ಹಲವಾರು ಸಂಗತಿಗಳನ್ನು ಕಲಿತಿದ್ದೇನೆ. ನನ್ನ ಬಾಳಿನ ಹಲವು ಪ್ರಮುಖ ಘಟ್ಟಗಳಲ್ಲಿ ಅವರು ಊರೆಗೋಲಾಗಿ ನಿಂತು ನನ್ನನ್ನು ಕಾಪಾಡಿದ್ದಾರೆ. ತಪ್ಪು ಮಾಡಿದಾಗ ಗದರಿಸಿ ಬುದ್ಧಿ ಹೇಳಿದ್ದಾರೆ. ಅವರ ನಿರೀಕ್ಷೆಯ ಮಟ್ಟಕ್ಕೆ ಕೆಲಸ ಮಾಡಿದಾಗ ಸಂಕೋಚದಿಂದ ಕುಗ್ಗಿ ಹೋಗುವಷ್ಟು ಹೊಗಳಿಯೂ ಇದ್ದಾರೆ. ಹತ್ತಾರು ವೇದಿಕೆಗಳಿಗೆ ನನ್ನನ್ನು ಪರಿಚಯಿಸಿ ಇತರೆಡೆಗಳಲ್ಲಿಯೂ ಮನ್ನಣೆ ದೊರೆಯುವಂತೆ ಮಾಡಿದ್ದಾರೆ. ಇನ್ನು ನಮ್ಮ ಕುಟುಂಬವರ್ಗಕ್ಕಂತೂ ಅವರು ಅಕ್ಕರೆಯ ಅಜ್ಜ! ಇಂತಹ ಮಹನೀಯರ ಜೀವನ–ಸಾಧನೆಗಳ ಸ್ಥೂಲ ಚಿತ್ರಣವನ್ನು ರಚಿಸಲು ಅವಕಾಶ ದೊರೆತದ್ದು ನನ್ನ ಸುಕೃತ. ಇದಕ್ಕೆ ಅವಕಾಶ ಮಾಡಿಕೊಟ್ಟ ಉದಯಭಾನು ಸುವರ್ಣ ಪುಸ್ತಕ ಮಾಲೆಯ ಪ್ರಧಾನ ಸಂಪಾದಕರಾದ ಡಾ.ಪಿ.ವಿ. ನಾರಾಯಣ ರವರಿಗೆ ನಾನು ಅತ್ಯಂತ ಆಭಾರಿ.

ಹಾವನೂರರು ಹಲವು ಕಡೆಗಳಲ್ಲಿ ತಮ್ಮ ಬದುಕು ಮತ್ತು ಬರಹಗಳ ಬಗೆಗೆ ಕ್ವಚಿತ್ತಾಗಿ ದಾಖಲಿಸಿದ್ದಾರೆ. ಹತ್ತಾರು ಫೈಲುಗಳ ತುಂಬಾ ತಮ್ಮ ಬರಹಗಳ ಹಸ್ತಪ್ರತಿಗಳು ಹಾಗೂ ಮುದ್ರಿತ ಪ್ರತಿಗಳನ್ನು ಕಾಪಿಟ್ಟದ್ದಾರಲ್ಲದೆ ಸ್ವಲ್ಪಮಟ್ಟಿಗೆ ಅವುಗಳ ಸೂಚಿಯನ್ನೂ ಸಿದ್ಧಪಡಿಸಿದ್ದಾರೆ. ಬಹುಮಟ್ಟಿಗೆ ಈ ಎಲ್ಲ ಮಾಹಿತಿಯನ್ನು ನಾನು ಬಳಸಿಕೊಂಡಿದ್ದೇನೆ. ಇದಕ್ಕೆ ದಯವಿಟ್ಟು ಅನುಮತಿಸಿದ ಶ್ರೀಮತಿ ಭಾರತಿ ಹಾವನೂರ ಮತ್ತು ಮಗಳು ಶ್ರೀಮತಿ ನಿವೇದಿತಾರಿಗೆ ಧನ್ಯವಾದಗಳು. ಇಬ್ಬರೂ ಪ್ರತಿಬಾರಿ ನಾನು ನೀಡಿದ ತೊಂದರೆಯನ್ನು ಸಹಿಸಿಕೊಂಡಿದ್ದಾರೆ ಅಲ್ಲದೆ ಅಪರೂಪದ ಛಾಯಾಚಿತ್ರಗಳನ್ನು ನೀಡಿ ಕೃತಿಯ ಮೌಲಿಕತೆಯನ್ನು ಹೆಚ್ಚಿಸಿದ್ದಾರೆ.

2008ರಲ್ಲಿ ಪ್ರಕಟವಾದ ಸಂ–ಕಥನವನ್ನು ಸಿದ್ಧಪಡಿಸುವಾಗ ಹಾವನೂರರು ನೀಡಿದ್ದ ಹಲವು ಮಾಹಿತಿಯನ್ನೂ ಇಲ್ಲಿ ಉಪಯೋಗಿಸಿಕೊಳ್ಳಲಾಗಿದೆ. ಪೂರಕ

ಮಾಹಿತಿಯನ್ನು ಒದಗಿಸಿದ ಮುಂಬೈನ ಡಾ. ಬಿ. ಲೀಲಾ, ಬೆಂಗಳೂರಿನವರೇ ಆದ ಶ್ರೀ ವಿ. ಕೃಷ್ಣ, ಹಾವನೂರರ ಹಿರಿಯಮಗ ಶ್ರೀ ನಾಗೇಶ ಹಾವನೂರ, ಮುಖಪುಟದ ಛಾಯಾಚಿತ್ರವನ್ನು ಬಳಸಿಕೊಳ್ಳಲು ಅನುಮತಿಸಿದ ಮಂಗಳೂರಿನ ಶ್ರೀ 'ಯಜ್ಞ', ಹಾವನೂರರೊಂದಿಗೆ ಕೆ.ಟಿ.ಸಿ.ಯಲ್ಲಿ ಕಳೆದ ಮಧುರ ಕ್ಷಣವನ್ನು ಸೆರೆಹಿಡಿದ ನನ್ನ ಮಗಳು ಕೆ.ಎಸ್. ಅನನ್ಯ ಮುಂತಾದವರಿಗೆಲ್ಲ ನನ್ನ ನಮನಗಳು.

ತಮ್ಮ ಸುವರ್ಣ ಪುಸ್ತಕ ಮಾಲೆಯಲ್ಲಿ ಈ ಕೃತಿಯನ್ನು ಪ್ರಕಟಿಸುತ್ತಿರುವ ಉದಯಭಾನು ಕಲಾಸಂಘದ ಎಲ್ಲ ಪದಾಧಿಕಾರಿಗಳಿಗೆ ಅದರಲ್ಲಿಯೂ ವಿಶೇಷವಾಗಿ ಸಂಸ್ಥಾಪಕ ಗೌರವ ಕಾರ್ಯದರ್ಶಿಗಳಾದ ಶ್ರೀ ಎಂ.ನರಸಿಂಹರವರು ಹಾಗೂ ಗೆಳೆಯ ಅನಿಲ್ ಕುಮಾರ್‌ರವರಿಗೆ ನಾನು ಕೃತಜ್ಞ. ಅಚ್ಚುಕಟ್ಟಾಗಿ ಮುದ್ರಿಸಿರುವ ಇಳಾ ಮುದ್ರಣಾಲಯದ ಒಡೆಯರಾದ ಶ್ರೀ ಬಿ. ಗುರುಮೂರ್ತಿ ಹಾಗೂ ಅವರ ಸಿಬ್ಬಂದಿ ವರ್ಗಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳು.

ಡಾ. ಎಸ್.ಎಲ್. ಶ್ರೀನಿವಾಸ ಮೂರ್ತಿ

ಅಧ್ಯಾಯ – ೧

ಜೀವನ ವೃತ್ತಾಂತ

೧೯ನೇ ಶತಮಾನದಲ್ಲಿ ಕನ್ನಡ ನಾಡಿನಲ್ಲಿ ನಡೆದ ಅನೇಕ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆಗಳ ವಿವರಗಳನ್ನು ವಿದೇಶಗಳ ವಿವಿಧ ಗ್ರಂಥ ಭಂಡಾರಗಳಲ್ಲಿ ಅಡಗಿರುವ ಅಪರೂಪದ ದಾಖಲೆಗಳ ಆಧಾರದಿಂದ ನಿರೂಪಿಸಿದ ಗಣ್ಯವಿದ್ವಾಂಸರು ಡಾ. ಶ್ರೀನಿವಾಸ ಹಾವನೂರ. ಹೊಸಗನ್ನಡ ಸಾಹಿತ್ಯದ ಉಗಮವನ್ನು ಕುರಿತಂತೆ ಅವರು ನಡೆಸಿರುವ ಸಂಶೋಧನೆ ಅವರನ್ನು ಖ್ಯಾತನಾಮರನ್ನಾಗಿಸಿದೆ. ಕನ್ನಡ ಪುಸ್ತಕೋದ್ಯಮ, ಪತ್ರಿಕೋದ್ಯಮ, ಸಾಂಸ್ಕೃತಿಕ ಇತಿಹಾಸ ಮತ್ತು ವಿಶೇಷವಾಗಿ ಸಾಹಿತ್ಯಕ ಕೃತಿಗಳ ವಿಶ್ಲೇಷಣೆಗೆ ಕಂಪ್ಯೂಟರ್‌ನ್ನು ಬಳಸಿ ಅವರು ನಡೆಸಿರುವ ಸಂಶೋಧನೆಗಳು ಬಹಳ ಬೆಲೆಯುಳ್ಳವು. ಸಣ್ಣಕತೆ, ವಿಮರ್ಶೆ, ಪ್ರಬಂಧ, ಕೃತಿ ಸಂಪಾದನೆ, ಕಾದಂ–ಕಥನ, ಹರಟೆ ಗ್ರಂಥ ಸಂಗ್ರಹ, ಅಂಕಣ ಬರಹ, ವ್ಯಕ್ತಿಚಿತ್ರ, ಬಾಲಸಾಹಿತ್ಯ, ಅನುವಾದ ಮುಂತಾದ ಸೃಜನಶೀಲ ಸಾಹಿತ್ಯ ಕ್ಷೇತ್ರದಲ್ಲಿಯೂ ಅವರು ಕೃಷಿ ಮಾಡಿ ನಾಡಿನ ಗಣ್ಯ ಲೇಖಕರೆನಿಸಿದ್ದಾರೆ.

ಪೂರ್ವಿಕರು

'ಹಾವನೂರ' ಎಂಬ ಅಡ್ಡ ಹೆಸರು ಇದ್ದರೂ ಶ್ರೀನಿವಾಸರು ಮೂಲತಃ ಗಲಗಲಿ ಮನೆತನದವರು. ಈ ಮನೆತನ ಮಧ್ಯಯುಗೀನ ಕಾಲದಿಂದಲೂ ಕ್ಷಾತ್ರ ಹಾಗೂ ವಿದ್ವತ್ ಪರಂಪರೆಗೆ ಹೆಸರಾದದ್ದು. ೧೭ನೇ ಶತಮಾನದಲ್ಲಿ ಬದುಕಿದ್ದ ಶ್ರೀಪತಿರಾಯ ಮತ್ತು ನರಸಿಂಗರಾಯ ಎಂಬ ಸೋದರರು ಈ ಮನೆತನದ ಮೂಲಪುರುಷರೆಂದು ಐತಿಹ್ಯ. ಇವರಿಬ್ಬರೂ ಬ್ರಾಹ್ಮಣರಾಗಿದ್ದರೂ ವಿಜಾಪುರದ ಸುಲ್ತಾನರ ಸೈನ್ಯದಲ್ಲಿ ಅಧಿಕಾರಿ ಗಳಾಗಿದ್ದರು. ಯಾದವಾಚಾರ್ಯರೆಂಬ ವೈಷ್ಣವ ಯತಿಗಳಿಂದ ಪ್ರೇರಿತರಾಗಿ ಕ್ಷಾತ್ರವೃತ್ತಿಯನ್ನು ತೊರೆದು ಇವರು ವೈದಿಕರಾದರಂತೆ. ಮುದ್ಗಲಾಚಾರ್ಯರು, ಕೂರ್ಮಾಚಾರ್ಯರು ಮುಂತಾದವರು ಈ ಪರಂಪರೆಯಲ್ಲಿ ಕಂಡುಬರುವ ಪ್ರಮುಖ ವ್ಯಕ್ತಿಗಳು.

ಮೊದಲಿಗೆ ಗಲಗಲಿ ಮನೆತನದವರು ಈಗಿನ ಹಾವೇರಿ ಜಿಲ್ಲೆಯ ಕರ್ಜಗಿ ಎಂಬ ಗ್ರಾಮದಲ್ಲಿ ನೆಲೆಸಿ ಕಾಲಕ್ರಮೇಣ ಕರ್ನಾಟಕದ ಇತರ ಭಾಗಗಳಿಗೆ ವ್ಯಾಪಿಸಿದರು. ಅವರಲ್ಲಿ ಗಲಗಲಿ ಸುಬ್ಬಣ್ಣಾಚಾರ್ಯರೆನ್ನುವವರು ೧೯ನೇ ಶತಮಾನದ ಆದಿಭಾಗದಲ್ಲಿ ತುಂಗಭದ್ರಾ ನದಿಯ ದಂಡೆಯ ಮೇಲಿನ ಪುಟ್ಟಗ್ರಾಮವಾದ ಹಾವನೂರಿಗೆ ಬಂದು ನೆಲೆಸಿದರು. ಪೇಶ್ವೆಗಳ ಆಳ್ವಿಕೆಯ ಕಾಲದಲ್ಲಿ ಹನುಮಂತಗೌಡ ಎಂಬ ಪಾಳೇಗಾರ ಈ ಊರನ್ನು

ಸ್ಥಾಪಿಸಿದ ಎಂದು ನಂಬಿಕೆ. ಈ ಗ್ರಾಮದ ವಿಶೇಷತೆಯೆಂದರೆ ಇಲ್ಲಿನ ವಾದಿರಾಜರ ಬೃಂದಾವನ. ಧಾರವಾಡದ 'ಬೆಳಗಾಂವಕರ' ಕುಟುಂಬದವರು ಈ ಮಠವನ್ನು ಕ್ರಿ.ಶ. ೧೮೭೫ರ ಸುಮಾರಿಗೆ ಇಲ್ಲಿ ಸ್ಥಾಪಿಸಿದರು. ಮೊದಲಿಗೆ ಬೆಳಗಾಂವಕರ ಕುಟುಂಬದವರೇ ಇಲ್ಲಿಯ ಪೂಜಾಕೈಂಕರ್ಯವನ್ನು ನಡೆಸುತ್ತಿದ್ದರಾದರೂ ನಂತರ ಅವರು ಊರನ್ನು ತೊರೆದು ಹೋಗಬೇಕಾದ ಪ್ರಸಂಗ ಬಂದಾಗ ಆ ಜವಾಬ್ದಾರಿಯನ್ನು ೧೯೩೮-೪೦ರ ಸುಮಾರಿಗೆ ಗಲಗಲಿ ಮನೆತನದ ಶ್ರೀನರಸಿಂಹಾಚಾರ್ಯರಿಗೆ ವಹಿಸಿಕೊಟ್ಟರು. ಇವರೇ ಶ್ರೀನಿವಾಸ ಹಾವನೂರರ ತಂದೆ.

ಮೊದಲ ದಿನಗಳು

ನರಸಿಂಹಾಚಾರ್ಯ ಗಲಗಲಿ ಹಾಗೂ ರಮಾಬಾಯಿ ದಂಪತಿಗಳಿಗೆ ಒಟ್ಟು ಹದಿನಾಲ್ಕು ಮಕ್ಕಳು ಜನಿಸಿದರಾದರೂ ಉಳಿದವರು ಕೇವಲ ಆರು ಗಂಡು ಮತ್ತು ಮೂವರು ಹೆಣ್ಣುಮಕ್ಕಳು ಮಾತ್ರ. ಇವರಲ್ಲಿ ಹಿರಿಯವರೇ ಶ್ರೀನಿವಾಸ ಹಾವನೂರರು. ಜನನ ೧೯೨೭ರ ಡಿಸೆಂಬರ್ ೨೮ರಂದು (ಆದರೆ ಸರ್ಕಾರಿ ದಾಖಲೆಗಳ ಪ್ರಕಾರ ೧೯೨೯ರ ಜನವರಿ ೧೨)

ನಿಮ್ಮ ಕುಟುಂಬದ ಎಲ್ಲ ಸದಸ್ಯರಂತೆ ನಿಮ್ಮ ಅಡ್ಡ ಹೆಸರೂ 'ಗಲಗಲಿ' ಎಂದಿರಬೇಕಿತ್ತಲ್ಲವೇ? ಅದೇಕೆ 'ಹಾವನೂರ' ಆಯಿತು? ಎಂದು ನಾನೊಮ್ಮೆ ಅವರನ್ನು ಕೇಳಿದ್ದೆ. ಅದಕ್ಕೆ ಅವರು–

> *"ನನಗೆ ಇನ್ನೂ ಒಂದು ಅಡ್ಡ ಹೆಸರಿದೆ, ಗೊತ್ತೇನು ನಿಮಗೆ? ನನ್ನ ಹಳೇ ಬರಹಗಳನ್ನು ನೋಡಿರಿ. ಅದರಲ್ಲಿ 'ಶ್ರೀನಿವಾಸ ಐರಣಿ' ಅಂತ ಇರ್ತದ. ಯಾಕಂದ್ರ ನಾನು ಐರಣಿ ಮನೆತನಕ್ಕ ದತ್ತಕ ಹೋದಂವ. ಯಮುನಾಬಾಯಿ ಅಂತ ಮುಧೋಳದ ಒಬ್ಬಾಕಿ ಇದ್ದಳು. ಆಕೆಗಿದ್ದ ಒಬ್ಬ ಮಗ ತೀರಿ ಹೋಗಿದ್ದ. ಸಾಕಷ್ಟು ಆಸ್ತಿ ಪಾಸ್ತಿ ಇತ್ತು. ಒಮ್ಮೆ ಅವ್ರು ನಮ್ಮನೀಗೆ ಬಂದಿದ್ದರು. ನನಗಾಗ ಆರು ವರ್ಷದವ ಅಂತೆ. ಮನೀಗೆ ಬಂದಾಕಿ ಕೆಮ್ಮಲಿಕ್ಕೆ ಶುರು ಮಾಡಿದ್ರು. ನಾನು ಓಡಿ ಹೋಗಿ ಒಂದು ಲೋಟ ನೀರು ತಂದುಕೊಟ್ಟೆನಂತೆ. ಆಕೆಗೆ ನನ್ನ ನಡವಳಿಕೆ ಛಲೋ ಅನ್ನಿಸ್ತು. 'ಇವನನ್ನ ನನಗೆ ದತ್ತಕ ಕೊಟ್ಟು ಬಿಡ್ರಿ' ಅಂತ ಪಟ್ಟು ಹಿಡಿದರು. 'ಚೊಚ್ಚಿಲ ಮಗ, ಬೇಡ' ಅಂತ ನಮ್ಮವ್ವ ತಡೆದರೂ ನಮ್ಮಪ್ಪ ದತ್ತಕಕ್ಕೆ ಕೊಟ್ರ. ನಾನು 'ಸರ್ವೋತ್ತಮಾಚಾರ್ಯ ಐರಣಿ' ಆದೆ. ನಮ್ಮವ್ವ ಮಾತ್ರ 'ಸೀನೂ,' 'ಸೀನಪ್ಪಾ' ಅಂತಲೇ ಕರೆಯೋಳು. ಹಾಗಾಗಿ ನಾನು ಆಫಿಶಿಯಲಿ ಕೂಡಾ 'ಶ್ರೀನಿವಾಸ ಐರಣಿ' ಆಗಿದ್ದೆ.*
>
> *೧೯೫೧ರಿಂದ ೫೬ರ ವರೆಗೆ ನಾನು ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ದೊಳಗೆ ಇನ್ಸ್‌ಪೆಕ್ಟರ್ ಆಗಿದ್ದೆ. ನನ್ನ ನೌಕರಿ ಮುಂಬೈಯಲ್ಲಿ, ಕುಟುಂಬ ಹುಬ್ಬಳ್ಳಿಯಲ್ಲಿ. ಹಾಗಾಗಿ ಹುಬ್ಬಳ್ಳಿಗೆ ಬಂದ್ರೆ ಛಲೋ ಅಂತ ಪ್ರಯತ್ನಮಾಡ್ತಿದ್ದೆ. ಆಫೀಸಿನ ಮುಖ್ಯಸ್ಥ ಯಾವುದೋ ಒಂದು ಮಹತ್ವದ ವರದಿ ಬರೆಯಬೇಕಿತ್ತು.*

ಆ ವರದಿಯನ್ನು ನಾನು ಬರೆದುಕೊಟ್ಟೆ. ಆದರಿಂದಾಗಿ ಪುಟ್ಟಿಕ್ಕಿಗೆ ವರ್ಗಾವಣೆಯಲ್ಲಿ ನನ್ನ ಹೆಸರು ದಾಖಲಾಯಿತು. ಯಾದಿಯಲ್ಲಿ AIRANI ಎಂಬ ಅಡ್ಡ ಹೆಸರಿನಿಂದಾಗಿ ಮೊದಲಿಗೇ ನನ್ನ ಹೆಸರು ದಾಖಲಾಗಿತ್ತು. ಸಾಹೇಬರ ಟೇಬಲ್ಲಿಗೆ ಆ ಯಾದಿ ಸಹಿಗಾಗಿ ಹೋಯಿತು. ಅವರ ಕಣ್ಣಿಗೆ ನಾನೊಬ್ಬ ಸಿಂಧೀ ಮನುಷ್ಯನೆಂದು ಕಂಡಿತು. ಏಕಂದ್ರ ಅವರೇ ಅಸರಾನಿ, ಕಮಲಾನಿ ಅಂತ ಅಡ್ಡ ಹೆಸರ ಇಟ್ಟುಕೊಳ್ಳುವವರು. ಸಾಹೇಬರು ದೊಡ್ಡದಾಗಿ ಕೆಂಪುಮಸಿಯಲ್ಲಿ ನನ್ನ ಹೆಸರಿನ ಮೇಲೆ ಗೆರೆ ಎಳೆದರು. ಸಿಂಧೀ ಮನುಷ್ಯನನ್ನು ಕರ್ನಾಟಕಕ್ಕೆ ಕಳುಹಿಸುವ ಮೂರ್ಖತನವನ್ನು ಹೆಡ್‌ಕ್ಲಾರ್ಕ್ ಮಾಡಿದ್ದಾನಲ್ಲ ಎಂದು!

ಆಗಂತೂ ನನಗ 'ಐರಣಿ' ಎಂಬ ಅಡ್ಡ ಹೆಸರಿನ ಮೇಲೆ ಕೋಪಬಂತು. ರಾಣೆಬೆನ್ನೂರು ತಾಲೂಕಿನ ಆ ಊರನ್ನು ನೋಡಿಯೇ ಇರಲಿಲ್ಲ. ಆದ್ದರಿಂದ ೧೯೬೪ರಲ್ಲಿ ನಾನು ಹುಟ್ಟಿ ಬೆಳೆದ ಹಾವನೂರನ್ನೇ ಅಡ್ಡ ಹೆಸರಾಗಿ "ಗೆಜೆಟ್ ಪ್ರಕಟಣೆ ಕೊಟ್ಟು ಬದಲಿಸಿದೆ"

ಎಂದರು!

ಹಾವನೂರಿನಲ್ಲಿ ತಮ್ಮ ತಂದೆ ನಡೆಸುತ್ತಿದ್ದ ಖಾಸಗಿ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಶ್ರೀನಿವಾಸರು ಮುಂದೆ ಸೇರಿದ್ದು ಹಾವೇರಿಯ ಮುನಿಸಿಪಲ್ ಹೈಸ್ಕೂಲಿಗೆ. ಹಲವರ ಮನೆಯಲ್ಲಿ ವಾರಾನ್ನವನ್ನು ಮಾಡಿಕೊಂಡು ಓದುತ್ತಿದ್ದರೂ ಶಾಲೆಯ ಫೀ ಕಟ್ಟಲು ಹಣವಿಲ್ಲದಿದ್ದುದರಿಂದ ಎರಡನೇ ಟರ್ಮಿನಲ್ಲಿ ಓದು ಹಾವೇರಿಯಿಂದ ಧಾರವಾಡದ ಕರ್ನಾಟಕ ಹೈಸ್ಕೂಲಿಗೆ ಬದಲಾಯಿತು. ನೆಗಳೂರ ರಂಗನಾಥ, ಎಸ್.ಪಿ. ಕುಲಕರ್ಣಿ ಮುಂತಾದ ಶಿಕ್ಷಕರ ಪ್ರೋತ್ಸಾಹದ ಫಲವಾಗಿ ಹಾವನೂರರಲ್ಲಿ ಸಾಹಿತ್ಯಕ ಚಟುವಟಿಕೆಗಳ ಕಡೆಗೆ ಮನಸ್ಸು ಒಲಿಯಿತು.

ಮುಂದೆ ಕರ್ನಾಟಕ ಕಾಲೇಜಿನಲ್ಲಿ ಓದುವಾಗ ಸ.ಸ. ಮಾಳವಾಡ, ಮಳಗಿ, ಶ್ರೀರಂಗರಂತಹ ಹಿರಿಯರ ಮಾರ್ಗದರ್ಶನದಲ್ಲಿ ಇದು ಇನ್ನಷ್ಟು ಪುಷ್ಟವಾಯಿತು. ಆದರೆ ಸದಾ ಎರಡು ಅಥವಾ ಮೂರನೇ ದರ್ಜೆಯಲ್ಲಿಯೇ ಪರೀಕ್ಷೆಯಲ್ಲಿ ಉತ್ತೀರ್ಣ ರಾಗುತ್ತಿದ್ದುದರಿಂದ ಕಾಲೇಜಿನಲ್ಲಿ ಫೀಸಿನಲ್ಲಿ ರಿಯಾಯಿತಿ, ಫ್ರೀಶಿಪ್, ಸ್ಕಾಲರ್‌ಶಿಪ್ ಮುಂತಾದವುಗಳು ದೊರಕುವ ಸಂಭವವಿರಲಿಲ್ಲ. ಈ ವಿಷಯವನ್ನು ತಿಳಿದಿದ್ದ ಶ್ರೀರಂಗರು ೧೯೪೬ರಲ್ಲಿ ಹಾವನೂರರಿಗೆ ವಿದ್ಯಾವರ್ಧಕ ಸಂಘದ ಲೈಬ್ರರಿಯಲ್ಲಿ ೩೬ರೂಗಳ ಸಂಬಳಕ್ಕೆ ಒಪ್ಪೊತ್ತಿನ ಕೆಲಸ ಕೊಡಿಸಿದರು. "ನನಗಾಗ ೧೮ ವರ್ಷ ಮಾತ್ರ, ಅದು ನನ್ನ ಮೊದಲ ನೌಕರಿ, ಅದೂ ಲೈಬ್ರರಿ ಪುಸ್ತಕ ಇರುವಲ್ಲಿ. ಏನು ಬೇಕಾದರೂ ಓದಬಹುದು. ಯಾವ ಪುಸ್ತಕವನ್ನೂ ಒಯ್ಯಬಹುದು, ಎಷ್ಟು ಬೇಕಾದರೂ! ನನಗಾದ ಹಿಗ್ಗು ಅಷ್ಟಿಷ್ಟಲ್ಲ" ಎಂದು ಹಾವನೂರರು ಜ್ಞಾಪಿಸಿಕೊಂಡಿದ್ದಾರೆ. ಅಂತೂ ಅಂದು ಪ್ರಾರಂಭವಾದ ಗ್ರಂಥಾಲಯಗಳೊಂದಿಗಿನ ಹಾವನೂರರ ಸಾಂಗತ್ಯ ಜೀವನದ ಕೊನೆಯವರೆಗೆ ಮುಂದುವರೆಯಿತು.

ಹೀಗೆ ಹಾವನೂರರು ವಿದ್ಯಾವರ್ಧಕ ಸಂಘದಲ್ಲಿ ನೌಕರಿ ಮಾಡುತ್ತಾ ಜೂನಿಯರ್ ಬಿ.ಎ.ಯಲ್ಲಿದ್ದಾಗ ಯಾವುದೋ ಭಾಷಣದ ಕಾರ್ಯಕ್ರಮಕ್ಕೆಂದು ರಂ.ಶ್ರೀ. ಮುಗಳಿಯವರು ಸಾಂಗಲಿಯಿಂದ ಧಾರವಾಡಕ್ಕೆ ಬಂದಿದ್ದರು. ಅವರ ಮಾತುಗಳಿಂದ ಪ್ರಭಾವಿತ ಹಾವನೂರರು ಮುಗಳಿಯವರ ಕಡೆಯಿಂದ ವಿದ್ಯೆಕಲಿಯಬೇಕೆಂಬ ಆಸೆಯಿಂದ ಫೈನಲ್ ಬಿ.ಎ.ಯನ್ನು ಸಾಂಗಲಿಯ ವಿಲಿಂಗ್ಡನ್ ಕಾಲೇಜಿನಲ್ಲಿ ಓದಲು ನಿರ್ಧರಿಸಿದರು. ಅವರಿವರಲ್ಲಿ ಬೇಡಿ ೧೯೬ ರೂ.ಗಳನ್ನು ಒಟ್ಟು ಮಾಡಿಕೊಂಡು ಸಾಂಗಲಿ ತಲುಪಿ ಹಣವನ್ನು ಮುಗಳಿಯವರ ಕೈಗಿತ್ತು ಕಾಲು ಹಿಡಿದು “ಇಷ್ಟೇ ಹಣ ನನಗೆ ದೊರೆತಿದ್ದು, ಬಿ.ಎ. ಮುಗಿಸುವ ಭಾರ ನಿಮ್ಮದೇ” ಎಂದು ಕಣ್ಣಲ್ಲಿ ನೀರು ತುಂಬಿ ಕೊಂಡು ಹೇಳಿದರು.

ಮಾತೃಹೃದಯದ ಮುಗಳಿಯವರು ಹಾವನೂರರ ಪ್ರವೇಶ ಶುಲ್ಕವನ್ನು ತಾವೇ ಕಟ್ಟಿದರಲ್ಲದೆ ಹಾಸ್ಟಲ್‌ನ ಮೇಲ್ವಿಚಾರಣೆಯ ಕೆಲಸದ ವ್ಯವಸ್ಥೆ ಮಾಡಿಕೊಟ್ಟರು. ಇದರಿಂದಾಗಿ ವಾಸ್ತವ್ಯದ ಹಾಗೂ ಹೊಟ್ಟೆಯ ಚಿಂತೆ ಕಳೆಯಿತು. ಪ್ರತಿ ಶುಕ್ರವಾರ ಮುಗಳಿಯರ ಮನೆಯಲ್ಲೇ ವಾರಾನ್ನ. ಬಿ.ಎ. ಆನರ್ಸ್‌ನಲ್ಲಿ ಮೊದಲದರ್ಜೆಯಲ್ಲಿ ಪಾಸಾದದ್ದರಿಂದ ಹಾಸ್ಟಲ್‌ನ ಸೂಪರಿಂಟೆಂಡೆಂಟ್ ಕೆಲಸವೂ, ಇಂಗ್ಲಿಷ್ ಟ್ಯೂಟರ್ ಜವಾಬ್ದಾರಿಯೂ ಹಾವನೂರರದಾಯಿತು. ಇದರಿಂದಾಗಿ ಆರ್ಥಿಕ ಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸಿತು.

ವೃತ್ತಿ ಜೀವನ

ಎರಡು ವರ್ಷಗಳ ಸಾಂಗಲಿಯ ವಾಸ್ತವ್ಯ ಮುಗಿಯುತ್ತಾ ಬರುತ್ತಿದ್ದಂತೆ ಮುಂದೇನು? ಎಂಬ ಪ್ರಶ್ನೆ ಮತ್ತೆ ಹಾವನೂರರ ಮುಂದೆ ಕಾಣಿಸಿಕೊಂಡಿತು. ಆಗಿನ ಕಾಲದಲ್ಲಿ ಬಿ.ಎ. ಅಥವಾ ಬಿ.ಎಸ್ಸಿ.ಯನ್ನು ಮೊದಲನೇ ದರ್ಜೆಯಲ್ಲಿ ಪಾಸಾದರೆ ಯಾವುದಾದರೊಂದು ಕಾಲೇಜಿನಲ್ಲಿ ಲೆಕ್ಚರರ್ ಆಗಬಹುದಿತ್ತು. ಆದರೆ ಪ್ರತಿವರ್ಷವೂ ಮಾಡಿದ ಪಾಠವನ್ನೇ ಮಾಡುತ್ತಾ, ಹಳೆಯ ನೋಟ್ಸನ್ನೇ ಬರೆಸುತ್ತಾ ಹೋಗುವ ‘ಮಾಸ್ತರಿಕೆ’ಯ ಬಗ್ಗೆ ಅವರಿಗೆ ಒಲವು ಮೂಡಲಿಲ್ಲ. ವಿದ್ಯಾವರ್ಧಕ ಸಂಘದ ಹಾಗೂ ವಿಲಿಂಗ್ಡನ್ ಕಾಲೇಜು ಲೈಬ್ರರಿಗಳನ್ನು ನೋಡಿ ಆಕರ್ಷಿತರಾಗಿದ್ದ ಅವರು ಲೈಬ್ರರಿ ಕೋರ್ಸ್ ಮಾಡಲು ನಿರ್ಧರಿಸಿದರು.

ಆಗ ಲೈಬ್ರರಿ ಕ್ಷೇತ್ರದಲ್ಲಿ ಖ್ಯಾತನಾಮರಾಗಿದ್ದವರು ಕನ್ನಡಿಗರೇ ಆಗಿದ್ದ ಡಾ. ಎಸ್.ಆರ್.ರಂಗನಾಥನ್. ಅವರು ಕೋಲನ್ ವರ್ಗೀಕರಣವನ್ನು ಕಂಡು ಹಿಡಿದಿದ್ದರು. ಅದರ ಭಾರತೀಕರಣದಲ್ಲಿ ಇದ್ದ ಒಂದೆರಡು ತೊಂದರೆಗಳನ್ನು ತೋರಿಸಿ ಹಾವನೂರರು ಸಾಂಗಲಿಯಲ್ಲಿದ್ದಾಗಲೇ ರಂಗನಾಥನ್‌ರಿಗೆ ಪತ್ರ ಬರೆದಿದ್ದರು. ‘ಹೌದು, ಈ ಸಮಸ್ಯೆಗಳಿರುವುದು ನಿಜ’ ಎಂದು ರಂಗನಾಥನ್‌ರೂ ಒಪ್ಪಿದ್ದರು. ದೆಹಲಿಯಲ್ಲಿದ್ದ ಅವರೆಡೆಗೇ ಹೋಗಿ ಲೈಬ್ರರಿ ಕೋರ್ಸ್ ಮಾಡಿದರೆ ಹೇಗೆ ಎಂದು ಚಿಂತಿಸಿದ ಹಾವನೂರರು ದೆಹಲಿಗೆ ಹೋದರಾದರೂ ಅಲ್ಲಿಯ ಪರಿಸ್ಥಿತಿ ಅಷ್ಟೇನೂ ಪ್ರೋತ್ಸಾಹದಾಯಕವಾಗಿರಲಿಲ್ಲವಾದ್ದರಿಂದ ೧೯೪೮ರಲ್ಲಿ ಮುಂಬೈಗೆ ಬಂದರು.

ತರುಣ ಹಾವನೂರ

ಅವರಿಗೆಯೇ ಕಾದಿದೆಯೇನೋ ಎನ್ನುವಂತೆ ಮಾತುಂಗದ ಎನ್.ಕೆ.ಇ.ಎಸ್. ಹೈಸ್ಕೂಲಿನಲ್ಲಿ ಕನ್ನಡ ಮಾಸ್ತರನ ಕೆಲಸ ಖಾಲಿ ಇತ್ತು.

ಹಾವನೂರರು ಈ ಶಾಲೆಯಲ್ಲಿ ಉತ್ಸಾಹದಿಂದಲೇ ಕೆಲಸ ಮಾಡಿದರು. ಆ ಕಾಲದಲ್ಲಿ ಮುಂಬೈ ಆಕಾಶವಾಣಿಯು ಪ್ರತಿದಿನ ಅರ್ಧಗಂಟೆಯ ಕನ್ನಡ ಕಾರ್ಯಕ್ರಮವನ್ನು ಪ್ರಸಾರ ಮಾಡುತ್ತಿತ್ತು. ಉತ್ತರ ಕರ್ನಾಟಕದ ಹಳ್ಳಿಗರ ಆಡುನುಡಿ ಗೊತ್ತಿದ್ದವರೇ ಆ ಕಾರ್ಯಕ್ರಮಕ್ಕೆ ಸೂಕ್ತರು. ಈ ಕಾರ್ಯಕ್ರಮದ ಅಂದಿನ ದಿನಗಳ ಜನಪ್ರಿಯ ನಿರೂಪಕ ಜೋಡಿ ಎಂದರೆ ಶ್ರೀನಿವಾಸ ಹಾವನೂರ ಮತ್ತು ಕು. ಶಕುಂತಲಾ ವಾಳ್ವೇಕರ. 'ಜೋಡಿ ಚೆನ್ನಾಗಿದೆ' ಎಂಬ ಮಾತು ಮುಂದುವರೆದು ೧೯೫೧ರಲ್ಲಿ ಶಕುಂತಲಾರು 'ಭಾರತಿ'ಯಾಗಿ ಶ್ರೀನಿವಾಸರ ಬಾಳಗೆಳತಿಯಾದರು!

೧೯೪೮ರಿಂದ ೧೯೬೨ರ ವರೆಗೆ, ಸುಮಾರು ೧೩ ವರ್ಷಗಳ ಕಾಲ ಹಾವನೂರರು ಐದಾರು ಅಲ್ಪಾವಧಿಯ ನೌಕರಿಗಳನ್ನು ಮಾಡಬೇಕಾದ ಪರಿಸ್ಥಿತಿ ಒದಗಿತು. 'ನನ್ನಷ್ಟು ನೌಕರಿ ಬದಲು ಮಾಡಿದವರಿಲ್ಲ' ಎನ್ನುವುದು ಅವರು ಆಗಾಗ ಹೇಳುತ್ತಿದ್ದ ಮಾತು. ಹಗಲು ಎನ್.ಕೆ.ಇ.ಎಸ್.ನಲ್ಲಿ ಮತ್ತು ರಾತ್ರಿ ಪೋರ್ಟ್ ಫ್ರೀ ಸ್ಟೇಟ್ ಹೈಸ್ಕೂಲಿನಲ್ಲಿ ಕನ್ನಡ ಮಾಸ್ತರಿಕೆ, ಮಧ್ಯೆಮಧ್ಯೆ, ಆಕಾಶವಾಣಿಯಲ್ಲಿ ಕಾರ್ಯಕ್ರಮದ ನಿರೂಪಣೆ, ಫ್ರೀಪ್ರೆಸ್ ಜರ್ನಲ್‌ನಲ್ಲಿ ಕನ್ನಡ ಪತ್ರಿಕೋದ್ಯಮದ ಕೆಲಸ, ಕೇಂದ್ರ ಸರ್ಕಾರದ ಸೇಲ್ಸ್ ಟ್ಯಾಕ್ಸ್ ಇಲಾಖೆಯ ಮುಂಬೈ ಶಾಖೆಯಲ್ಲಿ ಜ್ಯೂನಿಯರ್ ಆಡಿಟರ್ ಮುಂತಾದ ಹಲವು ನೌಕರಿಗಳನ್ನು ಅವರು ಮಾಡಿದ್ದಿದೆ. ಇದೇ ವೇಳೆಯಲ್ಲಿ ಅವರಿಗೆ ರಾಮಚಂದ್ರ ಉಚ್ಚಿಲ, ವ್ಯಾಸರಾಯ ಬಲ್ಲಾಳ. ಬಿ.ಎಸ್. ತುಂಗಾ, ಹನುಮೇಶ ಆಚಾರ್, ಎಂ.ವಿ. ಕಾಮತ್, ಎಚ್. ಸೋಮನಾಥ. ರಾಮಚಂದ್ರರಾವ್ ಮುಂತಾದ ಉತ್ಸಾಹಿ ಕನ್ನಡ ಕಾರ್ಯಕರ್ತರ ಪರಿಚಯವಾಯಿತು. ಇವರೆಲ್ಲರ ಆಸಕ್ತಿಯಿಂದ ೧೯೪೭ರಲ್ಲಿ 'ನುಡಿ' ಎಂಬ ಕನ್ನಡ ಸಾಪ್ತಾಹಿಕದ ಪ್ರಕಟಣೆಯಲ್ಲಿ ಹಾವನೂರರು ಆಸಕ್ತಿಯಿಂದ ತೊಡಗಿಕೊಂಡರು.

ಕುಟುಂಬದ ಸದಸ್ಯರೊಂದಿಗೆ ಮಧ್ಯವಯಸ್ಕ ಹಾವನೂರರು

ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ಅವಧಿಯಲ್ಲಿಯೇ ಹಾವನೂರರು ಸಂಜೆಯ ತರಗತಿಗಳಿಗೆ ಹಾಜರಾಗುತ್ತಾ ಲೈಬ್ರರಿ ಕೋರ್ಸ್‌ನ್ನು ಮುಗಿಸಿದರು. ೧೯೫೬ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಗ್ರಂಥಾಲಯ ಸಹಾಯಕರಾಗಿ ಕೆಲಸಕ್ಕೆ ಸೇರಿದದಾದರೂ ಅಲ್ಲಿಯ ವಾತಾವರಣ ಉಸಿರುಗಟ್ಟಿಸುವಂತೆ ಇತ್ತು. ಅದೃಷ್ಟವಶಾತ್ ಅದೇ ವೇಳೆಗೆ ಮುಂಬೈನ ಟಾಟಾ ಇನ್ಸ್‌ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ (TIFR)ನಲ್ಲಿ ಸಹಾಯಕ ಗ್ರಂಥ ಪಾಲಕನ ಕೆಲಸ ದೊರೆತದ್ದರಿಂದ ಹಾವನೂರರು ಮತ್ತೆ ಮುಂಬೈಗೆ ಮರಳುವಂತಾಯಿತು (೧೯೬೧ರಲ್ಲಿ ಗ್ರಂಥಪಾಲಕರಾಗಿ ಅವರ ಸಾಧನೆಗಳನ್ನು ಮುಂದೆ ದಾಖಲಿಸಿದೆ.) ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ನೌಕರಿಯಲ್ಲಿದ್ದಾಗಲೇ ಹಾವನೂರರು ಕನ್ನಡ ಎಂ.ಎ. ಪದವಿಯನ್ನು ಪಡೆದುಕೊಂಡಿದ್ದರು (೧೯೫೦). ನಂತರ ರಂ.ಶ್ರೀ. ಮುಗಳಿಯವರ ಮಾರ್ಗದರ್ಶನದಲ್ಲಿ ೧೯ನೇ ಶತಮಾನದ ಕನ್ನಡ ಸಾಹಿತ್ಯವನ್ನು ಕುರಿತಂತೆ 'ಹೊಸಗನ್ನಡದ ಅರುಣೋದಯ' ಎಂಬ ಕೃತಿಯನ್ನು ರಚಿಸಿ ಪೂನಾ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ೧೯೬೩ರಲ್ಲಿ ಪಡೆದರು.

ವಿಶ್ವವಿದ್ಯಾಲಯಗಳಲ್ಲಿ

ಟಿ.ಐ.ಎಫ್.ಆರ್.ನ ಗ್ರಂಥಾಲಯದ ಗ್ರಂಥಪಾಲಕರಾಗಿ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ ಹಾವನೂರರು ಸೇವೆ ಸಲ್ಲಿಸಿದರು. ಆ ವೇಳೆಗೆ ಮಕ್ಕಳು ಬೆಳೆದು ದೊಡ್ಡವರಾಗಿದ್ದರು. ಬಹುಕಾಲದಿಂದ ಕರ್ನಾಟಕದ ಹೊರಗೆ ಇದ್ದ ಹಾವನೂರರಿಗೆ ಮುಂಬಯಿಯನ್ನು ಬಿಟ್ಟು ಒಳನಾಡಿಗೆ ಹೋಗಿ ಕನ್ನಡ ಸಂಶೋಧನೆಯ ಕಾರ್ಯದಲ್ಲಿ ತೊಡಗಬೇಕು ಎಂದು ಮನಸ್ಸು ತುಡಿಯುತ್ತಿತ್ತು. ೧೯೮೨ರಲ್ಲಿ ಮಂಗಳೂರಿನಲ್ಲಿ ಹೊಸದಾಗಿ ವಿಶ್ವವಿದ್ಯಾಲಯ ಆರಂಭವಾದಾಗ ಡಾ. ಹಾ.ಮಾ.ನಾಯಕರ ಪ್ರೇರಣೆ,

ಪ್ರೋತ್ಸಾಹಗಳಿಂದ ಅಲ್ಲಿಯ ಕನ್ನಡ ವಿಭಾಗದ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾಗಿ ಬರುವಂತೆ ಹಾವನೂರರನ್ನು ಆಗಿನ ಕುಲಪತಿಗಳಾದ ಬಿ. ಶೇಖ್‌ಅಲಿಯವರು ಆಹ್ವಾನಿಸಿದರು. ಹಾಗಾಗಿ ೧೯೮೨ರಲ್ಲಿ ಅವರು ಟಿ.ಐ.ಎಫ್.ಆರ್.ನಿಂದ ಸ್ವಯಂ ನಿವೃತ್ತಿ ಪಡೆದು ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಬಂದರು.

ಪುಟ್ಟದಾಗಿದ್ದ ಕನ್ನಡ ವಿಭಾಗವನ್ನು ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಂತೆ ಮಾದರಿಯಾಗಿ ಬೆಳೆಸಬೇಕೆಂಬ ಮಹತ್ವಾಕಾಂಕ್ಷೆಯ ಕನಸನ್ನು ಇಟ್ಟುಕೊಂಡು ಹಲವಾರು ರಚನಾತ್ಮಕವಾದ ಕಾರ್ಯಯೋಜನೆಗಳನ್ನು ಹಮ್ಮಿಕೊಂಡು ಅವೆಲ್ಲವನ್ನೂ ಪ್ರಯತ್ನಪೂರ್ವಕವಾಗಿ ಕಾರ್ಯರೂಪಕ್ಕೆ ತಂದರು. ಕೇಂದ್ರ ಸರಕಾರದ ಸಂಸ್ಕೃತಿ ಇಲಾಖೆ, ಪತ್ರಾಗಾರ ಇಲಾಖೆಗಳ ಹಸ್ತಪ್ರತಿ ಸಂರಕ್ಷಣೆ ಹಾಗೂ ಪ್ರಕಟಣಾ ಯೋಜನೆಗಳ ಆರ್ಥಿಕ ನೆರವನ್ನು ಕನ್ನಡ ವಿಭಾಗಕ್ಕೆ ಒದಗಿಸುವಲ್ಲಿ ಯಶಸ್ವಿಯಾದರು. ಈ ಯೋಜನೆಯಲ್ಲಿ ವೆಂಕಟರಾಜ ಪುಣಿಂಚತ್ತಾಯರು ಸಂಪಾದಿಸಿದ ತುಳುಭಾಷೆ ಲಿಪಿಯಲ್ಲಿ ಬರೆದಿರುವ ತುಳುವಿನ ಮೊತ್ತಮೊದಲ ಕಾವ್ಯ ಎಂದು ಗುರುತಿಸಲ್ಪಟ್ಟಿರುವ ಶ್ರೀ ಭಾಗವತೊ ಮಹಾಕಾವ್ಯವನ್ನು ಪ್ರಕಟಿಸಿದ್ದಲ್ಲದೆಯೇ, ಹಳೆಯ ತಾಡವೋಲೆ, ಹಸ್ತಪ್ರತಿಗಳ ಸಂಗ್ರಹ, ಸಂರಕ್ಷಣೆ, ಪ್ರಕಟಣೆಯ ಯೋಜನೆಗಳಲ್ಲದೆಯೇ ಅವುಗಳ ಸೂಚಿಯನ್ನು ಸಿದ್ಧಗೊಳಿಸುವ ನಿಟ್ಟಿನಲ್ಲೂ ಯೋಜನೆಗಳನ್ನು ರೂಪಿಸಿದರು. ಇದರ ಜೊತೆಗೆ, ಕನ್ನಡ, ತುಳು, ಕೊಡವ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಈ ಮುಂತಾದ ವಿಷಯಗಳ ಕುರಿತು ನಡೆದಿರುವ ಅಧ್ಯಯನಗಳಿಗೆ ಸಂಬಂಧಿಸಿದ ಮಾಹಿತಿಗಳ ಕಡತಗಳನ್ನು ಸಿದ್ಧಗೊಳಿಸಿ ವಿಭಾಗೀಯ ಗ್ರಂಥಾಲಯ ಹಾಗೂ ಮಾಹಿತಿ ಕೇಂದ್ರವನ್ನು ಸ್ಥಾಪಿಸಿದರು.

ಕಳೆದ ಶತಮಾನದ ಪೂರ್ವಾರ್ಧದಲ್ಲಿ ದಕ್ಷಿಣ ಕನ್ನಡ ಹಾಗೂ ಇತರ ಕಡೆಗಳಿಂದ ಪ್ರಕಟಗೊಳ್ಳುತ್ತಿದ್ದ ಕನ್ನಡದ ಅಪೂರ್ವ ಪತ್ರಿಕೆಗಳಾದ ನವಯುಗ, ಸ್ವದೇಶಾಭಿಮಾನಿ, ವಸಂತ, ಜೀವನ, ಶ್ರೀಕೃಷ್ಣ ಸೂಕ್ತಿ, ಕನ್ನಡ ಸಹಕಾರಿ ಹೀಗೆ ಅನೇಕ ಪತ್ರಿಕೆಗಳ ಹಳೆಯ ಸಂಪುಟಗಳು ಅಲ್ಲದೆಯೇ, ಕನ್ನಡ ಬರಹಗಾರರ ಬಗೆಗಿನ ಹಳೆಯ ಪತ್ರಿಕಾ ತುಣುಕುಗಳನ್ನು ಸಂಗ್ರಹಿಸಿ ಜೋಡಿಸಿರುವ ದಿವಂಗತ ಚಂದ್ರರಾಜ ಶೆಟ್ಟಿಯವರ ಕನ್ನಡ ಬರಹಗಾರರ ಬಳಗದ ಸಂಪುಟಗಳು, ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಪ್ರಸಾರಾಂಗ ಪ್ರಕಟಣೆಗಳು, ಲಂಡನ್ನಿನ ಬ್ರಿಟಿಷ್ ಲೈಬ್ರರಿಯಿಂದ ತರಿಸಿಕೊಂಡ ಕನ್ನಡ, ತುಳು ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಪತ್ರಿಕೆಗಳಿಗೆ ಸಂಬಂಧಿಸಿದ ಅಪೂರ್ವ ಲೇಖನ ಕೃತಿ ಸಂಚಿಕೆಗಳ ನೆರಳು ಪ್ರತಿಗಳು ಹೀಗೆ ಅಪೂರ್ವ ಮಾಹಿತಿ, ಆಕರಗಳನ್ನು ಸಂಗ್ರಹಿಸಿ ವಿಭಾಗೀಯ ಗ್ರಂಥಾಲಯವನ್ನು ವಿಸ್ತರಿಸಿದರು. ಸಾಂಸ್ಕೃತಿಕ ನೆಲೆಯಲ್ಲಿ ವಿಭಾಗವನ್ನು ರೂಪಿಸುವ ನೆಲೆಯಲ್ಲಿ ದಕ್ಷಿಣಕನ್ನಡ ಹಾಗೂ ಕೊಡಗು ಜಿಲ್ಲೆಗಳ ನಾನಾ ಊರುಗಳಿಂದ ಶಾಸನ, ನಾಣ್ಯ, ತಾಮ್ರದ ಮೂರ್ತಿಗಳಲ್ಲದೆ ಭೂತಾರಾಧನೆ, ಯಕ್ಷಗಾನ, ಕೃಷಿಗೆ ಸಂಬಂಧಿಸಿದ ಹಾಗೂ ತುಳು ಕೊಡವ ಸಂಸ್ಕೃತಿಗೆ ಸಂಬಂಧಿಸಿದ ಇನ್ನಿತರ ವಸ್ತು ಸಾಮಗ್ರಿಗಳನ್ನು ಉತ್ಖನನದ ಮೂಲಕ ಸಂಗ್ರಹಿಸಿ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳ ಸಾಂಸ್ಕೃತಿಕ ವಸ್ತು ಸಂಗ್ರಹಾಲಯವನ್ನು ಆರಂಭಿಸಿದರು.

ಇದಕ್ಕಾಗಿ ಪ್ರತಿ ರವಿವಾರ ಯೂನಿವರ್ಸಿಟಿಯ ವ್ಯಾನಿನಲ್ಲಿ ಪ್ರಾಚೀನ ಕುರುಹುಗಳನ್ನು ಅರಸಿಕೊಂಡು ಹಳ್ಳಿ-ಹಳ್ಳಿಗೆ ಹೋದದ್ದು ಉಂಟು. (ಸುಳ್ಯದಲ್ಲಿ ಒಂದೆಡೆ ನೆಲದಲ್ಲಿ ಹುಗಿಸಿದ್ದ ಭೂತಾರಾಧನೆಯ ದೈವಗಳನ್ನು ಹರಕೆ, ಪೂಜೆಗಳನ್ನು ಸಲ್ಲಿಸಿ ಅಗೆದು ಹೊರತೆಗೆದು ಸಂಗ್ರಹಿಸಿದರಂತೆ!)

ಕೊಡವ ಭಾಷೆ, ಸಾಹಿತ್ಯ, ಸಂಸ್ಕೃತಿ, ಇತಿಹಾಸದ ಕುರಿತು ಐಚ್ಛಿಕ ವಿಷಯದ ಪತ್ರಿಕೆಯೊಂದನ್ನು ಸ್ನಾತಕೋತ್ತರ ಶಿಕ್ಷಣದಲ್ಲಿ ಆರಂಭಿಸಿದರು. ಪ್ರಾಥಮಿಕ ಶಿಕ್ಷಣದಲ್ಲಿ ತುಳುವಿಗೆ ಆದ್ಯತೆ ದೊರೆಯುವ ನಿಟ್ಟಿನಲ್ಲಿ ಹತ್ತೊಂಬತ್ತನೆಯ ಶತಮಾನದಲ್ಲಿ ಬಾಸೆಲ್ ಮಿಷನ್‌ರವರು ತುಳು ಪಠ್ಯಪುಸ್ತಕವನ್ನು ರಚನೆ ಮಾಡಿರುವ ಸಂಗತಿಗಳನ್ನು ಆಧಾರವಾಗಿರಿಸಿಕೊಂಡು ತುಳುವಿನಲ್ಲಿ ಪ್ರಾಥಮಿಕ ಶಿಕ್ಷಣದ ಅಗತ್ಯ ಮತ್ತು ಸಾಧ್ಯತೆಯ ಕುರಿತು ಹಕ್ಕೊತ್ತಾಯಗಳನ್ನು ಮಂಡಿಸಿದರು. ಹೇಗೆ ಕನ್ನಡದ ಜೊತೆಗೆ ತುಳು, ಕೊಡವದ ಪ್ರಾದೇಶಿಕ ಭಾಷೆಗಳಿಗೆ ಮಾನ್ಯತೆ ದೊರೆಯುವಂತೆ ಹಲವು ಯೋಜನೆಗಳನ್ನು ರೂಪಿಸಿದರು. ಕನ್ನಡ ವಿಭಾಗವನ್ನು ಕೇವಲ ಆಕರ ಸಾಮಾಗ್ರಿಗಳ ಕೇಂದ್ರವನ್ನಾಗಿ ಮಾತ್ರ ವಿಸ್ತರಿಸದೆ ಬೌದ್ಧಿಕ ಚರ್ಚೆಗಳ ಮೂಲಕ ಜ್ಞಾನ ಉತ್ಪತ್ತಿಯ ಕೇಂದ್ರವನ್ನಾಗಿಯೂ ರೂಪಿಸುವ ಪ್ರಯತ್ನವನ್ನು ಹಾವನೂರರು ಮಾಡಿದರು. ಕನ್ನಡ ಸಂಶೋಧನೆಯ ವಿಧಿ ವಿಧಾನಗಳು, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು ಕುರಿತಂತೆ ಅವರು ನಡೆಸಿದ ವಿಚಾರಸಂಕಿರಣಗಳು, ಕಮ್ಮಟಗಳು ವಿಭಾಗದ ಚರಿತ್ರೆಯಲ್ಲಿ ಮಾತ್ರವಲ್ಲ ಕನ್ನಡ ಸಾಹಿತ್ಯ ಸಂಶೋಧನೆಯ ಚರಿತ್ರೆಯಲ್ಲೂ ಅಭೂತಪೂರ್ವ ಸ್ಮರಣೆಯಾಗಿ ಉಳಿದಿವೆ ಎಂದು ಅವರ ಸಹೋದ್ಯೋಗಿಯಾಗಿದ್ದ ಡಾ.ಬಿ. ಶಿವರಾಮ ಶೆಟ್ಟರು ನೆನಪಿಸಿಕೊಂಡಿದ್ದಾರೆ.

ಮಂಗಳೂರು ವಿಶ್ವವಿದ್ಯಾಲಯದ ಒಪ್ಪಂದ ಮುಗಿಯುವ ವೇಳೆಗೆ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಹಾವನೂರರನ್ನು ಕೈಬೀಸಿ ಕರೆಯಿತು. ಅದಕ್ಕೆ ಕಾರಣಕರ್ತರಾದವರೂ ಹಾ.ಮಾ. ನಾಯಕರೇ. 'ನನಗೆ ಮುಂಬೈ ಜೀವನ ಸಾಕಾಗಿದೆ. ಅಲ್ಲಿಗೆ ಹೋಗುವುದಿಲ್ಲ' ಎಂದು ಹಾವನೂರರು ಅರ್ಜಿ ಹಾಕಲು ನಿರಾಕರಿಸಿದಾಗ ನಾಯಕರು "ಹಾವನೂರರೇ, ನಿಮ್ಮ ಬೇಕು ಬೇಡಗಳ ಪ್ರಶ್ನೆ ಇದಲ್ಲ. ಮುಂಬೈಯಲ್ಲಿ ಕನ್ನಡ ಬದುಕಬೇಕಿದ್ದರೆ ಆ ಸ್ಥಾನದಲ್ಲಿ ಗಟ್ಟಿಯಾಗಿ ಕೆಲಸ ಮಾಡುವವರು ಬೇಕು. ನಾ ಹೇಳ್ತಿದೀನಿ. ಅರ್ಜಿ ಕಳಿಸುವ ಕೊನೆಯ ದಿನ ಮುಗಿದಿದ್ದರೂ ನೀವು ಅರ್ಜಿ ಹಾಕಲೇಬೇಕು" ಎಂದು ಒತ್ತಾಯಿಸಿ ಹಾವನೂರರು ಮುಂಬೈ ವಿಶ್ವವಿದ್ಯಾಲಯಕ್ಕೆ ಪ್ರಾಧ್ಯಾಪಕರಾಗಿ ಹೋಗುವಂತೆ ಮಾಡಿದರು.

ಹಾವನೂರರು ಮುಂಬೈ ವಿಶ್ವವಿದ್ಯಾಲಯಕ್ಕೆ ಬರುವ ಮೊದಲು ವಿಭಾಗದ ಮುಖ್ಯಸ್ಥರಾಗಿದ್ದ ಸಿ.ಕೆ. ದೀಕ್ಷಿತರು ಸುಮಾರು ೨೩ ವರ್ಷಗಳ ಕಾಲ ಕನ್ನಡ ವಿಭಾಗವನ್ನು ಕಟ್ಟಿ ಬೆಳೆಸಲು ಶ್ರಮಿಸಿದ್ದರಾದರೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಅಲ್ಲಿಗೆ ಕಲಿಯಲು ಬರುತ್ತಿರಲಿಲ್ಲ. ೧೯೮೪ರಲ್ಲಿ ಅವರು ವಿಭಾಗಕ್ಕೆ ಸೇರಿದಾಗಲಂತೂ ಇದ್ದವರು ಕೇವಲ ಇಬ್ಬರೇ ವಿದ್ಯಾರ್ಥಿಗಳು! ಹಾವನೂರರ ಸತತ ಶ್ರಮದಿಂದಾಗಿ ಎರಡೇ ವರ್ಷಗಳಲ್ಲಿ ಈ ಸಂಖ್ಯೆ ೧೫ಕ್ಕೆ ಏರಿತು. ಎಂ.ಫಿಲ್ ತರಗತಿಗಳನ್ನೂ ಆರಂಭಿಸಲಾಯಿತು.

ವಿಭಾಗದಲ್ಲಿ ಸುಮಾರು ಆರೂವರೆ ಸಾವಿರ ಪುಸ್ತಕಗಳ ಗ್ರಂಥಾಲಯವನ್ನು ಅವರು ಪ್ರಾರಂಭಿಸಿದರು. ಹತ್ತಾರು ಮಂದಿ ಸಂಶೋಧಕರು ವಿಭಾಗದ ಮೂಲಕ ಪಿಎಚ್.ಡಿ. ಪದವಿ ಪಡೆದದ್ದು, ಖ್ಯಾತ ಸಂಶೋಧಕರಾದ ಭೀಮರಾವ ಚಿಟಗುಪ್ಪಿಯವರಿಗೆ ಕನ್ನಡದಲ್ಲಿ ಡಿ.ಲಿಟ್. ಪದವಿ ದೊರೆತದ್ದು ಈ ಅವಧಿಯಲ್ಲಿಯೇ.

ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗಕ್ಕೆ ಡಾ. ರಂ.ಶ್ರೀ. ಮುಗಳಿಯವರ ಭೇಟಿ. ಜೊತೆಯಲ್ಲಿ ಪ್ರೊ. ಸಿ.ಕೆ. ದೀಕ್ಷಿತ್, ಡಾ. ಭೀಮರಾವ್ ಚಿಟಗುಪ್ಪಿ ಮತ್ತು ಹಾವನೂರ

ಆದ್ಯ ರಂಗಾಚಾರ್ಯರ 'ಭಾರತೀಯ ರಂಗಭೂಮಿಯ ಪರಂಪರೆ.' ರಂ.ಶ್ರೀ. ಮುಗಳಿಯವರ 'ಮಹಾಕೃತಿ' ಎಂಬ ಎರಡು ಕೃತಿಗಳನ್ನು ಹಾವನೂರರು ವಿಭಾಗದ ವತಿಯಿಂದ ಮೊದಲಿಗೆ ಪ್ರಕಟಿಸಿದರು. ಜೊತೆಗೆ ಮರಾಠೀ-ಕನ್ನಡ ಸೌಹಾರ್ದಕ್ಕೆ ಸಂಬಂಧಿಸಿದಂತೆ ಹಲವು ವಿಚಾರ ಸಂಕಿರಣಗಳನ್ನು ನಡೆಸಿ ಅದರಲ್ಲಿ ಮಂಡಿತವಾದ ಪ್ರಬಂಧಗಳನ್ನು 'ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ,' 'ಮಹಾರಾಷ್ಟ್ರೀಯರ ದೃಷ್ಟಿಯಲ್ಲಿ ಕಾರಂತರ ಕಾದಂಬರಿಗಳು' 'ಮಹಾರಾಷ್ಟ್ರದಲ್ಲಿಯ ಕನ್ನಡ ಶಾಸನಗಳು' ಮುಂತಾದ ಶೀರ್ಷಿಕೆಗಳ ಅಡಿಯಲ್ಲಿ ಗ್ರಂಥರೂಪದಲ್ಲಿ ಹೊರತಂದರು. ಗ್ರಂಥ ಪ್ರಕಟಣೆಗಾಗಿ ಪ್ರತಿ ಭಾಷಾ ವಿಭಾಗಕ್ಕೆ ಹತ್ತು ಸಾವಿರ ರೂ. ಮಾತ್ರ ಮಂಜೂರು ಮಾಡುವುದು ಸಾಮಾನ್ಯ ನಿಯಮ. ಆದರೆ ಹಾವನೂರರು ತಮ್ಮ ಕಾರ್ಯದಕ್ಷತೆಯಿಂದ ಒಂದು ವರ್ಷ ೫೮,೦೦೦ ರೂ. ಮಂಜೂರು ಮಾಡಿಸಿಕೊಂಡಿದ್ದರು! ಅದನ್ನು ಮಂಜೂರು ಮಾಡುವಾಗ ಪ್ರಭಾರಿ ಕುಲಪತಿಗಳು 'I am prond of your Department' ಎಂದಿದ್ದನ್ನು ಹಾವನೂರರು ಆಗಾಗ್ಗೆ ನೆನಸಿಕೊಳ್ಳುತ್ತಿದ್ದರು.

ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾಗ ಹಾವನೂರರು ವಿಭಾಗದ ವತಿಯಿಂದ ಕನ್ನಡವನ್ನು ಕನ್ನಡೇತರರಿಗೆ ಕಲಿಸುವ ವ್ಯವಸ್ಥೆಯನ್ನು ಸಫಲವಾಗಿ ನಿರ್ವಹಿಸಿದರು. ಅಷ್ಟೇ ಅಲ್ಲದೆ ಎಂ.ಫಿಲ್. ತರಗತಿಗಳನ್ನು ಆರಂಭಿಸಿ ಅದರ ತರಗತಿಗಳನ್ನು ದೀಪಾವಳಿ, ಬೇಸಿಗೆಯ ರಜೆ ದಿನಗಳಲ್ಲಿ ನಡೆಯುವಂತೆ ವ್ಯವಸ್ಥೆ ಮಾಡಿದ್ದರಿಂದ ಹಲವಾರು ಮಂದಿ

ಕರ್ನಾಟಕದಿಂದ ಮುಂಬೈಗೆ ಹೋಗಿ ಎಂ.ಫಿಲ್. ಮಾಡಿದರು. ಒಮ್ಮೆ ಗುಲಬರ್ಗಾದಿಂದ ಒಬ್ಬ ಹೆಣ್ಣುಮಗಳು ತನ್ನ ನಾಲ್ಕು ತಿಂಗಳ ಮಗು ಮತ್ತು ಪತಿಯೊಂದಿಗೆ ತರಗತಿಗಳಿಗೆ ಬಂದಾಗ ಹಾವನೂರರು ಅವರಿಗೆಲ್ಲ ತಮ್ಮ ಮನೆಯಲ್ಲಿ ಉಳಿಯಲು ಜಾಗಕೊಟ್ಟು, ಅಡುಗೆ ಮಾಡಿ ಹಾಕಿ ಸಾಕಿದ್ದಿದೆ! ಆರು ವರ್ಷಗಳ ಸಾರ್ಥಕ ಸೇವೆಯ ನಂತರ ಹಾವನೂರರು ೧೯೮೮ರಲ್ಲಿ ಮುಂಬೈ ವಿಶ್ವವಿದ್ಯಾನಿಲಯದಿಂದ ನಿವೃತ್ತರಾದರು.

ಬಾಳ ಸಂಜೆ

ಮುಂಬೈ ವಿಶ್ವವಿದ್ಯಾಲಯದಿಂದ ನಿವೃತ್ತರಾದ ಮೇಲೆ ಹಾವನೂರರು ಕೆಲವು ವರ್ಷಗಳನ್ನು ಕಳೆದದ್ದು ಪುಣೆಯಲ್ಲಿ. ಅಲ್ಲಿ ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರದ ಉಪಾಧ್ಯಕ್ಷರಾಗಿ ಅದನ್ನು ಕಟ್ಟಿಬೆಳೆಸಿದರು. ೧೯೯೫-೯೬ರ ವೇಳೆಗೆ ಕರ್ನಾಟಕ ಸರ್ಕಾರದ ಸಮಗ್ರ ಹರಿದಾಸ ಸಾಹಿತ್ಯ ಯೋಜನೆಯ ಕಾರ್ಯಕಾರಿ ಸಂಪಾದಕರ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾದಾಗ ಅವರ ವಾಸ್ತವ್ಯ ಬೆಂಗಳೂರಿಗೆ ಬದಲಾಯಿತು. ಇದರ ಜೊತೆಗೆ ೧೯೯೬ರಿಂದ ೨೦೦೨ರ ವರೆಗೆ ಅವರು ಬೆಂಗಳೂರಿನ ಮಿಥಿಕ್ ಸೊಸೈಟಿಯ ಗ್ರಂಥಾಲಯದ ಗೌರವ ನಿರ್ದೇಶಕರಾಗಿ, ೨೦೦೩ರಿಂದ ೨೦೦೫ರ ವರೆಗೆ ಮಂಗಳೂರಿನ ಕರ್ನಾಟಕ ಥಿಯೊಲಾಜಿಕಲ್ ಕಾಲೇಜಿನ ಸಂಶೋಧನ ಕೇಂದ್ರದಲ್ಲಿ ಗೌರವ ಸಂಶೋಧಕರಾಗಿ ಕಾರ್ಯನಿರ್ವಹಿಸಿದ್ದಿದೆ. ಪ್ರಾಸ್ಟ್ರೇಟ್ ಗ್ರಂಥಿಯ ಸಮಸ್ಯೆ, ಹೃದಯಾಪಘಾತ ಮುಂತಾದ ಅನಾರೋಗ್ಯಗಳ ನಡುವೆಯೂ ಅವರು ವಿದೇಶ ಪ್ರಯಾಣಗಳನ್ನು ಕೈಗೊಂಡರು. ಪಾವೆಂ. ಆಚಾರ್ಯರ ಸಮಗ್ರ ಕೃತಿ ಸಂಪಾದನೆಯಂತಹ ಹಲವಾರು ಹೊಸ ಹೊಸ ಯೋಜನೆಗಳನ್ನು ಹಾಕಿಕೊಂಡು ಯಶಸ್ವಿಯಾಗಿ ಮಾಡಿ ಮುಗಿಸಿದರು.

ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದವರನ್ನು ಪ್ರಶಸ್ತಿಗಳು ಅರಸಿಕೊಂಡು ಬರುವುದು ಸಹಜವಷ್ಟೇ! ಕರ್ನಾಟಕ ರಾಜ್ಯ ಸರ್ಕಾರವು ಕೊಡಮಾಡುವ ರಾಜ್ಯೋತ್ಸವ ಪ್ರಶಸ್ತಿ (೧೯೯೩), ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ (೧೯೯೯), ಕರ್ನಾಟಕ ಇತಿಹಾಸ ಅಕಾಡೆಮಿಯ ೧೩ನೇ ವಾರ್ಷಿಕ ಸಮ್ಮೇಳನದ ಅಧ್ಯಕ್ಷ ಪದವಿ (೧೯೯೯), ಮಂಗಳೂರಿನ 'ಸಂದೇಶ' ಪ್ರಶಸ್ತಿ (೨೦೦೩), ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ (೨೦೦೪). ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ ಅಧ್ಯಕ್ಷ ಪದವಿ (೨೦೦೫), ಹಂಪಿ ವಿಶ್ವವಿದ್ಯಾಲಯದ 'ನಾಡೋಜ' (೨೦೦೮) ಹಾಗೂ ಚಿದಾನಂದ ಪ್ರಶಸ್ತಿ (೨೦೦೮) ಮುಂತಾದವು ಹಾವನೂರರನ್ನು ಅಲಂಕರಿಸಿದ ಕೆಲವು ಪ್ರಶಸ್ತಿಗಳು. ೨೦೦೮ರಲ್ಲಿ ಹಾವನೂರರ ೮೦ನೇ ವರ್ಷದ ಹುಟ್ಟುಹಬ್ಬದ ವೇಳೆಯಲ್ಲಿ ಅವರ ಆಯ್ದ ಬರಹಗಳ ಬೃಹತ್ ಸಂಪುಟ 'ಸಂ-ಕಥನ' ಹೊರಬಂದಿತು.

ಪತ್ನಿ ಭಾರತಿ, ಪುತ್ರರಾದ ನಾಗೇಶ, ಸಂಜಯ ಮತ್ತು ಮಗಳು ನಿವೇದಿತಾರೊಂದಿಗೆ ನಾಲ್ಕಾರು ಮಂದಿ ಮೊಮ್ಮಕ್ಕಳೊಂದಿಗೆ, ಎಲ್ಲಕ್ಕಿಂತ ಹೆಚ್ಚಾಗಿ ಅಸಂಖ್ಯ ಸ್ನೇಹಿತರು ಮತ್ತು ಅಭಿಮಾನಿಗಳೊಂದಿಗೆ ಜೀವನದ ಪ್ರತಿಕ್ಷಣವನ್ನೂ ಚೇತೋಹಾರಿಯಾಗಿ ಕಳೆದವರು ಹಾವನೂರರು. ಅನಾರೋಗ್ಯ ಎಂದೂ ಅವರ ಚೈತನ್ಯಶಕ್ತಿಯನ್ನು ಕುಂದಿಸಿರಲಿಲ್ಲ. ಒಮ್ಮೆ

ಸಂ–ಕಥನ ಬಿಡುಗಡೆ

ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಯೊಂದರ ತೀವ್ರ ನಿಗಾ ಘಟಕದಲ್ಲಿ ಇರಿಸಲಾಗಿತ್ತು. ಕೆಲವು ದಿನಗಳ ಕಾಲ ಅವರಿಗೆ ಬಂದು ಹೋದವರ ನೆನಪೂ ಹತ್ತುತ್ತಿರಲಿಲ್ಲ. ಮೊದಲ ಮೂರ‍್ನಾಲ್ಕು ದಿನಗಳು ತೀರಾ ನಿರಾಶಾದಾಯಕವಾಗಿದ್ದವು. ಐದನೇ ದಿನ ನನ್ನ ಮುಖ ನೋಡಿದಾಗ ಕ್ಷೀಣವಾದ ದನಿಯಲ್ಲಿ 'ಶ್ರೀನಿವಾಸ ಮೂರ್ತಿ, ಉದಯವಾಣಿಗೆ ಲೇಖ ಬರೆದು ಕೊಡಲು ಸದ್ಯಕ್ಕೆ ಆಗುತ್ತಿಲ್ಲ. ಅವರಿಗೆ ತಿಳಿಸುತ್ತೀರಾ. ಹಾಗೇ ಬೆನೆಟ್ (ಮಂಗಳೂರಿನ ಕೆ.ಟಿ.ಸಿ.ಯ ಗ್ರಂಥಪಾಲ)ನ ಕಡೆಯಿಂದ ತಂದ ಪುಸ್ತಕಗಳನ್ನ ಪರತ ಕೊಡಬೇಕು' ಎಂದರು. ಕೂಡಲೇ ಅವರ ಮಗಳು ಉದ್ಗರಿಸಿದರು: "ನಮ್ಮಪ್ಪ ಪುಸ್ತಕದ ವಿಷಯ ಮಾತಾಡ್ಲಿಕ್ಕ ಹತ್ತಿದ ಅಂದ್ರ ಅವನ ಆರೋಗ್ಯ ಛಲೋ ಆತು ಅಂತಲೇ ಅರ್ಥ. ಇನ್ನು ಅಡ್ಡಿಲ್ಲ!" ಆಸ್ಪತ್ರೆಯಿಂದ ಮನೆಗೆ ಕಳುಹಿಸುವಾಗ ಡಾಕ್ಟರರು "ನಾವೇನೋ ನಿಮ್ಮನ್ನು ಔಷಧಿ ಕೊಟ್ಟು ಬದುಕಿಸಿದ್ದೇವೆ. ಆದರೆ ನೀವು ನಿಜವಾಗಿ ಉಳಿದದ್ದು ನಿಮ್ಮ ವಿಲ್‌ಪವರ್‌ನಿಂದ ದೈಹಿಕ ಶ್ರಮವನ್ನು ಕಡಿಮೆ ಮಾಡಿಕೊಳ್ಳಿರಿ. ಆದರೆ ಓದು–ಬರಹವನ್ನು ಮಾತ್ರ ನಿಲ್ಲಿಸಬೇಡಿ. ಅದೇ ನಿಮ್ಮನ್ನು ಆರೋಗ್ಯವಾಗಿ ಇಟ್ಟಿದೆ." ಎಂದರು. ನಿಜವೇ. ಕಡೆಯವರೆಗೂ ಹಾವನೂರರನ್ನು ಚೆನ್ನಾಗಿ ಇಟ್ಟಿದದ್ದು ಅವರ ಓದು–ಬರಹಗಳೇ.

೨೦೧೦ರ ಏಪ್ರಿಲ್ ೫ರಂದು ಹಾವನೂರು ತೀವ್ರ ಹೃದಯಾಘಾತದಿಂದ ಬೆಂಗಳೂರಿನಲ್ಲಿ ನಿಧನರಾದರು. ಅವರ ಅಂತಿಮದರ್ಶನವನ್ನು ಪಡೆಯಲೆಂದು ಬಂದ ಅನೇಕರ ನಡುವೆ ಕ್ರೈಸ್ತ ಪಾದ್ರಿಗಳು, ಉತ್ತರಾದಿ ಮಠದ ಪ್ರತಿನಿಧಿಗಳು ಇಬ್ಬರೂ ಇದ್ದದ್ದು ಜೀವನವಿಡೀ ಅವರು ಪಾಲಿಸಿಕೊಂಡು ಬಂದ ಸಮನ್ವಯದ ಸಂಕೇತವಾಗಿತ್ತು.

❑

ಅಧ್ಯಾಯ – ೨

ಸಂಶೋಧಕ

ಸಣ್ಣಕತೆ, ಕವಿತೆ, ವಿಮರ್ಶೆ, ಪ್ರಬಂಧ ಮುಂತಾದ ಸೃಜನಶೀಲ ಸಾಹಿತ್ಯದ ಕ್ಷೇತ್ರದಲ್ಲಿ ಹಾವನೂರರು ಸಾಕಷ್ಟು ಕೃಷಿಯನ್ನು ನಡೆಸಿರುವವರಾದರೂ ಪ್ರಧಾನವಾಗಿ ಅವರು 'ಸಂಶೋಧಕರೆಂದೇ ವಿದ್ವದ್ವಲಯದಲ್ಲಿ ಪರಿಚಿತರು. ಇದಕ್ಕೆ ಪ್ರಮುಖ ಕಾರಣ ಅವರ ಪಿಎಚ್.ಡಿ. ಮಹಾಪ್ರಬಂಧವಾದ **ಹೊಸಗನ್ನಡದ ಅರುಣೋದಯ** ಹಾಗೂ ಕನ್ನಡ ಪುಸ್ತಕೋದ್ಯಮ ಪತ್ರಿಕೋದ್ಯಮ, ಸಾಂಸ್ಕೃತಿಕ ಇತಿಹಾಸ ಮುಂತಾದವುಗಳನ್ನು ಕುರಿತಂತೆ ಅವರು ರಚಿಸಿರುವ ಹಲವಾರು ಸಂಪ್ರಬಂಧಗಳು.

ಹೊಸಗನ್ನಡದ ಅರುಣೋದಯ

ಸುಮಾರು ಒಂದು ಸಾವಿರ ವರ್ಷಗಳಷ್ಟು ಸುದೀರ್ಘವಾದ ಇತಿಹಾಸವನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಂಪರೆಯ ಸಮಗ್ರ ಚರಿತ್ರೆಯನ್ನು ಬರೆಯುವ ಪ್ರಯತ್ನದಲ್ಲಿ ರಂ.ಶ್ರೀ. ಮುಗಳಿಯವರಿದ್ದಾಗಲೇ ಅವರ ಪರಿಚಯ ಹಾವನೂರರಿಗಾದದ್ದು ಯೋಗಾಯೋಗವೆನ್ನಬೇಕು. ೧೯೫೫ರಲ್ಲಿ ಎಂ.ಎ. ಮುಗಿಸಿದ ನಂತರ ಹಾವನೂರರು ಸಾಂಗಲಿಗೆ ಹೋಗಿ ಮುಗಳಿಯವರಿಗೆ ಭೇಟಿಕೊಟ್ಟು ತಾವು ಉತ್ತೀರ್ಣರಾದ ವಿಷಯ ತಿಳಿಸಿದಾಗ ಅವರು "ನೀನು ಎರಡನೇ ದರ್ಜೆಯಲ್ಲಿ ಪಾಸಾಗಿದ್ದೀಯೆ. ಹಾಗಾಗಿ ಯಾವುದಾದರೂ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕನಾಗಬಹುದು. ಆದರೆ ನೀನು ಅಷ್ಟರಮಟ್ಟಿಗೆ ಹಳಗನ್ನಡವನ್ನು ಓದಿಕೊಂಡಿಲ್ಲ. ಕನ್ನಡದಲ್ಲಿ ಪರಿಣತಿ ಬೇಕೆಂದವರು ಏನಾದರೂ ಹಳಗನ್ನಡ ಕೃತಿಗಳನ್ನು ಆಳವಾಗಿ ಓದಿಕೊಂಡಿರಬೇಕು" ಎಂದು ಸೌಮ್ಯವಾಗಿಯೇ ಎಚ್ಚರಿಸಿದಂತೆ. 'ತಾವೆಂದೂ ಅಧ್ಯಾಪಕರಾಗುವ ವಿಚಾರವನ್ನು ಇಟ್ಟುಕೊಂಡಿಲ್ಲ, ಆದರೆ ಪಿಎಚ್.ಡಿ. ಅಧ್ಯಯನವನ್ನು ಕೈಗೆತ್ತಿಕೊಳ್ಳುತ್ತೇನೆ' ಎಂದು ಉತ್ತರಿಸಿ ಹಾವನೂರರು ಆ ನಿಮಿಷಕ್ಕೆ ಪಾರಾದರಂತೆ!

ಇದೇ ಸುಮಾರಿನಲ್ಲಿ ೧೯ನೇ ಶತಮಾನದ ಸಾಹಿತ್ಯವನ್ನು ಕುರಿತು ಒಂದು ವಿಚಾರ ಸಂಕಿರಣ ನಡೆಯಿತು. ಆ ಸಂಕಿರಣದ ಅಧ್ಯಕ್ಷರಾಗಿದ್ದ ಮುಗಳಿಯವರು ಅಲ್ಲಿ ಹೊಸಗನ್ನಡದ ಆರಂಭಕಾಲದ ಸಾಹಿತ್ಯದ ಬಗ್ಗೆ ಅಂದು ಪರಿಣಾಮಕಾರಿಯಾದ ಭಾಷಣವನ್ನು ಮಾಡಿದರು. ಇದರಿಂದ ಪ್ರಭಾವಿತರಾದ ಹಾವನೂರರು ಆ ಬಗ್ಗೆ ಸ್ವಲ್ಪ ಹುಡುಕಾಟ ನಡೆಸಿದಾಗ ಸಿಕ್ಕಿದ್ದು ಲಂಡನ್ನಿನ ಬ್ರಿಟಿಷ್ ವಸ್ತು ಸಂಗ್ರಹಾಲಯದಿಂದ

೧೯೧೦ರಲ್ಲಿ ಪ್ರಕಟವಾಗಿದ್ದ, ಎಲ್.ಡಿ. ಬಾರ್ನೆಟ್‌ರವರು ಸಂಪಾದಿಸಿದ್ದ `Catalogue of the Kannada, Badaga and Kurg Books in the Library of the British Museum' ಎಂಬ ಕೃತಿ. ಸುಮಾರು ೨೮೦ ಪುಟಗಳ ಈ ಬೃಹತ್ ಸೂಚಿಯಲ್ಲಿ ಕಲೆ, ವಿಜ್ಞಾನ, ಧರ್ಮ, ಇತಿಹಾಸ, ಕಾನೂನು ಮುಂತಾದ ಹಲವು ಹತ್ತು ಕ್ಷೇತ್ರಗಳಿಗೆ ಸಂಬಂಧಿಸಿದ ಸುಮಾರು ೧೫೦೦ ಕನ್ನಡ ಕೃತಿಗಳ ಸಮಗ್ರ ವಿವರಗಳಿವೆ. 'ಅಜ್ಞಾತ ಕಾಲಖಂಡ', 'ಅನುಕರಣೆಯ ಯುಗ' ಎಂದೆಲ್ಲಾ ಅಪಪ್ರಥೆಗೆ ಒಳಗಾಗಿದ್ದ ೧೯ನೇ ಶತಮಾನದಲ್ಲಿ ಇಷ್ಟು ಅಗಾಧವಾದ ಹಾಗೂ ವೈವಿಧ್ಯಪೂರ್ಣವಾದ ಸಾಹಿತ್ಯಕೃಷಿ ನಡೆದಿದೆ ಎನ್ನುವುದನ್ನು ಈ ಸೂಚಿಯಿಂದ ಮನಗಂಡ ಹಾವನೂರರು ಆ ಕಾಲಘಟ್ಟದ ಸಾಹಿತಿ – ಸಾಹಿತ್ಯಗಳನ್ನು ಕುರಿತಾದ ಆಮೂಲಾಗ್ರ ವಿಶ್ಲೇಷಣೆಯನ್ನೇ ತಮ್ಮ ಪಿಎಚ್.ಡಿ.ಯ ವಿಷಯವಾಗಿ ಆರಿಸಿಕೊಂಡು ರಂ.ಶ್ರೀ. ಮುಗಳಿಯವರ ಮಾರ್ಗದರ್ಶನದಲ್ಲಿ ಪೂನಾ ವಿಶ್ವವಿದ್ಯಾಲಯದಲ್ಲಿ ತಮ್ಮ ಅಧ್ಯಯನವನ್ನು ಆರಂಭಿಸಿದರು (೧೯೬೩).

ಇದೇ ವೇಳೆಗೆ ಅವರಿಗೆ ಮುಂಬೈನ ಟಿ.ಐ.ಎಫ್.ಆರ್.ನಲ್ಲಿ ಕೆಲಸ ದೊರೆತದ್ದರಿಂದ ವಾಸ್ತವ್ಯವನ್ನು ಮುಂಬೈಗೆ ಬದಲಿಸಿದ್ದು ಬಹಳ ಅನುಕೂಲವಾಯಿತು. ಜೊತೆಗೆ ಮುಂಬೈ ವಿಶ್ವವಿದ್ಯಾಲಯದಲ್ಲಿ ಇತಿಹಾಸದ ಪ್ರಾಧ್ಯಾಪಕರಾಗಿದ್ದ ಡಾ. ಚಿದಂಬರ ಕುಲಕರ್ಣಿ, ಹಿರಿಯ ಸಂಶೋಧಕ ಭೀಮರಾವ ಚಿಟಗುಪ್ಪಿ, ಗೆಳೆಯರಾದ ವ್ಯಾಸರಾವ ನಿಂಜೂರ, ಕೃಷ್ಣ ಕೊಲ್ಹಾರ ಕುಲಕರ್ಣಿ ಮುಂತಾದವರ ಒತ್ತಾಸೆಯಿಂದಾಗಿ ೧೯೭೧ರಲ್ಲಿ ಹಾವನೂರರ ಹೆಸರಿನ ಹಿಂದೆ 'ಡಾ' ಎಂಬ ವಿಶೇಷಣ ಸೇರಿಕೊಂಡಿತು. ಮಹಾಪ್ರಬಂಧದ ಪರೀಕ್ಷಕರಾದ ಡಾ. ಹಾ.ಮಾ. ನಾಯಕ ಮತ್ತು ಪ್ರೊ. ಎಂ. ಮರಿಯಪ್ಪಭಟ್ಟ ಇಬ್ಬರೂ ಮುಕ್ತ ಕಂಠದಿಂದ ಅದನ್ನು ಶ್ಲಾಘಿಸಿದರು.

೧೯೭೪ರಲ್ಲಿ ಈ ಮಹಾ ಪ್ರಬಂಧವು ಕೃತಿ ರೂಪದಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಹೊರಬಂದುದರ ಹಿನ್ನೆಲೆ ಸ್ವಾರಸ್ಯಕರವಾದದ್ದು; ಅದನ್ನು ಹಾವನೂರರ ಬಾಯಲ್ಲೇ ಕೇಳಬೇಕು:

> *"ಪಿಎಚ್.ಡಿ. ಪದವಿ ಬಂದ ಮರುವರ್ಷ ಬೆಂಗಳೂರಿಗೆ ನಾನು ಹೋದಾಗ ಆಕಸ್ಮಾತ್ ಹಾ.ಮಾ.ನಾ.ರ ಭೆಟ್ಟಿಯಾಯಿತು. ಹೇಳಿದ: 'ಸರ್, ನೀವು ಥೀಸಿಸ್‌ನ ಹಸ್ತಪ್ರತಿಯನ್ನು ವಿಶ್ವವಿದ್ಯಾಲಯಕ್ಕೆ ಮರಳಿ ಕಳಿಸಿಲ್ಲವಂತೆ. ಅದು ಬಾರದೆ ನಿಮ್ಮ ಪರೀಕ್ಷೆ ಸಂಭಾವನೆಯನ್ನು ತಡೆದು ನಿಲ್ಲಿಸಿದ್ದಾರೆ. ಬೇಗ ಕಳುಹಿಸುವಿರಾ?'*
>
> *'ಬಿಡಲಿ. ನನಗೆ ಅದರಲ್ಲಿಯ ವಿಷಯಗಳನ್ನು ಆಗಾಗ ರೆಫರ್ ಮಾಡುವುದಿರುತ್ತದೆ. ಬೇರೆಲ್ಲಿಯೂ ಸಿಕ್ಕುವುದಿಲ್ಲ'.*
>
> *ಸ್ವಾಭಾವಿಕವಾಗಿಯೇ ನನಗೆ ಹೆಮ್ಮೆ ಉಕ್ಕೇರಿತು. ಮತ್ತೊಮ್ಮೆ ಭೆಟ್ಟಿಯಾದಾಗ ಅವರು ಕೇಳಿದರು.*
>
> *'ನಿಮ್ಮ ಥೀಸಿಸ್ ಅನ್ನು ಯಾರಾದರೂ ಪ್ರಕಾಶಕರು ಪ್ರಕಟಮಾಡಲು ಮುಂದೆ ಬಂದಿದ್ದಾರೆಯೇ?'*

'ಸರ್ವಥಾ ಇಲ್ಲ' ಎಂದೆ. 'ಯುನಿವರ್ಸಿಟಿಯಿಂದ ನಾನು ಪ್ರಕಟಿಸುವುದಕ್ಕೆ ಒಪ್ಪುವಿರಾ?' ಎಂದರು.
'ನೀವು ಪ್ರಕಟಮಾಡುವುದಾದರೆ ಅದು ನನ್ನ ಭಾಗ್ಯ' ಎಂದೆ ಒಪ್ಪಿದರು. ಹಾಗೆ ಮಾಡಿಯೂ ಬಿಟ್ಟರು (೧೯೭೪).

ಕೃತಿಯ ಮುನ್ನುಡಿಯಲ್ಲಿ ಹಾಮಾನಾ ಬರೆದಿರುವುದರ ಆಯ್ದ ಭಾಗಗಳನ್ನು ನೋಡುವುದಾದರೆ:

"ಕನ್ನಡಭಾಷೆ, ಸಾಹಿತ್ಯ ಸಂಬಂಧವಾದ ಸಂಶೋಧನೆಯ ಕ್ಷೇತ್ರದಲ್ಲಿ 'ಹೊಸಗನ್ನಡ ಅರುಣೋದಯ'ದ ಪ್ರಕಟಣೆ ಅತ್ಯಂತ ಮಹತ್ವಪೂರ್ಣವಾದ ಘಟನೆಯೆಂದು ನಾನು ಭಾವಿಸುತ್ತೇನೆ. ಒಂದು ನಿರ್ದಿಷ್ಟ ಕಾಲಾವಧಿಯ ನಮ್ಮ ಸಾಹಿತ್ಯದ ಹಿನ್ನೆಲೆಯ ಚರಿತ್ರೆ ಇಷ್ಟು ವ್ಯಾಪಕವಾಗಿ, ಹೊಸ ಹೊಸ ವಿಚಾರಗಳನ್ನು ತುಂಬಿಕೊಂಡು ಇದುವರೆಗೆ ಪ್ರಕಟವಾಗಿರಲಿಲ್ಲ. ಕನ್ನಡ ಸಾಹಿತ್ಯ ಚರಿತ್ರೆಗೆ ಡಾ. ಹಾವನೂರರ ಈ ಗ್ರಂಥ ಹೊಸ ಆಯಾಮಗಳನ್ನು ಜೋಡಿಸುತ್ತದೆ.

ಹತ್ತೊಂಬತ್ತನೆಯ ಶತಮಾನ ನಮ್ಮ ರಾಷ್ಟ್ರ ಜೀವನದಲ್ಲಿಯೇ ತುಂಬ ವಿಶಿಷ್ಟವಾದ ಅವಧಿ. ರಾಜಕೀಯಕ್ಕೆ ಸಂಬಂಧಿಸಿದಂತೆ ನಮ್ಮ ಸ್ವಾತಂತ್ರ್ಯ ಪೂರ್ಣವಾಗಿ ಹರಣವಾದದ್ದೂ ಅದನ್ನು ಮರಳಿ ಪಡೆಯಬೇಕೆಂಬ ಛಲ ಹರಳುಗೊಂಡದ್ದೂ ಈ ಕಾಲದಲ್ಲಿಯೇ. ಹೊರಗಿನ ಆಚಾರ ವಿಚಾರ ಪದ್ಧತಿ ಪರಂಪರೆಗಳು ನವೀನ ವಿಚಾರಧಾರೆಗಳು ನಮಗೆ ಪರಿಚಯವಾದವು. ಕ್ರಾಂತಿಕಾರಕವೆಂದು ತೋರುತ್ತಿದ್ದ ಅನೇಕ ಸಂಗತಿಗಳು ರಾಷ್ಟ್ರಜೀವನವನ್ನು ತುಂಬಿಕೊಂಡವು. ಹಿಂದಿನ ಸಹಸ್ರಾರು ವರ್ಷಗಳ ಚರಿತ್ರೆಯಲ್ಲಿ ಯಾವಾಗಲೂ ಕಂಡುಬರದ ಕ್ರಿಯೆ – ಪ್ರತಿಕ್ರಿಯೆಗಳು ಈ ಕಾಲದಲ್ಲಿ ತೋರಿಸಿಕೊಂಡವು. ಬದುಕನ್ನು ದೃಢವಾಗಿ ತುಂಬಿಕೊಂಡಿದ್ದ ನಂಬಿಕೆ ನಡವಳಿಕೆಗಳನ್ನು ಪ್ರಶ್ನಿಸುವ ಧೈರ್ಯ ಉಂಟಾಯಿತು. ಹಳತು ಹೊಸದರ ಘರ್ಷಣೆಯೊಂದು ಕಡೆ; ಅವುಗಳ ಕಸಿಯಿಂದ ಮೂಡಿದ ಚಿಗುರು ಇನ್ನೊಂದು ಕಡೆ. ಒಟ್ಟಿನಲ್ಲಿ ರಾಷ್ಟ್ರದ ಗತಿಸ್ಥಿತಿಗಳು ಸಂಕೀರ್ಣ ಸ್ವರೂಪವನ್ನು ತಾಳಿದ್ದವು. ಪಾಶ್ಚಾತ್ಯರ ಸಂಪರ್ಕದಿಂದ ಇಡೀ ದೇಶದಲ್ಲಿ ಹೊಸ ಅಲೆಗಳೆದ್ದುವು. ಕುಸಿದುಹೋಗಿದ್ದ ಆಡಳಿತ ವ್ಯವಸ್ಥೆಗೆ ಹೊಸ ಚೇತನವೂ ತುಕ್ಕುಗಟ್ಟಿದ್ದ ವಿಚಾರಗಳಿಗೆ ಹೊಸ ಕಾಂತಿಯೂ ಬಂದವು. ಇದೆಲ್ಲದರ ಪರಿಣಾಮ ಆ ಕಾಲದ ಸಾಹಿತ್ಯಿಕ ಚಟುವಟಿಕೆಗಳ ಮೇಲೆ ಆಗದೆ ಇರಲಿಲ್ಲ. ಆದ್ದರಿಂದ ಭಾರತೀಯ ಭಾಷೆ – ಸಾಹಿತ್ಯಗಳ ನವೋದಯ ಹತ್ತೊಂಬತ್ತನೆಯ ೧೯ನೇ ಶತಮಾನದಲ್ಲಿ ಕಣ್ದೆರೆಯಿತು. ಕುಡಿಯಾಯಿತು. ಯಾವುದನ್ನು ನಾವು ಆಧುನಿಕ ಸಾಹಿತ್ಯ ಎಂದು ಕರೆಯುತ್ತೇವೆಯೋ ಅದರ ಆರಂಭವಾದದ್ದು ನಿಶ್ಚಿತವಾಗಿ ಶತಮಾನದಲ್ಲಿ. ಹೊಸ ಹೊಸ ಸಾಹಿತ್ಯ ಪ್ರಕಾರಗಳು ಈ ಕಾಲದಲ್ಲಿ ಕಾಣಿಸಿಕೊಂಡವು. ಸಾಹಿತ್ಯದ ವಸ್ತು, ಪುರಾಣ ಇತಿಹಾಸಗಳಿಂದ ದೂರವಾಗಿ ಸಮಾಜ ಜನಜೀವನಗಳಿಗೆ ಹತ್ತಿರವಾಯಿತು. ಗದ್ಯ ತನ್ನ ಸಾಮ್ರಾಜ್ಯವನ್ನು

ಸ್ಥಾಪಿಸಿತು. ಮುದ್ರಣ, ಗ್ರಂಥ ಪ್ರಕಟಣೆ. ನಿಯತಕಾಲಿಕೆಗಳು, ಪತ್ರಿಕೆಗಳು ಇವುಗಳಿಂದಾಗಿ ಸಾಹಿತ್ಯ ಅರಮನೆ ಗುರುಮನೆಗಳಿಂದ ಹೊರಬಂದು ಎಲ್ಲರ ಸ್ವತ್ತಾಯಿತು. ರಾಷ್ಟ್ರ ಜೀವನದ ಈ ಪರಿಸ್ಥಿತಿಯಿಂದ ಕನ್ನಡವೇನೂ ಬೇರೆಯಾಗಿರಲಿಲ್ಲ. ಇಲ್ಲಿನ ಚಟುವಟಿಕೆಗಳು, ರಾಷ್ಟ್ರದ ಇತರ ಭಾಗಗಳಿಗೆ ಹೋಲಿಸಿದರೆ, ಆರಂಭವಾಗುವುದರಲ್ಲಿ ಸ್ವಲ್ಪ ನಿಧಾನವಾಗಿರಬಹುದು. ಆದರೆ ಸ್ವರೂಪದಲ್ಲಿ ಮಾತ್ರ ಯಾವ ಬದಲಾವಣೆಯೂ ಇರಲಿಲ್ಲ. ಆದ್ದರಿಂದ ಈ ಶತಮಾನವನ್ನು ಡಾ. ಹಾವನೂರ ಅವರು ಹೊಸಗನ್ನಡ ಅರುಣೋದಯ ಕಾಲವೆಂದು ಕರೆದಿರುವುದು ಔಚಿತ್ಯಪೂರ್ಣವಾಗಿದೆ. ಈ 'ಮಹಾಬೆಳಗಿ'ನ ಕಥೆಯನ್ನು ನಿರೂಪಿಸುವ ಅದೃಷ್ಟ ಅವರ ಪಾಲಿನದಾಗಿದೆ...

...ಕೇವಲ ಚರಿತ್ರೆಯ ಅಂಶಗಳು ತುಂಬಿಕೊಂಡಿರದೆ ವಿಮರ್ಶೆಯೂ ಮೌಲ್ಯಮಾಪನವೂ ಈ ಬರಹದಲ್ಲಿ ಹೊಳವು ಹಾಕಿರುವುದು ಒಂದು ವಿಶೇಷ. ಅತ್ಯುತ್ತಮವಾದ ಸಾಹಿತ್ಯ ಚರಿತ್ರೆ ಮಾಡಬೇಕಾದ ಕೆಲಸವೇ ಇದು. ಕೆಲ ಸಂದರ್ಭದಲ್ಲಿ ಡಾ. ಹಾವನೂರರು ಮೌಲಿಕವಾಗಿ ವಿಚಾರ ವಿವೇಚನೆ ಮಾಡಿದ್ದಾರೆ. ಹೊಸ ಆಧಾರಗಳನ್ನು ಕಲೆಹಾಕಿದ್ದಾರೆ...

.... ಡಾ. ಹಾವನೂರರು ತಮ್ಮ ಹೇಳಿಕೆಗಳನ್ನು ಕೇವಲ ಎರಡನೆಯವರ ಹೇಳಿಕೆಗಳ ಮೇಲೆ ಸ್ಥಾಪಿಸಲು ಸಾಮಾನ್ಯವಾಗಿ ಇಷ್ಟಪಡುವುದಿಲ್ಲ. ಎಷ್ಟೇ ಕಷ್ಟವಾಗಲಿ, ನಷ್ಟ ಬರಲಿ ಮೂಲ ಆಕರಗಳನ್ನು ಕಣ್ಣಾರೆ ಕಂಡು ಬಳಸಬೇಕೆಂಬ ಛಲಗಾರರು ಅವರು. ಆದ್ದರಿಂದಲೇ 'ಹೊಸಗನ್ನಡದ ಅರುಣೋದಯ' ಗ್ರಂಥದಲ್ಲಿ ಅನನ್ಯವಾದ ಒಂದು ಅಧಿಕೃತತೆ ತುಂಬಿದೆ. ಇದು ಒಂದು ವಿಧದಲ್ಲಿ ತುಂಬ ವಿಶಿಷ್ಟವಾದ 'ಹಾವನೂರುತನ'!

.... 'ಹೊಸಗನ್ನಡದ ಅರುಣೋದಯ' ಒಂದು ಅಪರೂಪದ ಆಕರಗ್ರಂಥ; ಶ್ರೇಷ್ಠವಾದ ಸಂಶೋಧನ ಗ್ರಂಥ. ನಮ್ಮ ಸಾಹಿತ್ಯ ಚರಿತ್ರೆಯ ಮುಂದಿನ ಸಂಶೋಧಕರು ಇದಕ್ಕೆ ಹೊಸ ವಿಷಯಗಳನ್ನು ಸೇರಿಸಬಹುದು; ಇದರ ಕೊರತೆಗಳನ್ನೂ ಹೇಳಬಹುದು. ಆದರೆ ಇದನ್ನು ಅಭ್ಯಸಿಸದೆ, ಆಧಾರವಾಗಿಟ್ಟು ಕೊಳ್ಳದೆ ಹತ್ತೊಂಬತ್ತನೆ ಶತಮಾನಕ್ಕೆ ಸಂಬಂಧಿಸಿದ ಕೆಲಸ ಮಾಡುವುದು ಮಾತ್ರ ಖಂಡಿತ ಸಾಧ್ಯವಿಲ್ಲ."

ಹಾ.ಮಾ. ನಾಯಕರಂತಹ ಬಹುಶ್ರುತರಿಂದ ಇಷ್ಟೆಲ್ಲಾ ಪ್ರಶಂಸೆಗೆ ಒಳಗಾಗಬೇಕಾದರೆ ಈ ಕೃತಿಯ ಮಹತ್ವ ಹಾಗೂ ವೈಶಿಷ್ಟ್ಯಗಳೇನಿರಬೇಕು ಎಂಬುದನ್ನು ನೋಡೋಣ:

* ಅವಜ್ಞೆಗೆ ಒಳಗಾಗಿದ್ದ ಸುಮಾರು ೬೫೦ ವ್ಯಕ್ತಿಗಳು ಹಾಗೂ ಸುಮಾರು ೧೬೦೦ ಕೃತಿಗಳ ಪರಿಚಯವನ್ನು ಒಳಗೊಂಡ ಬೃಹತ್ ಸಂಕಲನವಿದು. ೧೯ನೇ ಶತಮಾನದಲ್ಲಿ ಕನ್ನಡ ಸಾಹಿತ್ಯ ಕೃಷಿಯನ್ನು ನಡೆಸಿದ ಹಾಗೂ ವಿವಿಧ ಸ್ತರಗಳಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿಯ ಕ್ಷೇತ್ರಗಳಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ

ಸಂಪರ್ಕಕ್ಕೆ ಬಂದ ಬಹುಮಟ್ಟಿಗೆ ಎಲ್ಲ ವ್ಯಕ್ತಿ ಹಾಗೂ ಸಂಸ್ಥೆಯನ್ನು ಇಲ್ಲಿ ಪರಿಚಯಿಸಲಾಗಿದೆ.

* ಕಾಗದ ಪತ್ರಗಳ ದಾಖಲೆಗಳನ್ನು (Archival Meterial) ಅಧ್ಯಯನದ ಮೂಲಕ ಆಕರವಾಗಿ ಬಳಸಿಕೊಂಡು ರಚಿತವಾದ ಕನ್ನಡದ ಆದ್ಯ ಮಹಾಪ್ರಬಂಧವಿದು.
* ಸಿನ್ನಾಮಿ, ಚಾರ್ಬೋನಾ, ಜಾನ್‌ಹ್ಯಾಂಡ್ಸ್, ರೀವ್, ರೀಡ್, ವೈಗ್ಲೆ, ಬಿಎಚ್.ರೈಸ್, ಇ.ಪಿ. ರೈಸ್, ಗ್ಯಾರೆಟ್, ಸ್ಯಾಂಡರ್ಸನ್, ಹೆನ್ರಿಹೇಗ್, ವುರ್ತ್, ಕಿಟೆಲ್, ತ್ರಿಗ್ಲರ್, ಮೆಕೆಂಝಿ, ಬುಕನನ್, ಫ್ಲೀಟ್, ವಿಲ್ಕ್ಸ್, ವಾಲ್ಟರ್ ಎಲಿಯಟ್, ಲೂಯಿರೈಸ್ ಮುಂತಾದ ಪಾಶ್ಚಾತ್ಯ ವಿದ್ವಾಂಸರ ಜೀವನ ಮತ್ತು ಸಾಧನೆಗಳನ್ನು ಕುರಿತಾದ ವಿಸ್ತೃತವಾದ ಮಾಹಿತಿ ಇಲ್ಲಿದೆ. ಕನ್ನಡ ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಗೆ ಪಾಶ್ಚಾತ್ಯರು ನೀಡಿದ ಕೊಡುಗೆಯನ್ನು ಕುರಿತಾದ ಇಷ್ಟು ವ್ಯಾಪಕವಾದ ವಿವರಗಳು ಹಿಂದೆಂದೂ ಈ ರೀತಿಯಲ್ಲಿ ಸಮಗ್ರವಾಗಿ ಹಾಗೂ ಒಂದೇಕಡೆ ದಾಖಲಾಗಿರಲಿಲ್ಲ.
* ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯವು ಬೆಳೆದು ಬಂದ ಬಗೆ, ಅದರ ವ್ಯಾಪ್ತಿ ಹಾಗೂ ವೈಶಿಷ್ಟ್ಯಗಳನ್ನು ಕುರಿತಂತೆ ಆಮೂಲಾಗ್ರವಾದ ವಿವರಗಳನ್ನು ಒಳಗೊಂಡಿರುವ ಹೆಗ್ಗಳಿಕೆ ಈ ಕೃತಿಯದು.
* ಶಿಕ್ಷಣ, ಇತಿಹಾಸ, ಪುರಾತತ್ತ್ವಶಾಸ್ತ್ರ, ಗ್ರಂಥಸಂಪಾದನೆ, ಅನುವಾದ, ಪಠ್ಯ ಪುಸ್ತಕರಚನೆ ಮುಂತಾದ ಕ್ಷೇತ್ರಗಳಲ್ಲಿ ೧೯ನೇ ಶತಮಾನದಲ್ಲಿ ನಡೆದ ಮೌಲಿಕ ಪ್ರಯತ್ನಗಳನ್ನು ದಾಖಲಿಸುವ ಮೂಲಕ ಹಾವನೂರರು ಹೊಸಗನ್ನಡವು ಹೇಗೆ ಆಧುನಿಕತೆಯ ಎಲ್ಲ ಅಗತ್ಯಗಳಿಗೆ ತನ್ನನ್ನು ತಾನು ತೆರೆದುಕೊಂಡಿತು ಎಂಬುದನ್ನು ಸಾಧಾರವಾಗಿ ತೋರಿಸಿಕೊಟ್ಟಿದ್ದಾರೆ.
* ಅಪರೂಪದ ಕನ್ನಡ ಕೃತಿಗಳ ಮುಖಪುಟದ ಚಿತ್ರಗಳನ್ನು ಮುದ್ರಿಸಿರುವುದು ಕೃತಿಯ ಕಲಾತ್ಮಕತೆಯನ್ನೂ, ಅಂತೆಯೇ ಅಧಿಕೃತತೆಯನ್ನೂ ಹೆಚ್ಚಿಸಿದೆ.
* ಕನ್ನಡವು ನಡುಗನ್ನಡದ ಹಂತದಿಂದ ಹೊಸಗನ್ನಡಕ್ಕೆ ಸ್ಥಿತ್ಯಂತರಗೊಂಡ ಕಾಲಘಟ್ಟವನ್ನು ಅತ್ಯಂತ ಸ್ಪಷ್ಟವಾಗಿ ಗುರುತಿಸಿರುವುದು ಇಲ್ಲಿಯ ವಿಶೇಷ. ಹೊಸಗನ್ನಡ ಗದ್ಯದಲ್ಲಿ ಬೈಬಲ್‌ನ ಭಾಷಾಂತರವನ್ನು ಪ್ರಕಟಿಸಿದ ಜಾನ್ ಹ್ಯಾಂಡ್ಸ್ ಬಳ್ಳಾರಿಗೆ ಬಂದ ವರ್ಷಾರಂಭದಿಂದ (೧೮೧೦) ಕನ್ನಡದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ ಎನಿಸಿದ 'ಇಂದಿರಾಬಾಯಿ' ಹೊರಬಂದ ವರ್ಷದವರೆಗಿನ (೧೮೯೯) ಅವಧಿಯನ್ನು ಹೊಸಗನ್ನಡದ ಅರುಣೋದಯದ ಕಾಲವೆಂದು ನಿರ್ಧರಿಸಿ ಆ ಕಾಲಘಟ್ಟದಲ್ಲಿ ನಡೆದಿರುವ ಸಾಹಿತ್ಯಕ ಚಟುಟಿಕೆಗಳನ್ನು ವಿವರಿಸಲಾಗಿದೆ.
* ೧೯ನೇ ಶತಮಾನದ ಕನ್ನಡ ಮುದ್ರಣಾಲಯಗಳನ್ನು ಕುರಿತಾದ ವಿಶೇಷ ಮಾಹಿತಿ ಇಲ್ಲಿದೆ. ಕಲ್ಕತ್ತ, ಮದ್ರಾಸ್, ಮುಂಬಯಿ ಮೊದಲಾದ ದೂರದ

ಊರುಗಳಿಂದ ಹಿಡಿದು ಬಾಗಲಕೋಟೆ, ಶಿವಮೊಗ್ಗ, ಗದಗ, ಕಾರವಾರ, ಉಡುಪಿ, ನೂಲಿವಿ, ಚಿಕ್ಕಬಳ್ಳಾಪುರ, ಸವಣೂರುಗಳಂತಹ ಚಿಕ್ಕ-ದೊಡ್ಡ ಊರುಗಳವರೆಗಿನ ಹತ್ತಾರು ಸ್ಥಳಗಳಲ್ಲಿದ್ದ ೮೫ಕ್ಕೂ ಹೆಚ್ಚು ಮುದ್ರಣಾಲಯಗಳು ಮತ್ತು ಅವುಗಳ ಕಾರ್ಯ ಚಟುವಟಿಕೆಗಳ ವಿವರಗಳನ್ನು ದಾಖಲಿಸಲಾಗಿದೆ.

* ಆರಂಭಕಾಲದ ಕನ್ನಡ ಪತ್ರಿಕೋದ್ಯಮವನ್ನು ಕುರಿತಂತೆ ಇಲ್ಲಿ ಸಂಗ್ರಹ ಗೊಂಡಿರುವ ವಿವರಗಳು ಮೌಲಿಕವಾಗಿವೆ. ೧೮೪೩ರ ಜುಲೈ ೧ರಂದು ಹರ್ಮನ್ ಮೊಗ್ಲಿಂಗ್ ಸಂಪಾದಿಸಿ ಹೊರಡಿಸಿದ 'ಮಂಗಳೂರು ಸಮಾಚಾರ'ವೇ ಕನ್ನಡದ ಮೊತ್ತಮೊದಲ ಪತ್ರಿಕೆ ಎಂಬುದನ್ನು ಇಲ್ಲಿ ಹಾವನೂರರು ನಿಸ್ಸಂದೇಹವಾಗಿ ನಿರೂಪಿಸಿದ್ದಾರೆ. (ಹಾವನೂರರ ಸಂಶೋಧನೆಯನ್ನು ಆಧರಿಸಿಯೇ ಈಗ ಪ್ರತಿವರ್ಷ ಜುಲೈ ೧ ರಂದು 'ಪತ್ರಿಕಾ ದಿನಾಚರಣೆ'ಯನ್ನು ಆಚರಿಸಲಾಗುತ್ತಿದೆ. ಅಲ್ಲದೆ 'ಕಂನಡ ಸಮಾಚಾರ,' 'ಅರುಣೋದಯ' 'ಕನ್ನಡ ಕೇಸರಿ,' 'ಜ್ಞಾನಬೋಧಕ,' 'ಕನ್ನಡ ವಾರ್ತಿಕ,' 'ಕನ್ನಡ ಶಾಲಾಪತ್ರಕ' ಮುಂತಾದ ಆ ಕಾಲದ ಅನೇಕ ಪತ್ರಿಕೆಗಳ ಬಗ್ಗೆ ವಿಶೇಷ ಮಾಹಿತಿಯನ್ನು ಕಲೆ ಹಾಕಿದ್ದಾರೆ.
* ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಗ್ರಂಥಕರ್ತೃತ್ವಕ್ಕೆ ಸಂಬಂಧಿಸಿದಂತೆ ಅವರೆಗೆ ನಡೆದಿದ್ದ ಎಲ್ಲ ಚರ್ಚೆಗಳನ್ನೂ ತೂಗಿ ನೋಡಿ ನಿರ್ಣಾಯಕ ವೆನ್ನಬಹುದಾದ ಸಿದ್ಧಾಂತಗಳನ್ನು ಮಂಡಿಸಿದ್ದಾರೆ.
* ಧಾರ್ಮಿಕ ಸಾಹಿತ್ಯ, ಪಠ್ಯಪುಸ್ತಕ ರಚನೆ, ಯಕ್ಷಗಾನದಲ್ಲಿಯ ಪ್ರಯೋಗಗಳು, ನಾಟಕ, ಪ್ರಾಚೀನ ಕೃತಿ ಪರಿಷ್ಕರಣ, ನಿಘಂಟು ಮತ್ತು ವ್ಯಾಕರಣ, ಅನುವಾದ ಸಾಹಿತ್ಯ, ಕಾವ್ಯ ರಚನೆಯಲ್ಲಿಯ ಪ್ರಯೋಗಗಳು, ಕಥಾ ಸಾಹಿತ್ಯ, ವಿವಿಧ ಬಗೆಯ ಗದ್ಯ ಬರಹಗಳು ಮುಂತಾದ ಎಲ್ಲ ರೀತಿಯ ಸಾಹಿತ್ಯಕ ಚಟುವಟಿಕೆಗಳನ್ನು ಪ್ರತ್ಯೇಕ ಅಧ್ಯಾಯಗಳಲ್ಲಿ ಚರ್ಚಿಸಿರುವುದು, ಆಯಾ ವಿಭಾಗಗಳಲ್ಲಿ ಪ್ರಾತಿನಿಧಿಕವೆನ್ನ ಬಹುದಾದ ಕೃತಿಗಳಿಂದ ನಿದರ್ಶನಗಳನ್ನು ಹೆಕ್ಕಿ ತೋರಿಸಿರುವುದು ಇಲ್ಲಿಯ ವಿಶೇಷತೆ.
* ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುದ್ರಣದ ಸ್ಥಾನವನ್ನು ಪುನರ್ನಿರ್ದೇಶಿಸುತ್ತಾ ಹಾವನೂರರು "ಮುದ್ರಣನಿಗಿಂತ ಮುಂಚೆ ಹೊಸಗನ್ನಡ ಸಾಹಿತ್ಯವು ಬಹಳಷ್ಟು ಬೆಳೆದದ್ದರಿಂದ ಅವನನ್ನು 'ಹೊಸಗನ್ನಡದ ಮುಂಗೋಳಿಯ ಕೂಗು,' 'ಹೊಸಗನ್ನಡ ಕಾವ್ಯಾರಾಮದ ಮೊದಲ ಕೋಗಿಲೆ,' ಎಂದು ಮುಂತಾಗಿ ಕರೆಯುವುದು ಸಮಂಜಸವಲ್ಲ. ಆತ ಉಜ್ವಲವಾಗಿ ಬೆಳಗಿದ 'ಹಳಗನ್ನಡ ಜ್ಯೋತಿಯ ಕೊನೆಯ ಬೆಳಕು" ಎಂದಿರುವುದು ಗಮನಾರ್ಹ.
* ನಾಡಿಗ ಕೃಷ್ಣಮೂರ್ತಿಯವರ `Indian Journalism', ಐ.ಮಾ. ಮುತ್ತಣ್ಣ ನವರ '೧೯ನೇ ಶತಮಾನದಲ್ಲಿ ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' ಮುಂತಾದ ಕೃತಿಗಳಲ್ಲಿರುವ ಮಾಹಿತಿಗಳಲ್ಲಿರುವ ಅನೇಕ ತಪ್ಪುಗಳನ್ನು ಆಧಾರಸಹಿತವಾಗಿ

ತೋರಿಸಿಕೊಟ್ಟು ಸತ್ಯವನ್ನು ಸ್ಥಾಪಿಸುವ ಕೆಲಸವನ್ನು ಕೃತಿಯುದ್ದಕ್ಕೂ ಹಾವನೂರರು ಮಾಡಿದ್ದಾರೆ.

ಇಷ್ಟೆಲ್ಲಾ ವಿಶೇಷತೆಗಳನ್ನು 'ಹೊಸಗನ್ನಡದ ಅರುಣೋದಯ'ವು ಹೊಂದಿತ್ತಾದರೂ ಸ್ವತಃ ಹಾವನೂರರಿಗೇ ಅದರ ಬಗ್ಗೆ ಪೂರ್ತಿ ತೃಪ್ತಿ ಇರಲಿಲ್ಲ. ಈ ವೇಳೆಗಾಗಲೇ ಅವರು ಮುಂಬೈ, ಧಾರವಾಡ, ಬೆಂಗಳೂರು, ಮೈಸೂರು, ಸಾಂಗಲಿ, ಕಲ್ಕತ್ತ, ಮದ್ರಾಸು ಮುಂತಾದ ಹಲವು ಹತ್ತು ಸ್ಥಳಗಳ ಗ್ರಂಥಾಲಯಗಳಿಗೆ ಹಾಗೂ ಪತ್ರಾಗಾರಗಳಿಗೆ ಖುದ್ದಾಗಿ ಹೋಗಿ ಮಾಹಿತಿಯನ್ನು ಸಂಗ್ರಹಿಸಿದ್ದರು. ಬಾಸೆಲ್, ಲಂಡನ್, ಎಡಿನ್‌ಬರೋ ಮುಂತಾದ ವಿದೇಶದ ಹಲವು ಗ್ರಂಥಾಲಯಗಳೊಂದಿಗೆ ಪತ್ರವ್ಯವಹಾರ ನಡೆಸಿ ದಾಖಲೆಗಳ ಛಾಯಾಪ್ರತಿಗಳನ್ನು, ಮೈಕ್ರೋಫಿಲಂಗಳನ್ನು ತರಿಸಿಕೊಂಡಿದ್ದರು. ಆದರೂ ಇನ್ನೂ ಪೂರ್ತಿ ಹುಡುಕಿದ್ದಾದರೆ 'ಅರುಣೋದಯ'ದಲ್ಲಿನ ಎಷ್ಟೋ ವಿಷಯಗಳನ್ನು ಪುನರ್ ವಿಮರ್ಶಿಸಬೇಕಾಗುತ್ತದೆ ಎನ್ನುವ ಸತ್ಯ ಇತರರೆಲ್ಲರಿಗಿಂತ ಹೆಚ್ಚಾಗಿ ಅವರಿಗೇ ತಿಳಿದಿತ್ತು. ವಿದೇಶದ ಗ್ರಂಥಾಲಯಗಳಿಗೆ ಖುದ್ದಾಗಿ ಭೇಟಿ ನೀಡುವುದೊಂದೇ ಈ ಸಮಸ್ಯೆಗೆ ಇದ್ದ ಪರಿಹಾರ.

ಆದರೆ ಖರ್ಚು ವೆಚ್ಚಗಳಿಗೆ ಹಣ ಹೊಂದಿಸುವುದು ಹೇಗೆ? ವಿಶ್ವವಿದ್ಯಾಲಯಗಳು ಕೈ ಆಡಿಸಿ ಬಿಟ್ಟವು. ಸರ್ಕಾರದಿಂದ ಯಾವ ನೆರವನ್ನೂ ಅಪೇಕ್ಷಿಸುವಂತೆಯೇ ಇರಲಿಲ್ಲ. ಕೊನೆಗೆ ಛಲಬಿಡದ ಹಾವನೂರರು ಹೊಸದೊಂದು ದಾರಿ ಹುಡುಕಿದರು. 'ವೈಜ್ಞಾನಿಕ ಗ್ರಂಥಾಲಯಗಳ ಅಭ್ಯಾಸ ಮತ್ತು ಭೆಟ್ಟಿಗೆಂದು ಪಾಶ್ಚಾತ್ಯ ದೇಶಗಳಿಗೆ ಕಳುಹಿಸಿ ಕೊಡಿ' ಎಂಬ ಪ್ರಸ್ತಾವವನ್ನು ತಾವು ಸೇವೆ ಸಲ್ಲಿಸುತ್ತಿದ್ದ ಟಿ.ಎಫ್.ಐ.ಆರ್.ನ ಮುಂದೆ ಮಂಡಿಸಿದರು. ಟಾಟಾ ಸಂಸ್ಥೆ ಈ ಪ್ರಸ್ತಾವವನ್ನೇನೋ ಒಪ್ಪಿಕೊಂಡಿತಾದರೂ "ನೀವು ವಿದೇಶಗಳಲ್ಲಿ ಇದ್ದಷ್ಟು ದಿನಗಳನ್ನು 'ಆನ್ ಡ್ಯೂಟಿ' ಎಂದು ಪರಿಗಣಿಸಲಾಗುತ್ತದೆ. ಆದರೆ ಹೋಗಿ ಬರುವ ಖರ್ಚು ಮಾತ್ರ ನಿಮ್ಮದೇ" ಎಂದು ನಿಬಂಧನೆ ವಿಧಿಸಿತು. ಕಡೆಗೆ ಮಫತ್‌ಲಾಲ್ ಟ್ರಸ್ಟ್ ಹಾಗೂ ಟಾಟಾಟ್ರಸ್ಟ್ ಎಂಬ ಎರಡು ಸಂಸ್ಥೆಗಳು ಹಾಗೂ ಕೆಲವು ಸ್ನೇಹಿತರ ನೆರವಿನಿಂದ ಹಾವನೂರರು ೧೯೭೫ರಲ್ಲಿ ಲಂಡನ್ನಿಗೆ ಮೊತ್ತಮೊದಲ ಬಾರಿಗೆ ಪ್ರಯಾಣಿಸಿದರು.

ಆರು ವಾರಗಳ ಈ ಪ್ರವಾಸದಲ್ಲಿ ಮೊದಲರ್ಧ ಸಮಯ ವೈಜ್ಞಾನಿಕ ಗ್ರಂಥಾಲಯಗಳ ಭೇಟಿಗಾದರೆ ಉಳಿದರ್ಧವನ್ನು ಅವರು ಕನ್ನಡ ಕೃತಿಗಳ ಪರಿಶೋಧನೆಗೆಂದು ಬಳಸಿದರು. ಇದಾದ ನಂತರ ೧೯೭೮, ೧೯೮೧, ೧೯೮೮, ೧೯೯೬ ಹಾಗೂ ೨೦೦೫ರಲ್ಲಿ ಅವರು ಕೆಲವೊಮ್ಮೆ ಬೆಂಗಳೂರಿನ ಮಾಸ್ತಿ ಅಧ್ಯಯನ ಪೀಠ ಮುಂತಾದ ಸಂಸ್ಥೆಗಳ ನೆರವಿನೊಂದಿಗೆ, ಮತ್ತೆ ಕೆಲವೊಮ್ಮೆ ಸ್ವಂತ ಖರ್ಚಿನಲ್ಲಿ ಬ್ರಿಟನ್, ಜರ್ಮನಿ, ಫ್ರಾನ್ಸ್, ಹಾಲೆಂಡ್, ಅಮೆರಿಕಾ ಮುಂತಾದ ದೇಶಗಳಿಗೆ ಭೇಟಿಕೊಟ್ಟಿದ್ದಾರೆ. ಆಗೆಲ್ಲಾ ಅವರು ಪೆಟ್ಟಿಗೆಗಳ ತುಂಬ ಕನ್ನಡ ಸಾಹಿತ್ಯ ಮತ್ತು ಇತಿಹಾಸಗಳಿಗೆ ಸಂಬಂಧಿಸಿದ ಹಲವಾರು ದಾಖಲೆಗಳನ್ನು ತುಂಬಿಕೊಂಡು ಬಂದಿದ್ದಾರೆ. (ಮೊದಲ ಬಾರಿ ಮುಂಬೈಯ ವಿಮಾನನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳು ಒಂದು

ಲಂಡನ್ನಿನ ಭಾರತೀಯ ವಿದ್ಯಾಭವನದ ನಿರ್ದೇಶಕ ಶ್ರೀ ಮತ್ತೂರು ಕೃಷ್ಣಮೂರ್ತಿಯವರ ಮನೆಯಲ್ಲಿ

ಪೆಟ್ಟಿಗೆಯನ್ನು ತೆರೆದುನೋಡಿ ಬರೀ ಪುಸ್ತಕ, ಪೇಪರ್‌ಗಳಿದ್ದುದನ್ನು ಕಂಡು ``You are incapable of smuggling'' ಎಂದು ಹೇಳಿ ಎರಡನೆಯ ಪೆಟ್ಟಿಗೆಯನ್ನು ತೆರೆಯುವ ಗೋಜಿಗೂ ಹೋಗಲಿಲ್ಲವಂತೆ!!)

ವಿದೇಶಗಳಿಂದ ತಂದ ಈ ಎಲ್ಲ ಹೊಸ ಮಾಹಿತಿಗಳನ್ನು ಹಾವನೂರರು ಹಲವಾರು ಸಂಪ್ರಬಂಧಗಳ ರೂಪದಲ್ಲಿ ಪ್ರಚಾರಪಡಿಸಿದ್ದರು. ಅಷ್ಟೇ ಅಲ್ಲದೆ ೧೯೮೨ರಲ್ಲಿ ಪ್ರಕಟವಾದ 'ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ. ಹನಿಗವಿತೆ. ಕಂಪ್ಯೂಟರ್ ಇತ್ಯಾದಿ' ಎಂಬ ಕೃತಿಗಳಲ್ಲಿಯೂ ಅಳವಡಿಸಿದರು. ಆದರೆ ಇದೆಲ್ಲವೂ ಸಂಪೂರ್ಣವಾಗಿ ಉಪಯೋಗವಾಗಿದ್ದು ೨೦೦೦ನೇ ಇಸವಿಯಲ್ಲಿ 'ಹೊಸಗನ್ನಡದ ಅರುಣೋದಯ'ದ ಎರಡನೇ ಆವೃತ್ತಿ ಕನ್ನಡ ಪುಸ್ತಕ ಪ್ರಾಧಿಕಾರದ ಮೂಲಕ ಹೊರಬಂದಾಗ. 'ತಿದ್ದಿ ಬೆಳೆಸಿದ' ಈ ಆವೃತ್ತಿ ರೂಪುಗೊಂಡ ಬಗ್ಗೆ ಅವರೇ:

> *"ಗ್ರಂಥದ ನವೀಕರಣದ ಬಗ್ಗೆ ತುಸು ವಿವರಣೆ ಕೊಡಬೇಕು. ಈ ೨೫ ವರ್ಷಗಳ ಅವಧಿಯಲ್ಲಿ ನಾನು ಹಲವು ಬಾರಿ ವಿದೇಶ ಸಂಚಾರ ಮಾಡಿದ್ದೆ. ಹಾಗೆ ಹೊರಹೋದ ಪ್ರತಿಸಲವೂ ಇಂಗ್ಲೆಂಡಿಗೆ ತಪ್ಪದೆ ಹೋದದ್ದುಂಟು. ಲಂಡನ್ನಿನ ಇಂಡಿಯಾ ಆಫೀಸ್ ಲೈಬ್ರರಿ ಮತ್ತು ಬ್ರಿಟಿಷ್ ಲೈಬ್ರರಿಯ ಓರಿಯೆಂಟಲ್ ಸಂಗ್ರಹ, ಅದರಂತೆ ಆಕ್ಸ್‌ಫರ್ಡ್, ಕೇಂಬ್ರಿಜ್ ವಿಶ್ವವಿದ್ಯಾಲಯಗಳ ಲೈಬ್ರರಿ ಇವುಗಳಲ್ಲಿಯ ಕನ್ನಡ ವಿಷಯಕ ಸಾಮಗ್ರಿಯನ್ನು ತಿರುವಿ ಹಾಕಿದೆ. ಹಾಗೆಯೇ ಬಾಸೆಲ್ ಮಿಶನ್ನಿನ ಸಂಗ್ರಹ. ನಾನು ಬಾಸೆಲ್‌ಗೆ*

ಹೋದ ಮೂರು ಬಾರಿಯೂ ಅಲ್ಲಿಯವರು ನನ್ನನ್ನು ಆತ್ಮೀಯತೆಯಿಂದ ಕಂಡು, ಅವಶ್ಯವಿರುವ ಸಾಮಗ್ರಿಯ ಜೆರಾಕ್ಸ್ ಪ್ರತಿ ಒದಗಿಸಿದ್ದನ್ನು ಕೃತಜ್ಞತೆಯಿಂದ ನೆನೆಯುವೆ. ಹೀಗೆ ದೊರೆತ ಹೊಸ ಅಂಶಗಳನ್ನು ಅಲ್ಲಲ್ಲಿ ಸೇರಿಸಿರುವೆನಾದರೂ ಬಹಳಷ್ಟು ಮಾಹಿತಿ ಇದ್ದಲ್ಲಿ ಅದನ್ನೆಲ್ಲ ವಿವಿಧ ಅನುಬಂಧಗಳ ಮೂಲಕ ಕೊಟ್ಟಿದ್ದೇನೆ."

ಎಂದು ಹೇಳಿಕೊಂಡಿದ್ದಾರೆ. ಮೊಗ್ಲಿಂಗನ 'ಬಿಬ್ಲಿಯಾಥೆಕಾ ಕರ್ನಾಟಿಕಾ'ದ ಹಿನ್ನೆಲೆ, ಕಿಟೆಲ್ಃ ಪೂರಕ ವಿಷಯಗಳು, ವಾಲ್ಟರ್ ಎಲಿಯಟ್; ಒಂದಷ್ಟು ವಿವರಗಳು, ಫ್ಲೀಟರನ್ನು ಕುರಿತು ಹಲವು ಹೊಸ ಅಂಶಗಳು, ೧೯ನೇ ಶತಮಾನದ ಇನ್ನೂ ಕೆಲವು ಹರಿದಾಸರು, ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು ಹಾಗೂ 'ಪಾಶ್ಚಾತ್ಯ ವಿದ್ವಾಂಸರ ಕನ್ನಡ ಸೇವೆ' ಗ್ರಂಥದಲ್ಲಿಯ ತಪ್ಪು ತಡೆಗಳು–ಎಂಬುವವು ಈ ರೀತಿಯಾಗಿ ಅನುಬಂಧದ ರೂಪದಲ್ಲಿ ಎರಡನೇ ಆವೃತ್ತಿಯಲ್ಲಿರುವ ಹೆಚ್ಚುವರಿ ವಿವರಗಳು. ೨೦೧೧ರಲ್ಲಿ ಪುಸ್ತಕ ಪ್ರಾಧಿಕಾರವೇ ಮೂರನೇಬಾರಿಗೆ ಇದನ್ನು ಪುನರ್ಮುದ್ರಿಸಿದಾಗಲೂ ಹಾವನೂರರು ಹಲವಾರು ಬದಲಾವಣೆಗಳನ್ನು ಮಾಡಿದರು.

ನಾಲ್ಕು ದಶಕಗಳ ಹಿಂದೆ ರಚಿತವಾದ ಈ ಕೃತಿ ಇಂದಿಗೂ ಏಕೆ ಮತ್ತು ಹೇಗೆ ಪ್ರಸ್ತುತ ಹಾಗೂ ಉಪಯುಕ್ತ? ಎಂಬ ಪ್ರಶ್ನೆಗೆ ಉತ್ತರ ಡಾ. ಶಿವರಾಮ ಪಡಿಕ್ಕಲ್ ರವರ ಒಂದು ಪ್ರಬಂಧದ ಈ ಭಾಗಗಳಲ್ಲಿದೆ:

"ಪಾಶ್ಚಾತ್ಯ ವಿದ್ವತ್ ವಲಯದಲ್ಲಿ ಈಚೆಗೆ 'ಪುಸ್ತಕ ಚರಿತ್ರೆ' ಆಕರ್ಷಣೀಯ ಸಂಶೋಧನ ಕ್ಷೇತ್ರವಾಗಿ ಬೆಳೆಯುತ್ತಿದೆ. 'ಪುಸ್ತಕ ಚರಿತ್ರೆ'ಯ ವ್ಯಾಪ್ತಿ ವಿಶಾಲ ಮತ್ತು ಅದು ಮೂಲಭೂತವಾಗಿ ಅಂತರ್‌ಶಿಸ್ತೀಯ ಸಂಶೋಧನಾ ಕ್ಷೇತ್ರ. ಗ್ರಂಥಸೂಚಿ, ತೌಲನಿಕ ಸಾಹಿತ್ಯ, ಸಾಹಿತ್ಯ ಚರಿತ್ರೆ, ಇತಿಹಾಸ, ಸಮಾಜಶಾಹಿ ಸಮಾಜ–ಸಂಸ್ಕೃತಿ ಅಧ್ಯಯನ ಇತ್ಯಾದಿಗಳನ್ನು ಪುಸ್ತಕ ಚರಿತ್ರೆ ಒಳಗೊಳ್ಳುತ್ತದೆ. ಈಗಾಗಲೇ ಅನೇಕ ಪಾಶ್ಚಾತ್ಯ ದೇಶಗಳು ತಮ್ಮ ಬಹು ಸಂಪುಟಗಳ ರಾಷ್ಟ್ರೀಯ ಪುಸ್ತಕ ಚರಿತ್ರೆಗಳನ್ನು ಪ್ರಕಟಿಸಿದ್ದರೂ ಈಜಿಪ್ಟ್, ಚೀನಾ ಮತ್ತು ಭಾರತಗಳಲ್ಲಿ ಅಂತಹ ಕೆಲಸ ಕ್ವಚಿತ್ತಾಗಿ ಮಾತ್ರ ನಡೆದಿದೆ. ಈ ಹಿನ್ನೆಲೆಯಿಂದ ನೋಡಿದಾಗ ಸುಮಾರು ೪೬ ವರ್ಷಗಳ ಹಿಂದೆಯೇ ತಮ್ಮ ಸಂಶೋಧನೆಯನ್ನು ಆರಂಭಿಸಿ ೩೪ ವರ್ಷಗಳ ಹಿಂದೆ ಹಾವನೂರರು ಕನ್ನಡದ ಮುದ್ರಣ ಚರಿತ್ರೆಯ 'ಹೊಸಗನ್ನಡ ಅರುಣೋದಯ'ವನ್ನು ಪ್ರಕಟಿಸಿದರು ಎನ್ನುವ ಅಪೂರ್ವ ಸಂಗತಿಯನ್ನು ಇಲ್ಲಿ ದಾಖಲಿಸಬೇಕಿದೆ. ನಿಜ, ಪುಸ್ತಕ ಚರಿತ್ರೆ ಈ ಹೊತ್ತಿನಲ್ಲಿ ಅನುಸರಿಸುತ್ತಿರುವ ಪ್ರಶ್ನೆಗಳು ಮತ್ತು ಅವುಗಳ ಅಧ್ಯಯನ ವಿಧಾನಗಳು ಹಾಗೂ ಹಾವನೂರರ ಪುಸ್ತಕದ ಉದ್ದೇಶಗಳು ಬೇರೆ ಬೇರೆ. ಆದರೆ ಇಷ್ಟು ಆಮೂಲಾಗ್ರವಾಗಿ, ಇಷ್ಟು ಆಳವಾಗಿ, ಇಷ್ಟು ನಿರ್ದಿಷ್ಟವಾಗಿ, ಇಷ್ಟು ವಸ್ತುನಿಷ್ಠವಾಗಿ, ವೈಜ್ಞಾನಿಕವಾಗಿ ಮತ್ತು ಇಷ್ಟು ವ್ಯಾಪ್ತಿಯಲ್ಲಿ ಕನ್ನಡದ ಮುದ್ರಿತ ಸಾಹಿತ್ಯದ ಚರಿತ್ರೆಯನ್ನು ನಿರೂಪಿಸುವ ಕೃತಿ ಇನ್ನೊಂದಿಲ್ಲ...

.... ಕನ್ನಡದ ಮಟ್ಟಿಗೆ ೧೮೮೧ರಿಂದ ಹಿಡಿದು ೧೮೫೫ರ ವರೆಗಿನ ಎಲ್ಲ ಪುಸ್ತಕೋದ್ಯಮ ಸಂಬಂಧಿ ದಾಖಲೆಗಳನ್ನೂ ಹಾವನೂರರು ಜಾಲಾಡಿದ್ದಾರೆ. ತಾವು ಕಡೆದು ಪಡೆದುದನ್ನು ನಮಗೆ ನೀಡಿದ್ದಾರೆ. ಹೀಗೆ ಮಾಡುವಾಗ ಅವರ ಮೊದಲ ಗಮನ 'ವಸ್ತುನಿಷ್ಠ' ಮಾಹಿತಿ ಕೊಡುವುದರ ಕಡೆಗೆ. ಹಾಗೆಂದು 'ಅರುಣೋದಯ' ಒಣ ಅಂಕಿ-ಅಂಶಗಳ ನೀರಸ ಗ್ರಂಥವಲ್ಲ. ಅಂಕಿ-ಅಂಶಗಳನ್ನು ಮತ್ತು ಪುಸ್ತಕ ಪ್ರಕಟಣೆಯ ವಿವರಗಳನ್ನು ನೀಡುತ್ತಲೇ ಆಧುನಿಕ ಕನ್ನಡ ತಲೆಯೆತ್ತಿದ ಬಗೆಯನ್ನೂ ಅವರು ನಿರೂಪಿಸುತ್ತಾರೆ. ಆಧುನಿಕ ಕನ್ನಡ ಭಾಷಾ ಸಾಹಿತ್ಯ ರೂಪುತಳೆಯಲು ಕಾರಣವಾದ ಚಾರಿತ್ರಿಕ ಸಂದರ್ಭ, ಕನ್ನಡದಲ್ಲಿ ಬೇರೆ ಬೇರೆ ರೀತಿಯ ಬರವಣಿಗೆಗಳು ಬಂದ ಬಗೆ, ಆಧುನಿಕ ಬರವಣಿಗೆಯ ಪ್ರಮುಖ ಅಂಶಗಳು, ಆಧುನಿಕತೆಗೆ ಭಾಷೆ ಹೊರಳಿಕೊಂಡ ರೀತಿ, ಅಲ್ಲಿನ ಬಿಕ್ಕಟ್ಟುಗಳು ತಲ್ಲಣಗಳು ಒಂದು ರೀತಿಯಲ್ಲಿ ಕನ್ನಡ ಸಾರ್ವಜನಿಕ ವಲಯ ರೂಪುಗೊಂಡ ಬಗೆಯನ್ನು ಅರುಣೋದಯದ ನಿರೂಪಣೆಯೊಳಗಿನಿಂದ ನಾವು ಪಡೆಯಬಹುದು.

ಹೀಗಾಗಿ ಅನೇಕ ಬಗೆಯಲ್ಲಿ ಸಮಕಾಲೀನ ಸಂಶೋಧನೆಗೆ "ಅರುಣೋದಯ" ನೆರವಾಗುತ್ತದೆ. ಕನ್ನಡ ಸಾಹಿತ್ಯ ಸಂಸ್ಕೃತಿ ಆಧುನಿಕತೆಗೆ ಹೊರಳಿಕೊಂಡ ಬಗೆ, ಅದರ ಬಿಕ್ಕಟ್ಟುಗಳು ಆತಂಕಗಳು, ಕನ್ನಡ/ಕರ್ನಾಟಕವೆಂಬ ಅಸ್ಮಿತೆಯ ರೂಪುಗೊಳ್ಳುವಿಕೆಯ ಹಿನ್ನೆಲೆ, ಹಳೆಗನ್ನಡ ಮತ್ತು ಧಾರ್ಮಿಕ ಸಾಹಿತ್ಯದ ಕ್ರೋಢೀಕರಣ, ಹೊಸ ಶಿಕ್ಷಣ ಸಂಸ್ಥೆಗಳು ಮತ್ತು ಶಾಲಾ ಪಠ್ಯಕ್ರಮ, ವಸಾಹತುಶಾಹಿ ಮತ್ತು ಅದರ ಸಾಂಸ್ಕೃತಿಕ ನಿಲುವುಗಳು, ಹೊಸ ಸಾಹಿತ್ಯ ಪ್ರಕಾರಗಳ ಉದಯ, ಭಾಷಾಂತರದ ರಾಜಕೀಯ, ವಸಾಹತು ಆಡಳಿತದಲ್ಲಿ ಮೈಸೂರಿನ ಆಸ್ಥಾನ ಮತ್ತು ಸಾಂಸ್ಕೃತಿಕ ಮುಂದಾಳತ್ವ ವಹಿಸುವ ನಿಟ್ಟಿನಲ್ಲಿ ಕಲೆ, ಸಾಹಿತ್ಯ, ಸಂಗೀತಗಳಿಗೆ ಮುಮ್ಮಡಿಯವರು ನೀಡಿದ ಪ್ರೋತ್ಸಾಹ, ಮಿಷನರಿಗಳು, ಬೈಬಲ್ ಅನುವಾದ, ನಿಘಂಟುಗಳು ಮತ್ತು 'ಪ್ರಭುತ್ವ'ದ ಶಬ್ದಕೋಶವನ್ನು ಅವರು ನಿರ್ಮಿಸಿದ ರೀತಿ, ಕನ್ನಡ - ಇಂಗ್ಲಿಷ್‌ಗಳ ಸಂಬಂಧ ಹೀಗೆ ಹತ್ತು ಹಲವು ದಿಕ್ಕುಗಳಲ್ಲಿ ಸಂಶೋಧನೆಯನ್ನು ನಡೆಸುವವರಿಗೆ 'ಅರುಣೋದಯ' ಉಪಯುಕ್ತವಾಗಿದೆ. ಆಧುನಿಕ ಕರ್ನಾಟಕ ಮತ್ತು ಕನ್ನಡಗಳು ಗಿಡವೊಂದು ಬೆಳೆದು ಅದರಲ್ಲಿ ಹೂವು ಅರಳಿದ ಹಾಗೆ ತನಗೆ ತಾನೇ ಮೂಡಿ ಬರುವಂತಹವುಗಳಲ್ಲ. ವಸಾಹತು ಚರಿತ್ರೆಯ ಒತ್ತಡದಲ್ಲಿ ಹೊಸ ಆಲೋಚನೆಗಳನ್ನು ಹೇಳಬೇಕಾದಾಗ ಹೊಸ ಭಾಷೆಯ ಅಗತ್ಯ ತಾನಾಗಿ ಉಂಟಾಯಿತು. ಹೊಸ ಸಂವಹನ ಬೇಕಾಯಿತು. ಹೊಸ ವ್ಯಕ್ತಿತ್ವ ಮತ್ತು ಅಭಿರುಚಿಗಳನ್ನು ಬೆಳೆಸಬೇಕಾಯಿತು. ಮುದ್ರಣ ಬಂದಾಗ ಕನ್ನಡ ಭಾಷೆಯನ್ನೇ ಹೊಸರೀತಿಯ ಬರವಣಿಗೆಯಲ್ಲಿ ಕಾಸಿ ತೆಗೆಯಬೇಕಾಯಿತು. ಹೊಸ ಸಾಹಿತ್ಯ ಪ್ರಕಾರಗಳ ಅಗತ್ಯ ಉಂಟಾಯಿತು. 'ಅರುಣೋದಯ' ಈ ಅವಸ್ಥಾಂತರಗಳ, ತಲ್ಲಣಗಳ ಮತ್ತು ಪ್ರಯತ್ನಗಳ

> ದಾಖಲೆಯಾಗಿದೆ. ಆಧುನಿಕ ಬರವಣಿಗೆಯ ಹಿಂದೆ ಎಷ್ಟೊಂದು ಆಸಕ್ತಿಗಳು ಕೆಲಸ ಮಾಡಿದವು ಎಷ್ಟೊಂದು ಬಗೆಯ 'ಒಳಗೊಳ್ಳುವಿಕೆ'ಗಳು ಮತ್ತು 'ಹೊರಗಿಡುವಿಕೆ'ಗಳಾದುವು ಎಷ್ಟೊಂದು ವೈರುಧ್ಯಗಳಿವೆ ಎನ್ನುವುದನ್ನು ಈ ಕೃತಿಯನ್ನು **in between the lines** ಓದಿದರೆ ಅರ್ಥವಾಗುತ್ತದೆ. ಹೀಗಾಗಿ ಮೇಲು ನೋಟಕ್ಕೆ ಮುದ್ರಣ ಚರಿತ್ರೆಯಂತೆಯೂ ಸಾಹಿತ್ಯ ಸಮೀಕ್ಷೆಯಂತೆಯೂ ಕಾಣುವ ಈ ಕೃತಿ ಅದಕ್ಕಿಂತ ಹೆಚ್ಚಿನದನ್ನು ಸಾಧಿಸುತ್ತದೆ.....
>
> *(ಪುಸ್ತಕ ಚರಿತ್ರೆ ಮತ್ತು ಹೊಸಗನ್ನಡದ ಅರುಣೋದಯ, ಸಂ–ಕಥನ. ಪು. ೭೨೫ – ೭೩೧)*



ಮೂರು ಆವೃತ್ತಿಗಳು

ಹೊಸಗನ್ನಡ ಅರುಣೋದಯವು ಒಂದು ಮಾರ್ಗಪ್ರವರ್ತಕ ಕೃತಿ. ಡಾ. ಎಂ.ಚಿದಾನಂದ ಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ವು ಹೇಗೆ ಶಾಸನಾಧಾರಿತ ಸಂಶೋಧನೆಗೆ ಹೊಸ ಬಾಗಿಲನ್ನು ತೆಗೆಯಿತೋ ಅದರಂತೆಯೇ ಹಾವನೂರರ ಕೃತಿಯಿಂದ ಹತ್ತಾರು ಮಂದಿ ಸಂಶೋಧಕರು ಸ್ಫೂರ್ತಿ ಪಡೆದು ೧೯ನೇ ಶತಮಾನದ ಸಾಹಿತ್ಯರಾಶಿಯ ಬಗೆಗಿನ ಜ್ಞಾನಸೀಮೆಯನ್ನು ವಿಸ್ತರಿಸಿದ್ದಾರೆ. ಇವರಲ್ಲಿ ಎಚ್.ಎಸ್. ಸುಜಾತಾ, ಶಂಕರನಾರಾಯಣ ಉಡುಪ, ಅನಂತಪದ್ಮನಾಭರಾವ್, ಹರಿಕೃಷ್ಣ ಭರಣ್ಯ, ಕೆ.ಎಂ. ಮ್ಯಾಥ್ಯೂ, ಎಡ್ವರ್ಡ್ ನರೋನಾ, ಎಸ್.ಎಲ್. ಶ್ರೀನಿವಾಸಮೂರ್ತಿ, ಟಿ.ವಿ. ಚಿತ್ಕಲಾ, ಬಿ.ಲೀಲಾ, ವಿ.ಬಿ. ತಾರಕೇಶ್ವರ್, ವಿಜಯಕುಮಾರ ಬೋರಟ್ಟಿ, ಸೌಮ್ಯ ದೇಚಮ್ಮ, ಶಶಿಕಾಂತ, ಶಿವರಾಮ ಪಡಿಕ್ಕಲ್, ನಾ.ದಾಮೋದರ ಶೆಟ್ಟಿ ಮುಂತಾದವು ತಕ್ಷಣಕ್ಕೆ ನೆನಪಿಗೆ ಬರುವ ಹೆಸರುಗಳು.

ಐತಿಹಾಸಿಕ ವಿಷಯಗಳನ್ನು ಕುರಿತ ಸಂಪ್ರಬಂಧಗಳು

ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳೆರಡರಲ್ಲಿಯೂ ಹಾವನೂರರು ಇತಿಹಾಸ

ಸಂಬಂಧಿ ಸಂಪ್ರಬಂಧಗಳನ್ನು ರಚಿಸಿದ್ದಾರೆ. "ನಿಜವಾಗಿ ಹೇಳಬೇಕೆಂದರೆ ಇತಿಹಾಸದ ಸಂಗತಿಗಳ ಬಗ್ಗೆ ಸಂಶೋಧನೆಯನ್ನು ನಡೆಸಬೇಕೆನ್ನುವ ಉಮೇದು ನನಗೆ ಬಂದದ್ದು ತೀರಾ ಇತ್ತೀಚೆಗೆ; ಅದರಲ್ಲೂ ವಿಶೇಷವಾಗಿ ೧೯೮೫–೮೬ರಲ್ಲಿ ಕರ್ನಾಟಕ ರಾಜ್ಯ ಇತಿಹಾಸ ಅಕಾಡೆಮಿ ಆರಂಭವಾದ ಮೇಲೆ. ಅದರ ಅಧ್ಯಕ್ಷರಾಗಿದ್ದ ಹಿರಿಯ ಇತಿಹಾಸತಜ್ಞ ಡಾ. ಜಿ.ಎಸ್. ದೀಕ್ಷಿತರು 'ಹಾವನೂರರೇ, ನೀವೂ ಏಕೆ ಏನಾದರೊಂದು ಐತಿಹಾಸಿಕ ವಿಷಯದ ಬಗ್ಗೆ ನಮ್ಮ ಸಮ್ಮೇಳನಗಳಲ್ಲಿ ಪ್ರಬಂಧ ಮಂಡಿಸಬಾರದು?' ಎಂದಾಗ 'ಹೌದಲ್ಲ' ಎನಿಸಿ ಕೆಲಸ ಆರಂಭಿಸಿದೆ" ಎನ್ನುವುದು ಹಾವನೂರರ ವಿವರಣೆ.

ಆದರೆ ನಿಜವಾಗಿ ನೋಡಿದರೆ ಎಂದು ಅವರು 'ಹೊಸಗನ್ನಡದ ಅರುಣೋದಯ'ದ ಕೆಲಸಕ್ಕೆ ಕೈಹಾಕಿದರೋ ಅಂದಿನಿಂದಲೇ ಇತಿಹಾಸವನ್ನು ಕುರಿತಾದ ಅವರ ಸಂಶೋಧನೆ ಆರಂಭವಾಯಿತು ಎನ್ನಬಹುದು. ಅದಕ್ಕೂ ಮುನ್ನವೇ ಅವರು 'ಮಣಾಲ ಮತ್ತು ತಿಷ್ಯರಕ್ಷಿತೆ (೧೯೫೮) ಕ್ರಿಸ್ತನ ಕೊನೆಯದಿನ (೧೯೬೨) ಚಾಫೇಕರ ಬಂಧುಗಳು (೧೯೬೨), ಭಾರತದಲ್ಲಿ ಮುದ್ರಣಕಲೆ (೧೯೬೩) ಮುಂತಾದ ಇತಿಹಾಸ ಸಂಬಂಧಿ ಲೇಖನಗಳನ್ನು ಬರೆದಿದ್ದರು. ಇವುಗಳಲ್ಲಿ ಸಾಕಷ್ಟು ಹೊಸ ಸಂಗತಿಗಳಿವೆಯಾದರೂ ಇವಾವುವೂ ಸಂಪ್ರಬಂಧದ ಸ್ವರೂಪದವಲ್ಲ.

ಹಾವನೂರರ ಬಹುತೇಕ ಇತಿಹಾಸ ಸಂಬಂಧಿ ಸಂಪ್ರಬಂಧಗಳು ೧೮–೨೦ನೇ ಶತಮಾನದ ಕಾಲಘಟ್ಟದ ಹಲವು ವಿಷಯಗಳಿಗೆ ಸಂಬಂಧಿಸಿವೆ. ಕನ್ನಡದ ಮೊದಲ ಕಾದಂಬರಿಗಳ ಚಾರಿತ್ರಿಕ ಹಿನ್ನೆಲೆ, ಮುಂಬೈ ಕರ್ನಾಟಕವು ರೂಪುಗೊಂಡ ಬಗೆ ಅದರ ಪೂರ್ವೇತಿಹಾಸ, ಬ್ರಿಟಿಷ್ ದಾಖಲೆಗಳಲ್ಲಿರುವ ಕಿತ್ತೂರಿನ ಇತಿಹಾಸ ಹಾಗೂ ಸಂಗೊಳ್ಳಿ ರಾಯಣ್ಣನ ವಿವರಗಳು, ೧೯ನೇ ಶತಮಾನದಲ್ಲಿ ಉತ್ತರ ಕರ್ನಾಟಕದಲ್ಲಿ ಶೈಕ್ಷಣಿಕ, ರಾಜಕೀಯ ಕ್ಷೇತ್ರಗಳಲ್ಲಿ ನಡೆದ ವಿದ್ಯಮಾನಗಳು, ಮೆಕೆನ್ಜಿಯ ಅಜ್ಞಾತ ಸಂಗ್ರಹ, ಹೈದರಾಲಿಯೊಡನೆ ರಾಯಭಾರಿಯೊಬ್ಬನು ನಡೆಸಿದ ಸಂಭಾಷಣೆ, ಟಿಪ್ಪು ಸುಲ್ತಾನನ ಬಗ್ಗೆ ಇರುವ ಬ್ರಿಟಿಷ್ ಆಕರಗಳು, ಉತ್ತರ ಕರ್ನಾಟಕ ಜಿಲ್ಲೆಯ ನಿರ್ಮಾಣ, ಖ್ಯಾತ ಪತ್ರಿಕೋದ್ಯಮಿ ವೆಂಕಟಕೃಷ್ಣಯ್ಯನವರ ಪೆನ್ಷನ್ ವಿಚಾರ, ತುಂಗಭದ್ರ ನಾಡಿಗೆ ವರವೋ ಶಾಪವೋ ಮುಂತಾದ ವಿಷಯಗಳನ್ನು ಅವರು ತಮ್ಮ ಸಂಪ್ರಬಂಧಗಳಲ್ಲಿ ಚರ್ಚಿಸಿದ್ದಾರೆ.

ಇಂಗ್ಲಿಷಿನಲ್ಲಿ ಅವರು `The palace Library of Adilshali's,' `British Sources on Tippu Sultan, `Contribution of Basel mission to Kannada Literature' `Nature's self printing' `The Kittel Dictionary as used by Govinda Pai' ಮುಂತಾದ ಸಂಪ್ರಬಂಧಗಳನ್ನು ಬರೆದಿದ್ದಾರೆ.

ಹಳೆಯ ಕಾಗದ ಪತ್ರಗಳನ್ನು (Archival material) ಮುಖ್ಯ ಆಕರಗಳನ್ನಾಗಿ ಬಳಸಿಕೊಂಡಿರುವುದು ಇಲ್ಲಿಯ ವಿಶೇಷ. ಪ್ರಸ್ತುತದ ಎಷ್ಟೋ ಸಮಸ್ಯೆಗಳಿಗೆ ಇತಿಹಾಸದಲ್ಲಿ ಉತ್ತರವನ್ನು ಹುಡುಕುವುದು ಸಾಧ್ಯವಿದೆ ಎಂಬುದನ್ನು ಅವರು ತಮ್ಮ ಸಂಪ್ರಬಂಧಗಳ ಮೂಲಕ ತೋರಿಸಿಕೊಟ್ಟಿದ್ದಾರೆ. ಈ ಮಾತಿಗೆ ಅತ್ಯುತ್ತಮ ಉದಾಹರಣೆಯೆಂದರೆ ಉಡುಪಿಯ ಕನಕಗೋಪುರಕ್ಕೆ ಸಂಬಂಧಿಸಿದಂತೆ ಎದ್ದ ತಕರಾರನ್ನು ಅವರು ವಿಶ್ಲೇಷಿಸಿದ

ರೀತಿ. ಕನಕಗೋಪುರವು ನೂರಾರು ವರ್ಷಗಳಿಂದ ಇದ್ದ ರಚನೆ ಎಂಬ ವಿವಾದವೆದ್ದಾಗ ಹಾವನೂರರು "೧೮೯೪ರಲ್ಲಿ ಉಡುಪಿಯ ಡಿಸ್ಟ್ರಿಕ್ಸ್ ಮುನ್ಸಿಫ್ ಆಗಿದ್ದ ಎಂ. ಮುಂಡಪ್ಪ ಬಂಗೇರಾರವರು ಒಂದು ಪ್ರಕರಣದಲ್ಲಿ ನೀಡಿರುವ ತೀರ್ಪಿನಲ್ಲಿ ವಾಲಗ ಮಂಟಪ, ಅಕ್ಕಿ ಬಸಿಯುವ ಅರಿಕೋಟ್ಲು ಓಣಿ ಎಲ್ಲವನ್ನೂ ನಮೂದಿಸಿದ್ದಾರೆ. ಆದರೆ ಇದರಲ್ಲಿ ಕನಕಗೋಪುರದ ಪ್ರಸ್ತಾಪವಿಲ್ಲ' ಎಂಬುದನ್ನು ದಾಖಲೆ ಸಮೇತ ನಿರೂಪಿಸಿ ಕನಕಗೋಪುರ ಇತ್ತೀಚಿನ ರಚನೆ ಎಂಬ ಅಂಶವನ್ನು ತೋರಿಸಿಕೊಟ್ಟಿದ್ದಾರೆ.

ಕೇವಲ ರಾಜಕೀಯ ಇತಿಹಾಸಕ್ಕೆ ಸಂಬಂಧಿಸಿದ ವಿಷಯಗಳನ್ನು ಮಾತ್ರವಲ್ಲದೆ ಧಾರ್ಮಿಕ ಸಾಹಿತ್ಯ, ಅದರಲ್ಲಿಯೂ ವಿಶೇಷವಾಗಿ ದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಸಂಗತಿಗಳನ್ನೂ ಹಾವನೂರರು ತಮ್ಮ ಸಂಪ್ರಬಂಧಗಳಿಗೆ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಪುರಂದರದಾಸರ ಪತ್ನಿಯ ಮೂಗುತಿ ವಿಚಾರ, ನೆಕ್ಕಾರು ಕೃಷ್ಣದಾಸರ ಕಿರುಕಾವ್ಯಗಳು, ಧಾರವಾಡ ಪ್ರದೇಶದಲ್ಲಿ ಹರಿದಾಸ ಸಾಹಿತ್ಯದ ಉಗಮ, ಶ್ರೀ 'ವ್ಯಾಸರಾಯ' 'ವ್ಯಾಸರಾಜ' ಯಾವುದು ಸರಿ? 'ರಾಮಕೃಷ್ಣ' ಮುದ್ರಿಕೆ ವ್ಯಾಸರಾಯರದಲ್ಲ, 'ಮುಳ್ಳು ಕೊನೆಯ ಮೇಲೆ' ಕೀರ್ತನೆಯ ಕರ್ತೃತ್ವ, ಪ್ರಥಮ ಹರಿದಾಸ ಮಹಿಳೆ ಯಾರು? ಹರಿದಾಸರು ಕಂಡ ಶಿವಶರಣರು, ಶೇಕ್ಸ್‌ಪಿಯರ್ ಮಿಲ್ಟನ್ನರು, ಮುಂತಾದವು ಅವರ ಕೆಲವು ಸಂಪ್ರಬಂಧಗಳಲ್ಲಿ ಚರ್ಚಿತವಾಗಿರುವ ವಿಷಯಗಳು.

ಹಾವನೂರರ ಎಲ್ಲ ಸಂಪ್ರಬಂಧಗಳನ್ನು ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದು.

೧. **ಹೊಸ ವಿಷಯಗಳ ಶೋಧನೆ** : ಇತಿಹಾಸದ ಗರ್ಭದಲ್ಲಿ ಅಡಗಿಹೋಗಿರುವ ಸಂಗತಿಗಳ ಎಳೆಗಳನ್ನು ತರ್ಕಬದ್ಧವಾಗಿ ಜೋಡಿಸಿ ಆ ಮೂಲಕ ಕಣ್ಮರೆಯಾಗಿ ಹೋಗಿರುವ ಸತ್ಯದ ಪುನಃಸ್ಥಾಪನೆಯ ಕಾರ್ಯ ಇದು. 'ಉತ್ತರ ಕನ್ನಡ ಜಿಲ್ಲೆ ನಿರ್ಮಾಣವಾದದ್ದು ಹೇಗೆ?' 'ಫ್ಲೀಟರ ಕುರಿತು ಕೆಲವು ಹೊಸ ಅಂಶಗಳು' 'ಕನ್ನಡದ ಮೊದಲ ಪುಸ್ತಕ ಪ್ರಕಾಶಕರು ಯಾರು?' ಮುಂತಾದವು ಈ ವ್ಯಾಪ್ತಿಯ ಲೇಖನಗಳು.

೨. **ಹಳೆಯ ದಾಖಲೆಗಳಿಂದ ಹೊರಡುವ ಹೊಸ ಸಂಗತಿಗಳ ನಿರೂಪಣೆ** : ವಿವಿಧ ಗ್ರಂಥಾಲಯಗಳಲ್ಲಿ ಹಾಗೂ ಪತ್ರಾಗಾರದ ಕಪಾಟುಗಳಲ್ಲಿ ಅಡಗಿ ಕುಳಿತಿರುವ ಹಳೆಯ ದಾಖಲೆಗಳಿಂದ ವಿವರಗಳನ್ನು ಹೆಕ್ಕಿ ಐತಿಹಾಸಿಕ ಸಂಗತಿಗಳ ಆವರೆಗೆ ಕಂಡಿರದ ಮುಖಗಳನ್ನು ಪರಿಚಯಿಸುವ ಕಾರ್ಯವನ್ನು ಹಾವನೂರರು ಸಾಕಷ್ಟು ಮಾಡಿದ್ದಾರೆ. ಉಡುಪಿಯ ಕನಕಗೋಪುರ, ಸಂಗೊಳ್ಳಿ ರಾಯಣ್ಣ, ಮುಲ್ಕೀ ಶಾಲೆಗಳ ವಿಸಿಟ್ ಬುಕ್, ಕಿತ್ತೂರಿನ ಕಿರಿಯರಾಣಿ ವೀರಮ್ಮ ಮುಂತಾದ ವಿಷಯಗಳನ್ನು ಕುರಿತಂತೆ ಇರುವ ಅವರ ಲೇಖನಗಳು ಈ ಮಾತಿಗೆ ನಿದರ್ಶನ.

೩. **ತಪ್ಪು ಹೇಳಿಕೆಗಳ ತಿದ್ದುಪಡಿ** : ಐತಿಹಾಸಿಕ ಸಂಗತಿಗಳಿಗೆ ಸಂಬಂಧಿಸಿದಂತೆ ಇರುವ ಅನೇಕ ತಪ್ಪು ಕಲ್ಪನೆಗಳನ್ನು ಸೂಕ್ತ ಸಾಕ್ಷ್ಯಾಧಾರಗಳಿಂದ ದೂರಗೊಳಿಸುವ ಕಾರ್ಯವನ್ನೂ ಹಾವನೂರರು ತಮ್ಮ ಬರಹಗಳ ಮೂಲಕ ಮಾಡಿದ್ದಾರೆ. ಮುಮ್ಮಡಿ ಕೃಷ್ಣರಾಜ ಒಡೆಯರ ಗ್ರಂಥ ಕರ್ತೃತ್ವ, ಆದ್ಯ ಮರಾಠಿ ನಾಟಕಗಳು ಮತ್ತು ಯಕ್ಷಗಾನ, ಕನ್ನಡದ ಪ್ರಥಮ ಪತ್ರಿಕೆ,

ಸುರಪುರದ ನಿಜ ಸಂಗತಿ, ನರಹರಿ ತೀರ್ಥರ ರಚನೆಗಳು, ಪ್ರಥಮ ಹರಿದಾಸಮಹಿಳೆ – ಹೀಗೆ ಈ ಪಟ್ಟಿಯನ್ನು ಸಾಕಷ್ಟು ಮುಂದುವರೆಸಬಹುದು.

ಹಾವನೂರರು ೨೦೦೬ರಲ್ಲಿ 'ಮರೆಯಲಾಗದ ಮುಂಬೈ ಕರ್ನಾಟಕ' ಎಂಬ ಸಂಪ್ರಬಂಧಗಳ ಗುಚ್ಛವನ್ನೂ, ೨೦೦೮ರಲ್ಲಿ ಭಾಗ್ಯಲಕ್ಷ್ಮಿ ಪ್ರಕಾಶನದ ಮೂಲಕ 'ತುಂಗಭದ್ರೆ ನಾಡಿಗೆ ವರವೋ, ಶಾಪವೋ? ಎಂಬ ಸಂಕಲನವನ್ನೂ ಹೊರತಂದರು. ಆದರೆ ಅವರ ಹಲವಾರು ಸಂಪ್ರಬಂಧಗಳ ಸಂಕಲನ ಕಾರ್ಯ ಇನ್ನೂ ಆಗಬೇಕಿದೆ.

ಸಂಶೋಧನೆಯಲ್ಲಿ ಕಂಪ್ಯೂಟರ್‌ನ ಬಳಕೆ

ಇತಿಹಾಸ ಮತ್ತು ಸಾಹಿತ್ಯದ ಅಭ್ಯಾಸಕ್ಕೆ ಕಂಪ್ಯೂಟರನ್ನು ಬಳಸುವುದರ ಅಗತ್ಯ ಮತ್ತು ಅದರ ಸಾಧ್ಯತೆಗಳನ್ನು ಮೊಟ್ಟಮೊದಲ ಗುರುತಿಸಿದ ಸಂಶೋಧಕರೆಂದರೆ ಡಾ.ಹಾವನೂರರು. ಸುಮಾರು ೩೫ ವರ್ಷಗಳಿಗೂ ಹೆಚ್ಚು ಕಾಲ ಈ ವಿಷಯವನ್ನು ಕುರಿತಂತೆ ಅವರು ನಡೆಸಿರುವ ಚಿಂತನ ಮಂಥನಗಳು, ಕೈಗೊಂಡ ಪ್ರಯೋಗಗಳು ಮತ್ತು ಗಳಿಸಿದ ಯಶಸ್ಸು ಅಭೂತಪೂರ್ವವಾದದ್ದು. ಭಾರತೀಯ ಭಾಷಾ ಸಾಹಿತ್ಯ ಸಂಶೋಧನೆಗೆ ಮೊತ್ತಮೊದಲ ಬಾರಿಗೆ ಕಂಪ್ಯೂಟರನ್ನು ಬಳಸಿದ ಆದ್ಯ ಸಂಶೋಧಕ ಎಂಬ ಹೆಗ್ಗಳಿಕೆ ಅವರದು.

ಸಾಹಿತ್ಯ ಸಂಶೋಧನೆಗೆ ಕಂಪ್ಯೂಟರನ್ನು ಬಳಸಬಹುದೆಂಬ ಯೋಚನೆ ಹಾವನೂರಿಗೆ ಹೊಳೆದದ್ದು ಅವರು ಮುಂಬೈನ ಟಿ.ಐ.ಎಫ್.ಆರ್. ನಲ್ಲಿ ಸೇವೆ ಸಲ್ಲಿಸುತ್ತಿದ್ದಾಗ. ವೈಜ್ಞಾನಿಕ ಮಾಹಿತಿಯ ಪೃಥಕ್ಕರಣ, ವಿಶ್ಲೇಷಣೆ, ಪದಪ್ರಯೋಗಕೋಶ ಮುಂತಾದ ಎಲ್ಲ ಕೆಲಸಗಳಿಗೂ ಕಂಪ್ಯೂಟರ್ ಬಳಕೆಯಾಗುತ್ತಿದ್ದುದನ್ನು ಅವರು ಅಲ್ಲಿ ಗಮನಿಸಿದರು. ಅತ್ಯಂತ ಕಡಿಮೆ ಅವಧಿಯಲ್ಲಿ, ಕೆಲವೇ ಜನರ ಪಾಲ್ಗೊಳ್ಳುವಿಕೆಯೊಂದಿಗೆ ಅತ್ಯಂತ ನಿಖರವಾಗಿ ಫಲಿತಾಂಶಗಳನ್ನು ಕಂಪ್ಯೂಟರ್ ನೀಡಬಲ್ಲದು ಎಂಬ ಅಂಶ ಮನವರಿಕೆಯಾದೊಡನೆ ಈ ವಿಧಾನವನ್ನು ಸಾಹಿತ್ಯ ಕೃತಿಗಳ ವಿಶ್ಲೇಷಣೆಗೂ ಬಳಸಲಾಗದೆಯೇ ಎಂಬ ಪ್ರಶ್ನೆ ಅವರ ಮುಂದೆ ಬಂದಿತು. ಇಂಗ್ಲಿಷ್‌ನಲ್ಲಿ ಆ ವೇಳೆಗಾಗಲೇ ಈ ಬಗೆಯ ಕೆಲವಾದರೂ ಕೃತಿಗಳು ಹೊರಬಂದಿದ್ದವು. ಉದಾಹರಣೆಗೆ ೧೯೬೪ರಲ್ಲಿ ಕಾರ್ನೆಲ್ ವಿಶ್ವವಿದ್ಯಾಲಯದಿಂದ ಪ್ರಕಟವಾಗಿರುವ ಅಮೆರಿಕಾದಾದ್ಯಂತ ಕವಯಿತ್ರಿ ಎಮಿಲಿ ಡಿಕಿನ್ಸನ್‌ಳ ಕಾವ್ಯ ಸಂಪತ್ತಿನ ಪದ ಪ್ರಯೋಗ ಕೋಶ, ರಾಬರ್ಟ್ ಬೂಸಾ ಎಂಬ ಪಾದ್ರಿ ರಚಿಸಿದ ಥಾಮಸ್ ಎಕ್ವಿನಾ ಎಂಬ ಕ್ರೈಸ್ತ ತತ್ವಶಾಸ್ತ್ರಜ್ಞನ ಗ್ರಂಥಗಳ ಪದಪ್ರಯೋಗ ಕೋಶ ಇತ್ಯಾದಿ. ಇಂಗ್ಲಿಷಿನಲ್ಲಿ ಸಾಧ್ಯವಾಗಬಹುದಾದ ಈ ಕಾರ್ಯ ಕನ್ನಡದಲ್ಲೇಕೆ ಸಾಧ್ಯವಾಗಬಾರದು? ಎಂಬ ಆಶಾಭಾವನೆಯೊಂದಿಗೆ ಅವರು ಕಾರ್ಯ ಪ್ರವೃತ್ತರಾದರು.

ಆದರೆ ಎಲ್ಲ ಹೊಸ ಯೋಜನೆಗಳಂತೆ ಈ ಪ್ರಯತ್ನದ ಮೊದಲ ದಿನಗಳು ಅಷ್ಟೇನೂ ಸುಲಭವಾಗಿರಲಿಲ್ಲ. ಏಕೆಂದರೆ ಆ ವೇಳೆಗೆ ಕಂಪ್ಯೂಟರ್‌ನಲ್ಲಿ ಕನ್ನಡ ಲಿಪಿಯನ್ನು ಬಳಸುವ ತಂತ್ರಾಂಶವೇ ಇನ್ನೂ ಸಿದ್ಧವಾಗಿರಲಿಲ್ಲ. ಆದರೂ ಧೃತಿಗೇಡದ ಹಾವನೂರರು ಮೊದಲಿಗೆ ಪರೀಕ್ಷಾರ್ಥವಾಗಿ ರೋಮನ್ ಲಿಪಿಯಲ್ಲಿ ಕಾಳಿದಾಸನ 'ಮೇಘದೂತ'ವನ್ನು

ಕಂಪ್ಯೂಟರಿಗೆ ಉಣಿಸಿ ಅದರ ಪದ ಪ್ರಯೋಗಕೋಶವನ್ನು ತಯಾರಿಸಲು ಯತ್ನಿಸಿದರು. ಆ ಕಾರ್ಯ ಸಫಲವಾದಾಗ ಹರಿದಾಸರ ಕೆಲವು ಉಗಾಭೋಗಗಳನ್ನು, ಬೇಂದ್ರೆಯವರ ಕೆಲವು ಪದ್ಯಗಳನ್ನು ಅಲ್ಲದೆ ದೇವರ ದಾಸಿಮಯ್ಯನ ಸಮಗ್ರ ವಚನಗಳನ್ನು ಕಂಪ್ಯೂಟರ್‌ಗೆ ಊಡಿ ಅದನ್ನು ವಿಶ್ಲೇಷಿಸಿದರು. ಉದಾಹರಣೆಗೆ ಹಳೆಗನ್ನಡದ ಜಿ.ಟಿ.ಗಳು ದೇವರ ದಾಸಿಮಯ್ಯನ ವಚನಗಳಲ್ಲಿ ಎಷ್ಟು ಬಾರಿ ಬಂದಿದೆಯೆಂದು ತಿಳಿಯುವ ದೃಷ್ಟಿಯಿಂದ ಅವಷ್ಟನ್ನೇ ಪಟ್ಟಿ ಮಾಡಲು ಹೇಳಿದಾಗ ಕಂಪ್ಯೂಟರ್ ಕ್ಷಣಾರ್ಧದಲ್ಲಿ ಹಾಗೆ ಮಾಡಿಕೊಟ್ಟಿತು.

ಈ ನಿಟ್ಟಿನಲ್ಲಿ ಅವರು ಕೈಗೊಂಡ ಮೊದಲ ಮಹತ್ವದ ಕೆಲಸವೆಂದರೆ ಕಂಪ್ಯೂಟರ್ ನೆರವಿನಿಂದ ಮುದ್ದಣನ ಕೃತಿಗಳ ವಿಶ್ಲೇಷಣೆ. ಮುದ್ದಣನು ಹರಿಹರರಲ್ಲಿ ಭೇದ ಮಾಡದ ಅದ್ವೈತಿ. ಅದನ್ನು ಶ್ರೀರಾಮಪಟ್ಟಾಭಿಷೇಕದಲ್ಲಿ ಆತ 'ಶಿವನೊಳಂ ತನ್ನೊಳಾ ಭೇದಮೇಂ ತಿಲಮಾತ್ರವಿಲ್ಲ' ಎಂದು ಸ್ವಂತ ಶ್ರೀರಾಮನ ಬಾಯಿಂದ ಹೇಳಿಸಿದ್ದಾನೆ. ಮುದ್ದಣನ ಒಟ್ಟು ಐದು ಕೃತಿಗಳ ಪೈಕಿ ಮೂರರ ಕಥಾನಾಯಕ ಶ್ರೀಹರಿಯ ಅವತಾರಗಳಲ್ಲಿ ಒಬ್ಬನಾದ ಶ್ರೀರಾಮಚಂದ್ರ. ಇಷ್ಟಾಗಿಯೂ ಮುದ್ದಣ ತನ್ನ ಆಂತರ್ಯದಲ್ಲಿ ಶಿವಭಕ್ತನೆಂಬುದನ್ನು ಹಾವನೂರರು ಅಂಕೆ ಸಂಖ್ಯೆಗಳ ಮೂಲಕ ಕರಾರುವಕ್ಕಾಗಿ ತೋರಿಸಿಕೊಟ್ಟರು! ಹೇಗೆಂದರೆ ಮುದ್ದಣನ ಕೃತಿ ಪಂಚಕದಲ್ಲಿ ಬರುವ ವಿವಿಧ ದೇವತಾ ಶಬ್ದಗಳನ್ನು ಕಂಪ್ಯೂಟರಿಗೆ ಪೂರೈಸಿ ಅವನ್ನು ವಿಶ್ಲೇಷಿಸಿದಾಗ ಅವನು ಉಲ್ಲೇಖಿಸಿರುವ ದೇವತೆಗಳ ಸಂಖ್ಯೆ ಇದು:

ಬ್ರಹ್ಮ – ೧೦೩. ಇಂದ್ರ – ೧೪೯. ಹರಿ – ೧೫೬. ರಾಮಚಂದ್ರ – ೧೯೧. ಶಿವ – ೩೦೫.

ಇಂದ್ರ, ಬ್ರಹ್ಮರಿರಲಿ ಒಂದಲ್ಲ ಮೂರು ಕಾವ್ಯಗಳಲ್ಲಿ ಕಥಾನಾಯಕನಾಗಿ ಬಂದಿದ್ದ ಶ್ರೀರಾಮನನ್ನೂ ಹಿಂದೆ ಹಾಕಿ ಶಬ್ದ ರೂಪದಲ್ಲಿ ಶಿವನು ೩೦೫ ಬಾರಿ ಮುದ್ದಣನಲ್ಲಿ ಕಾಣಿಸಿಕೊಂಡಿರುವುದರ ಅರ್ಥ ಆತ ಶಿವಭಕ್ತನಾಗಿದ್ದದ್ದೇ ಎನ್ನುವುದು ಹಾವನೂರರು ನೀಡುವ ವಿವರಣೆ. "ಈ ೩೦೫ ಹೆಸರುಗಳಲ್ಲಿ ಅವರು ಶಿವ, ಹರ, ಈಶ್ವರ ಎಂಬ ಸಾಮಾನ್ಯ ಬಳಕೆಯ ಶಬ್ದಗಳನ್ನು ಪರಿಗಣಿಸಿಲ್ಲ. 'ಇಂದು ಶೇಖರ'ದಂತಹ ಒಂದೆರಡು ಶಬ್ದಗಳು ನಾಲ್ಕಾರು ಬಾರಿ ಪುನರುಕ್ತವಾಗಿರುವುದು ಬಿಟ್ಟರೆ ಮುದ್ದಣನು ಶಿವಾರ್ಥದ ಒಟ್ಟು ೧೮೮ ಮೂಲ ಶಬ್ದಗಳನ್ನು ಬಳಸಿದ್ದಾನೆ. ಅಮರಕೋಶದಲ್ಲಿ ೫೩ ಶಿವ ಪಾರವಾದ ನಾಮಗಳಿದ್ದು ಅವುಗಳಲ್ಲಿ ಮುದ್ದಣ ಕೇವಲ ೨೬ನ್ನು ಬಳಸಿಕೊಂಡಿದ್ದಾನೆ. ಉಳಿದವನ್ನು ಹಳೆಯ ಕಾವ್ಯಗಳಿಂದ ಮತ್ತು ಬಹುಮುಖ್ಯವಾಗಿ ತಾನೇ ಸೃಷ್ಟಿಸುವ ಮೂಲಕ (ಉರಿಗಣ್ಣ, ದಪ್ಪಕವಗೆಯ, ಎಣ್ಮೆಯ್ಯವ, ತೆರೆದಲೆಯ, ಬಾಂಗೂದಲ, ಎಲರುಣಿವೆದೆಯ, ಬಗ್ಗದೊವಲುಡುಗೆಯ, ಅರೆಮೆಯ್ಯ, ಅಕಿವೆಣ್ಮೆಯ್ಯ, ಇತ್ಯಾದಿ) ತನ್ನ ಶಿವಭಕ್ತಿಯನ್ನು ತೋರಿದ್ದಾನೆ ಎಂದು ಅವರು ಲೆಕ್ಕಾಚಾರ ಹಾಕಿ ತೋರಿಸಿದ್ದಾರೆ. ಈ ಎಲ್ಲ ಅಂಶಗಳನ್ನು ಒಳಗೊಂಡ 'ಮುದ್ದಣ ಕಂಡ ಶಿವ' ಎಂಬ ಸಂಪ್ರಬಂಧವನ್ನು ೧೯೭೫ರಲ್ಲಿ ಇಂಗ್ಲೆಂಡಿನ 'ಅಸೋಸಿಯೇಷನ್ ಫಾರ್ ಲಿಟರರಿ ಅಂಡ್ ಲಿಂಗ್ವಿಸ್ಟಿಕ್ ಕಂಪ್ಯೂಟರಿಂಗ್' ಎಂಬ ಸಂಸ್ಥೆಯ ಸಮಾವೇಶದಲ್ಲಿ ಅವರು ಮಂಡಿಸಿ ಕೀರ್ತಿ ಗಳಿಸಿದರಲ್ಲದೆ ಆ ಸಂಸ್ಥೆಯ 'ಅಧಿಕೃತ ಭಾರತೀಯ ಪ್ರತಿನಿಧಿ' ಎಂಬ ಗೌರವಕ್ಕೆ ಮೂರು ವರ್ಷಗಳ ಕಾಲ ಪಾತ್ರರಾದರು.

ಕಂಪ್ಯೂಟರನ್ನು ಬಳಸಿ ಸಾಹಿತ್ಯ ಕೃತಿಗಳನ್ನು ವಿಶ್ಲೇಷಿಸುವ ನಿಟ್ಟಿನಲ್ಲಿ ಹಾವನೂರರು ಯಶಸ್ವಿಯಾದ ಬೃಹತ್ ಯೋಜನೆಯೆಂದರೆ ಸಮಗ್ರದಾಸ ಸಾಹಿತ್ಯದ ವಿಷಯಾನುಗುಣ ವಿಂಗಡಣೆ.

೧೯೯೫ರಲ್ಲಿ ಪೇಜಾವರದ ಶ್ರೀ ವಿಶ್ವೇಶ್ವತೀರ್ಥರು ಹರಿದಾಸರ ಸಮಗ್ರ ಸಾಹಿತ್ಯವನ್ನು ಪ್ರಕಟಿಸಬೇಕೆಂಬ ಯೋಜನೆಯನ್ನು ಕರ್ನಾಟಕ ಸರ್ಕಾರದ ಮುಂದಿರಿಸಿದರು. ಡಾ. ಹಾವನೂರರೂ ಸೇರಿದಂತೆ ಹಲವು ಮಂದಿ ವಿದ್ವಾಂಸರು ಸೇರಿ ೨೦೦೩ರಲ್ಲಿ ಸುಮಾರು ೧೪೦ ಮಂದಿ ಹರಿದಾಸರ ಸುಮಾರು ೧೬ ಸಾವಿರ ಹಾಡುಗಳನ್ನು ಒಳಗೊಂಡ ೫೦ ಸಂಪುಟಗಳನ್ನು ಹೊರತಂದರು. ಹಾವನೂರರು ಈ ಸಮಿತಿಯ ಕಾರ್ಯವಾಹಕ ಸಂಪಾದಕರಾಗಿ ದುಡಿದಿದ್ದಾರಲ್ಲದೆ ಹಲವಾರು ಹರಿದಾಸರ ಕೀರ್ತನ ಸಂಪುಟಗಳನ್ನು ಸ್ವತಃ ಸಂಪಾದಿಸಿಯೂ ಕೊಟ್ಟರು. ಯೋಜನೆ ಪೂರ್ಣಗೊಂಡು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಬೇರೆ ಯಾರಾದರೂ ಆಗಿದಿದ್ದರೆ ಕೆಲಸ ಮುಗಿಯಿತೆಂಬ ಸಮಾಧಾನ ದೊಂದಿಗೆ ಸುಮ್ಮನಾಗುತ್ತಿದ್ದರು.

ಆದರೆ ಹಾವನೂರರಿಗೆ ಸಂಪೂರ್ಣ ತೃಪ್ತಿ ಆಗಲಿಲ್ಲ. ದೇವತಾ ಸ್ತುತಿ, ಯತಿಗಳ ಸ್ತುತಿ, ತೀರ್ಥ ಕ್ಷೇತ್ರಗಳ ವರ್ಣನೆ, ಆತ್ಮನಿವೇದನೆ, ತತ್ವವಿಚಾರ, ಪೌರಾಣಿಕ ಕಥನಗಳು, ನೀತಿಬೋಧೆ ಮುಂತಾದ ಸುಮಾರು ೮೫೦ಕ್ಕೂ ಹೆಚ್ಚು ವಿಷಯಗಳಿರುವ ಈ ಮಹಾಸಮುದ್ರದಲ್ಲಿ ಒಂದು ನಿರ್ದಿಷ್ಟ ವಿಷಯದ ಬಗ್ಗೆ ಯಾವ ಯಾವ ಹರಿದಾಸರು ಏನೆಲ್ಲ ಹಾಡುಗಳನ್ನು ಬರೆದಿದ್ದಾರೆ ಎಂಬುದನ್ನು ಪತ್ತೆ ಹಚ್ಚುವುದು ಹೇಗೆ? ಎಂಬ ಪ್ರಶ್ನೆ ಅವರನ್ನು ಕಾಡತೊಡಗಿತು.

ಇದಕ್ಕೂ ಮತ್ತೆ ಅವರು ಬಳಸಿಕೊಂಡದ್ದು ಕಂಪ್ಯೂಟರ್ ತಂತ್ರಜ್ಞಾನವನ್ನೇ. ಮೊದಲಿಗೆ ಮೂರು ಬಗೆಯ ಮಾಹಿತಿಯನ್ನು ಅವರು ಕಂಪ್ಯೂಟರಿಗೆ ಊಡಿದರು. ಅವೆಂದರೆ:

೧. **ಹಾಡುಗಳ ವಿವರ** : ಪಲ್ಲವಿ, ಪ್ರಕಾರ, ಅಂಕಿತ, ದಾಸರ ಹೆಸರು, ಹಾಡಿನಲ್ಲಿ ಇರಬಹುದಾದ ಒಂದು ಅಥವಾ ಹೆಚ್ಚು ವಿಷಯಗಳು, ಪ್ರಕಾಶನದ ವಿವರಗಳು, ಲಭ್ಯತೆ, ಸಾರ ಅಥವಾ ವಿಶೇಷ ಮಾಹಿತಿ ಮುಂತಾದ ಅಂಶಗಳು.

೨. **ಹರಿದಾಸರ ಜೀವನ** : ಅಂಕಿತ, ನಿಜನಾಮ, ಸ್ಥಳ, ಕಾಲ, ಬಳಗದವರು, ಶಿಷ್ಯವೃಂದ, ದಾಸದೀಕ್ಷೆ ಇತ್ತವರು, ಕೀರ್ತನೆಗಳ ಸಂಖ್ಯೆ, ದೀರ್ಘ ಕೃತಿಗಳು, ಹೆಚ್ಚಿನ ಮಾಹಿತಿಗಳಿಗಾಗಿ ಆಕರಗಳು.

೩. **ವಾಙ್ಮಯ ಸೂಚಿ** : ೧೮೭೮ರಿಂದ ೨೦೦೩ರ ವರೆಗೆ ಪ್ರಕಟವಾಗಿರುವ ಹರಿದಾಸ ಸಾಹಿತ್ಯಕ್ಕೆ ಸಂಬಂಧಿಸಿದ ಹಲವಾರು ಲೇಖನ ಹಾಗೂ ಕೃತಿಗಳ ಶೀರ್ಷಿಕೆ, ಲೇಖಕ, ಪ್ರಕಟಣೆ, ಅದರಲ್ಲಿ ವಿಷಯ ಮುಂತಾದ ವಿವರಗಳು.

ಇವನ್ನು ಪೃಥಕ್ಕರಿಸಿ ಮತ್ತೆ ಪ್ರತ್ಯೇಕ ಪ್ರಕರಣಗಳಾಗಿ ವಿಂಗಡಿಸಲಾಗಿದೆ. ಪ್ರತಿ ಪ್ರಕಾರದ ಅಡಿಯಲ್ಲಿ ಬರುವ ಕೀರ್ತನೆಗಳ ಮೊದಲ ಸಾಲುಗಳನ್ನು, ಅದನ್ನು ರಚಿಸಿದವರು, ಆಕರ ಸಂಪುಟದ ಸಂಖ್ಯೆ ಮುಂತಾದ ವಿವರಗಳ ಸಮೇತ ಪಟ್ಟಿ ಮಾಡಲಾಗಿದೆ. ಸುಮಾರು ೨೫

ಪುಟಗಳಷ್ಟು ವಿಸ್ತಾರವಾದ 'ಸಮಗ್ರ ಹರಿದಾಸ ಸಾಹಿತ್ಯ ಸಾರ ಸಮೀಕ್ಷೆ' ಹರಿದಾಸ ಸಾಹಿತ್ಯವನ್ನು ಸಮಗ್ರವಾಗಿ ಪರಿಚಯಿಸುತ್ತದೆ. ಸುಮಾರು ೧೪೦ ಪುಟಗಳಲ್ಲಿ ಸುಮಾರು ೧೬ ಸಾವಿರ ಕೀರ್ತನೆಗಳ ಎಲ್ಲ ವಿಷಯಗಳ ಅಕಾರಾದಿ ಸೂಚಿಯನ್ನು ನೀಡಿರುವುದಂತೂ ಬಹಳ ಉಪಯುಕ್ತಕರ. ಅಷ್ಟೇ ಅಲ್ಲದೆ ಸಂಗೀತಕ್ಕೆ ಅಳವಡಿಸಲಾದ ಸುಮಾರು ಐದುನೂರು ಕೀರ್ತನೆಗಳ ಯಾದಿಯೂ ಇಲ್ಲಿದೆ. ಕಂಪ್ಯೂಟರ್ ಆಧಾರಿತ ತಂತ್ರಜ್ಞಾನವನ್ನು ಬಳಸಿದ್ದರಿಂದ ಇಷ್ಟೆಲ್ಲ ಕೆಲಸಗಳನ್ನು ಬಹಳ ನಿಖರವಾಗಿ ಮತ್ತು ಕ್ರಮಬದ್ಧವಾಗಿ ಮಾಡಲು ಸಾಧ್ಯವಾಗಿದೆ.

'ಸಮಗ್ರ ಹಗಿದಾಸ ವಾಙ್ಮಯ ಕೋಶ' ಎಂಬ ಹೆಸರಿನಲ್ಲಿ ಈ ಗ್ರಂಥವು ಹಾವನೂರರು ನಿಧನರಾದ ನಾಲ್ಕು ವರ್ಷಗಳ ನಂತರ (೨೦೧೪) ಪ್ರಕಟವಾಗಿದೆ.

ಸಮಗ್ರ ಹರಿದಾಸ ವಾಙ್ಮಯ ಸೂಚಿಯ ಬಿಡುಗಡೆ

ಇದೇ ಮಾದರಿಯ ಕಾರ್ಯಕ್ರಮವನ್ನು ಬಳಸಿಕೊಂಡು ಕರ್ನಾಟಕದ, ಅಷ್ಟೇಕೆ ಸಮಗ್ರ ಭಾರತದ ಇತಿಹಾಸವನ್ನು ದಾಖಲಿಸಲು ಸಾಧ್ಯ ಎಂಬ ಸಿದ್ಧಾಂತವನ್ನು ಹಾವನೂರರು ಹಲವು ಬಾರಿ ಪ್ರತಿವಾದಿಸಿದ್ದರು. ವಿ. ಕೃಷ್ಣರವರೊಂದಿಗೆ ಸೇರಿ 'ಕನಕದಾಸರ ಕೀರ್ತನೆಗಳ ಶಬ್ದ ಪ್ರಯೋಗಕೋಶ'ವನ್ನು ಅವರು ತಯಾರಿಸಿದ್ದು ೨೦೧೦ರಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಕನಕದಾಸ ಸಂಶೋಧನ ಕೇಂದ್ರ ಅದನ್ನು ಪ್ರಕಟಿಸಿದೆ. 'ಕಾಲಾನುಕ್ರಮವಾದ ಕರ್ನಾಟಕ ಇತಿಹಾಸ (Chronological History of Karnataka), The oxford companion to English Literature' ಮಾದರಿಯಲ್ಲಿ ಕನ್ನಡ ಸಾಹಿತ್ಯ ಮಾಹಿತಿಕೋಶ ಎಂಬ ಕೃತಿ ರಚನೆ ಮತ್ತು ಅದರ ವೆಬ್‌ಸೈಟ್ ನಿರ್ಮಾಣ ಮುಂದಿನ ಐವತ್ತು ವರ್ಷಗಳ ಅವಧಿಯಲ್ಲಿ ದೇಶದಲ್ಲಿ ಉದ್ಭವಿಸ ಬಹುವಾದ ಸಾಮಾಜಿಕ, ರಾಜಕೀಯ ಸಮಸ್ಯೆಗಳ ಭವಿತವ್ಯದ ಅಧ್ಯಯನ (Futurologyical studies) ಮುಂತಾದವುಗಳಿಗೆ ಕಂಪ್ಯೂಟರನ್ನು ಪರಿಣಾಮ ಕಾರಿಯಾಗಿ ಬಳಸಿಕೊಳ್ಳುವುದರ ಬಗ್ಗೆ ಹಲವಾರು ಸೋದಾಹರಣ ಉಪನ್ಯಾಸಗಳನ್ನು ನೀಡಿದ್ದರು. ಕೆಲವು ಯೋಜನೆಗಳನ್ನು ಪ್ರಾಯೋಗಿಕವಾಗಿ ಮುಂದುವರೆಸಿಯೂ ಇದ್ದರು.

'ಕನ್ನಡ ವ್ಯಾಸಂಗಕ್ಕೆ ಕಂಪ್ಯೂಟರ್ ಸಹಾಯ' (೨೦೦೩) ಎಂಬ ಅವರ ಪುಸ್ತಕ ಗಾತ್ರದಲ್ಲಿ ಕಿರಿದಾದರೂ ಹಲವು ಮೌಲಿಕವಾದ ಸೂಚನೆಗಳನ್ನು ಒಳಗೊಂಡಿದೆ.

ವಿಶೇಷದ ಸಂಗತಿಯೆಂದರೆ ಸುಮಾರು ೩೫ ವರ್ಷಗಳಿಗೂ ಹೆಚ್ಚು ಕಾಲ ಕಂಪ್ಯೂಟರನ್ನು ಕನ್ನಡ ಅಧ್ಯಯನಕ್ಕೆ ಬಳಸಿಕೊಳ್ಳುವ ಬಗ್ಗೆ ಹಾವನೂರರು ಕೆಲಸ ಮಾಡುತ್ತಾ ಬಂದಿದ್ದರಾದರೂ ಒಂದು ದಿವಸವೂ ಅವರು ಅದರ ಮುಂದೆ ಕುಳಿತು ಕೀಲಿಮಣೆಯನ್ನೋ ಮೌಸನ್ನೋ ಬಳಸಿರಲಿಲ್ಲ! ಕಡೆಯವರೆಗೂ ಅವರಿಗೆ ಸ್ವತಃ ಅದನ್ನು ಬಳಸುವ ವಿಧಾನ ತಿಳಿದಿರಲಿಲ್ಲ. ಆದರೆ ಕಂಪ್ಯೂಟರನ್ನು ಹೇಗೆ ಬಳಸಿಕೊಳ್ಳಬೇಕು ಎನ್ನುವುದರ ಬಗ್ಗೆ ಅವರಿಗೆ ಸ್ಪಷ್ಟವಾದ ಪರಿಕಲ್ಪನೆ ಇದ್ದುದರಿಂದ ಇಷ್ಟೆಲ್ಲ ಕೆಲಸಗಳನ್ನು ಅವರು ಯಶಸ್ವಿಯಾಗಿ ಮಾಡಿ ಮುಗಿಸಿದರು. "ಕೇವಲ ಅಸಿಸ್ಟೆಂಟರನ್ನು ಇಟ್ಟುಕೊಂಡು ನಾನು ಇಷ್ಟು ಕೆಲಸ ಮಾಡುವುದು ಸಾಧ್ಯವಾದರೆ ಸ್ವತಃ ಕಂಪ್ಯೂಟರ್ ಕ್ಷೇತ್ರದಲ್ಲಿ ಪರಿಣಿತರಾದವರು ಇನ್ನೂ ಏನೆಲ್ಲ ಕೆಲಸಗಳನ್ನು ಮಾಡಬಹುದು. ಊಹಿಸಿ" ಎಂಬ ಅವರ ಪ್ರಶ್ನೆ ನಿಜಕ್ಕೂ ಅರ್ಥಪೂರ್ಣ.

ಸಮೀಕ್ಷೆ, ಸಂಪಾದನೆ ಮತ್ತು ಸೂಚಿ ರಚನೆ

ಕೇವಲ ಹೊಸತನ್ನು ಕಂಡುಹಿಡಿಯುವುದು ಮಾತ್ರವೇ ಸಂಶೋಧನೆಯಲ್ಲ. ಲಬ್ಧ ಮಾಹಿತಿಯನ್ನು ಶಾಸ್ತ್ರೀಯವಾಗಿ ವರ್ಗೀಕರಿಸುವುದು, ಅಲಭ್ಯವಿರುವ ನಡುವಣ ಕೊಂಡಿಗಳನ್ನು ಪತ್ತೆ ಹಚ್ಚುವುದು, ಹೀಗೆ ಸಮಗ್ರವಾಗಿ ಒಟ್ಟಾದ ಮಾಹಿತಿಯನ್ನು ಇಟ್ಟುಕೊಂಡು ಒಂದು ಪರಿಪೂರ್ಣವಾದ ಚಿತ್ರವನ್ನು ಕಟ್ಟಿ ಕೊಡುವುದು, ಒಬ್ಬ ನಿರ್ದಿಷ್ಟ ಸಾಹಿತ್ಯ ಅಥವಾ ಪ್ರಕಾರದ ಸಮಗ್ರ ಸೂಚಿಯನ್ನು ಸಿದ್ಧಪಡಿಸುವುದು ಮುಂತಾದವುಗಳೂ ಸಂಶೋಧನೆಯ ವಿವಿಧ ಮುಖಗಳೇ. ಹಾವನೂರರು ಈ ಎಲ್ಲ ಕ್ಷೇತ್ರಗಳಲ್ಲಿಯೂ ಶ್ರಮಿಸಿದ್ದಾರೆ. ಕೇವಲ ಸಂಶೋಧಕರಾಗಿ ಮಾತ್ರವಲ್ಲದೆ ಗ್ರಂಥಾಲಯ ಶಾಸ್ತ್ರದ ಪರಿಣಿತರೂ ಆಗಿದ್ದುದರಿಂದ ಅವರ ಕಾರ್ಯಕ್ಕೆ ಹೆಚ್ಚಿನ ತೂಕ ಬಂದಿದೆ.

ಸಾಹಿತ್ಯ ಸಮೀಕ್ಷೆ

೧೯೬೬ರಲ್ಲಿ ಉಡುಪಿಯ ಎಂ.ಜಿ.ಎಂ. ಕಾಲೇಜಿನ ವತಿಯಿಂದ ಪ್ರಕಟವಾದ 'ಗೋವಿಂದ ಪೈ ವಾಙ್ಮಯ ದರ್ಶನ' ಇಲ್ಲಿ ಹೆಸರಿಸ ಬೇಕಾದ ಮೊದಲ ಕೃತಿ. ಶ್ರೀ ಮು.ವಿ. ನಾಯಕರ ಸಹಸಂಪಾದಕತ್ವದಲ್ಲಿ ಹಾವನೂರರು ಈ ಅಪರೂಪದ ಗ್ರಂಥವನ್ನು ಸಂಪಾದಿಸಿದ್ದಾರೆ. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ರಾಷ್ಟ್ರಕವಿ ಗೋವಿಂದ ಪೈರವರು ರಚಿಸಿದ ವಿವಿಧ ಪ್ರಕಾರಗಳಿಗೆ ಸೇರಿದ ಸಾಹಿತ್ಯರಾಶಿಯನ್ನು ಇಲ್ಲಿ ವ್ಯವಸ್ಥಿತವಾಗಿ ವರ್ಗೀಕರಿಸಲಾಗಿದೆ. ಉಡುಪಿ, ಸಾಂಗಲಿ, ಧಾರವಾಡ, ಮುಂಬೈ, ಬೆಂಗಳೂರು ಮುಂತಾದ ಊರುಗಳ ಗ್ರಂಥಾಲಯಗಳನ್ನು ಹುಡುಕಿ ಹಲವಾರು ಮಂದಿ ವಿದ್ವಾಂಸರಿಗೆ ಕಾಗದಗಳನ್ನು ಬರೆದು ಪೈಯವರ ಸುಮಾರು ೩೫೦ ಬರಹಗಳನ್ನು ವಿವರಗಳನ್ನು ಒಟ್ಟು ಮಾಡುವಲ್ಲಿ ಈ ಸಂಪಾದಕದ್ವಯರು ಯಶಸ್ವಿಯಾಗಿದ್ದಾರೆ. ಈ

ಕೃತಿಯಲ್ಲಿ ಮೂರು ಭಾಗಗಳಿದ್ದು ಮೊದಲನೆಯದು ಪೈಯವರ ಸಾಹಿತ್ಯವನ್ನು ಕುರಿತ ಸಮೀಕ್ಷಕ ಪ್ರಬಂಧ. ಪೈಯವರು ಯಾವ, ಯಾವ ಕ್ಷೇತ್ರದಲ್ಲಿ ಕೃಷಿ ಮಾಡಿದ್ದಾರೆ. ಅವರ ಬರವಣಿಗೆಯ ಬಲವೇನು? ಬರಹಗಳ ಮೌಲಿಕ ಬೆಲೆ ಏನಿರಬಹುದು? ಎಂಬವೇ ಮಾತುಗಳ ಮುನ್ಸೂಚನೆಯನ್ನಷ್ಟೇ ಈ ಪ್ರಬಂಧವು ಕೊಟ್ಟಿದೆ. ಎರಡನೇ ಭಾಗದಲ್ಲಿ ಅವರ ಕೃತಿಗಳನ್ನು ಇತಿಹಾಸ ಪ್ರಬಂಧ, ಧರ್ಮ ತತ್ತ್ವಜ್ಞಾನ, ಹಳಗನ್ನಡ ಕವಿಕಾವ್ಯ, ಹೊಸಗನ್ನಡ ವಿಚಾರ, ನಾಟಕ, ಕವಿತೆ ಈ ಮುಖ್ಯ ಗುಂಪುಗಳಲ್ಲಿ ವಿಂಗಡಿಸಿ ಆಕಾರಾದಿಯಾಗಿ ಕೊಡಲಾಗಿದೆ. ಪ್ರತಿ ಲೇಖನದ ವಿಷಯಸಾರವನ್ನೂ ನೀಡಿರುವುದು ವಿಶೇಷ. ಪೈಯವರನ್ನು ಕುರಿತು ಆವರೆಗೆ ಬಂದ ಗ್ರಂಥಗಳು ಹಾಗೂ ಬಿಡಿ ಲೇಖನದ ವಿವರಗಳೂ ಇಲ್ಲಿವೆ. ಮೂರನೇ ವಿಭಾಗದಲ್ಲಿ ಪೈಗಳ ಬರಹಗಳ ವಿಷಯ, ಶೀರ್ಷಿಕೆ ಹಾಗೂ ಪ್ರಕಟನ ಮೂಲಗಳ ಸೂಚಿಗಳಿವೆ.

ಗೋವಿಂದ ಪೈಯವರ ಸಾಹಿತ್ಯವನ್ನು ಅಭ್ಯಸಿಸಲು ಈ ಕೃತಿ ಎಷ್ಟು ಉಪಯುಕ್ತ ವಾಯಿತೆಂದರೆ ಮುಂದೆ ಪೈಯವರ ಸಮಗ್ರ ಸಾಹಿತ್ಯವನ್ನು ಪ್ರಕಟಿಸಲು ಇದೇ ಬೀಜರೂಪ ವಾಯಿತು. ೧೯೮೩ರಲ್ಲಿ ಹಾವನೂರರು 'ಗೋವಿಂದ ಪೈ ವಾಙ್ಮಯ ಸಮೀಕ್ಷೆ' ಎಂಬುದೊಂದು ಪ್ರತ್ಯೇಕ ಕೃತಿಯನ್ನು ಪ್ರಕಟಿಸಿದ್ದಾರೆ. ೧೯೯೧ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗ ಹೊರತಂದಿರುವ ಇವರ 'ಶ್ರೀ ವಾದಿರಾಜರ ತೀರ್ಥ ಪ್ರಬಂಧ' ಒಂದು ಕಾವ್ಯಾತ್ಮಕ ಸಮೀಕ್ಷೆ ಕೃತಿಯ ಕಲ್ಪಕ ಸೌಂದರ್ಯವನ್ನು ಎತ್ತಿ ತೋರುತ್ತದೆ.

ಸಂಪಾದನೆ

ಹಳೆಯ ತಲೆಮಾರಿನ ಲೇಖಕರ ಬರಹಗಳನ್ನು ಭಾಗಶಃ ಅಥವಾ ಸಮಗ್ರವಾಗಿ ಸಂಪಾದಿಸಿ ಪ್ರಕಟಿಸುವುದು ಹಾವನೂರರಿಗೆ ಬಹಳ ಪ್ರಿಯವಾದ ಕೆಲಸ. ೧೯೯೦ರಲ್ಲಿ ಅವರು ಧಾರವಾಡದ ಆಲೂರ ವೆಂಕಟರಾವ ಪ್ರತಿಷ್ಠಾನದಿಂದ ಬೆಂಗೇರಿ ಹುಚ್ಚುರಾವ್‌ರವರ ಲೇಖನಗಳ ಸಂಗ್ರಹವಾದ 'ಬೆಂಗೇರಿಯವರ ಬರಹಗಳು' ಕೃತಿಯನ್ನು ಹೊರತಂದರು. ಇದೇ ಗುಂಪಿಗೆ ಸೇರಬೇಕಾದವು ೧೯೯೪ರಲ್ಲಿ ಹೊರಬಂದ 'ಹಟ್ಟಿಯಂಗಡಿ ನಾರಾಯಣರಾವ್ ಸಾಹಿತ್ಯ ವಾಚಿಕೆ' ಮತ್ತು ೨೦೧೬ರಲ್ಲಿ ಪ್ರಕಟವಾದ 'ಮುಳಿಯ ತಿಮ್ಮಪ್ಪಯ್ಯನವರ ಸಾಹಿತ್ಯ ವಾಚಿಕೆ'ಗಳು. ಗಂಗಾಧರ ಮಡಿವಾಳೇಶ್ವರ ತುರಮುರಿ ಯವರ 'ಕರ್ನಾಟಕ ಶಬ್ದಮಂಜರಿ', ಮಹದೇವ ಪ್ರಭಾಕರ ಪೂಜಾರರ 'ಹಳಗನ್ನಡ ಕವಿ ಕಾವ್ಯ ಮಹೋನ್ನತಿ,' ರಾಮಚಂದ್ರ ಉಚ್ಚಿಲರ 'ಪಂಪ ರಾಮಾಯಣದ ಗದ್ಯಾನುವಾದ', ಚುರಮರಿ ಶೇಷಗಿರಿರಾಯರ ಶಕುಂತಲಾ ನಾಟಕದ ಕನ್ನಡ ಅನುವಾದ ಮತ್ತು ಭೀಮರಾವ ಚಿಟಗುಪ್ಪಿಯವರು ಅದಕ್ಕೆ ಬರೆದ ಸಮೀಕ್ಷೆ, ರಂ.ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆಯ ಮುಂದುವರಿಕೆ' ಮತ್ತು 'ರಂ ಶ್ರೀ ಮುಗಳಿಯವರು ಚಿತ್ರಿಸಿದ ಪಂಪರನ್ನರು' ಕೃತಿಗಳನ್ನು ಅವರು ಸಂಪಾದಿಸಿದ್ದಾರೆ. ೨೦೦೩ರಲ್ಲಿ ರೆ. ಕಿಟೆಲ್ಲರ ಕವನಗಳನ್ನು ಸಂಪಾದಿಸಿದ್ದು ವಿಶೇಷ ಸಂಗತಿ. ಖ್ಯಾತ ಶಾಸನತಜ್ಞ ನೆಲಮಂಗಲ

ಲಕ್ಷ್ಮೀನಾರಾಯಣರಾಯರ ಬರಹಗಳನ್ನು ಅವರು ಎಚ್.ಎಸ್. ಗೋಪಾಲರಾಯರೊಂದಿಗೆ ಸಂಪಾದಿಸಿದ್ದಾರೆ.

ಈ ಸಾಲಿನಲ್ಲಿ ಪ್ರಸ್ತಾಪಿಸಬೇಕಾದ ಮತ್ತೊಂದು ಕೃತಿ ಶ್ರೇಣಿಯೆಂದರೆ 'ಪಾವೆಂ ಆಚಾರ್ಯರ ಸಮಗ್ರ ಕೃತಿಗಳು. 'ಕಸ್ತೂರಿ' ಮಾಸ ಪತ್ರಿಕೆಯ ಸಂಪಾದಕರಾಗಿದ್ದ ಪಾಡಿಗಾರು ವೆಂಕಟರಮಣ ಆಚಾರ್ಯರು ಒಬ್ಬ ವಿಶಿಷ್ಟ ವಿದ್ವಾಂಸ. ಕಲೆ, ಇತಿಹಾಸ, ವಿಜ್ಞಾನ, ಸಾಹಿತ್ಯ, ಹರಟೆ, ಕಾವ್ಯ ಮುಂತಾದ ಹಲವು ಬಗೆಯ ಸಾಹಿತ್ಯ ಕೃಷಿಯನ್ನು ನಡೆಸಿದವರು. ಪಾ.ವೆಂ.ರ ನಿಧನದ ನಂತರ, ೧೯೯೯ರಲ್ಲಿ 'ಪಾ.ವೆಂ. ವಿಶ್ವಸ್ತ ಸಮಿತಿ' ರಚನೆಯಾಗುವಂತೆ ಮಾಡಿ ಹಾವನೂರರು ತಾವೂ ಅದರಲ್ಲಿ ಒಬ್ಬ ಟ್ರಸ್ಟಿಯಾದರು. ಬೇರೆ ಬೇರೆ ಕಡೆ ಚದುರಿಹೋಗಿದ್ದ ಆಚಾರ್ಯರ ಬರಹಗಳನ್ನು ಒಂದು ಗೂಡಿಸಿ ಪ್ರಸ್ತುತ ಲೇಖಕನ ಸಹ ಸಂಪಾದಕತ್ವದಲ್ಲಿ ೧೪ ಸಂಪುಟಗಳಾಗಿ ವಿಂಗಡಿಸಿದರು. ಲೋಕ ಶಿಕ್ಷಣ ಟ್ರಸ್ಟ್, ಗೋವಿಂದ ಪೈ ಸಂಶೋಧನ ಕೇಂದ್ರ, ಸಾಹಿತ್ಯ ಪ್ರಕಾಶನ, ನವಕರ್ನಾಟಕ ಮುಂತಾದ ನಾಡಿನ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳು ಇವುಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡವು. ೨೦೦೦ರಿಂದ ೨೦೦೪ರ ಒಳಗಿನ ಐದು ವರ್ಷಗಳ ಅವಧಿಯಲ್ಲಿ ಈ ಬೃಹತ್ ಯೋಜನೆ ಸಫಲವಾದದ್ದು ಹಾವನೂರರ ಕರ್ತೃತ್ವ ಶಕ್ತಿಯ ಕುರುಹು.

ಸಮಗ್ರ ಹರಿದಾಸ ಸಾಹಿತ್ಯ ಯೋಜನೆಯ ಕಾರ್ಯಕಾರಿ ಸಂಪಾದಕರಾಗಿ ಹಾವನೂರು ಮಾರ್ಗದರ್ಶನ ಮಾಡಿದರಲ್ಲದೆ ಸ್ವತಃ ತುಪಾಕಿ ವೆಂಕಟರಮಣಾಚಾರ್ಯ, ಪಾವಂಜೆ ಲಕ್ಷ್ಮೀನಾರಣಪ್ಪ, ವಿಶ್ವೇಂದ್ರ ತೀರ್ಥ, ಶ್ರೀದವಿಠಲ, ಇಂದಿರೇಶ ವಿಠಲ ಮುಂತಾದ ಹಲವಾರು ಹರಿದಾಸರ ಕೀರ್ತನೆಗಳನ್ನು ಸಂಕಲಿಸಿದ್ದಾರೆ. ವಿವಿಧ ಹರಿದಾಸರುಗಳು ವಾದಿರಾಜರು, ಸತ್ಯಬೋಧರು ಮತ್ತು ರಾಘವೇಂದ್ರಯತಿಗಳನ್ನು ಕುರಿತು ಬರೆದಿರುವ ಹಾಡುಗಳನ್ನು ಮೂರು ಪ್ರತ್ಯೇಕ ಸಂಕಲನಗಳಾಗಿಯೂ ಅವರು ಹೊರತಂದಿದ್ದಾರೆ.

ಸೂಚಿ ರಚನೆ

ಒಬ್ಬ ವ್ಯಕ್ತಿ ಅಥವಾ ಒಂದು ವಿಷಯಕ್ಕೆ ಸಂಬಂಧಿಸಿದ ವಿವಿಧ ಮಾಹಿತಿಯನ್ನು ಒಳಗೊಂಡ ಸೂಚಿ ಸಂಶೋಧನೆಗೆ ಅತ್ಯಂತ ಅಗತ್ಯವಾಗಿ ಬೇಕಾಗುವ ಆಕರ. ಹಾವನೂರರು ತಮಗಿದ್ದ ಗ್ರಂಥಾಲಯಶಾಸ್ತ್ರದ ಬಲದಿಂದ ಇಂತಹ ಹಲವಾರು ಸೂಚಿಗಳನ್ನು ಸಿದ್ಧಪಡಿಸಿದ್ದಾರೆ. ಮ.ವಿ. ನಾಯಕರ ಒಡಗೂಡಿ ಅವರು ಮುದ್ದಣ, ಅನಕೃ, ಶಿವರಾಮ ಕಾರಂತ, ರಂ.ಶ್ರೀ. ಮುಗಳಿ, ಮಧುರಚೆನ್ನ, ಗೋವಿಂದ ಪೈ ಮುಂತಾದ ಲೇಖಕರ ಸಮಗ್ರ ಲೇಖನ ಸೂಚಿಗಳನ್ನು ಸಿದ್ಧಪಡಿಸಿದ್ದಿದೆ. ಹಿಂದೆ ಪ್ರಸ್ತಾಪಿಸಿದ 'ಸಮಗ್ರ ಹರಿದಾಸ ವಾಙ್ಮಯಕೋಶ', ಕನಕದಾಸರ ಕೀರ್ತನೆಗಳಲ್ಲಿನ ಪದಸೂಚಿಯೂ ಈ ವರ್ಗಕ್ಕೇ ಸೇರಿದ್ದು.

ಲಂಡನ್ನಿನ ಬ್ರಿಟಿಷ್ ಲೈಬ್ರರಿಯಲ್ಲಿರುವ ಕನ್ನಡ ಪುಸ್ತಕಗಳ ವರ್ಗೀಕೃತ ಸೂಚಿಯ ಮೊದಲ ಭಾಗ ೧೯೧೦ರಷ್ಟು ಹಿಂದೆ ಪ್ರಕಟವಾಗಿತ್ತು. ಅದರ ಎರಡನೇ ಭಾಗವನ್ನು ಆಲ್ಬರ್ಟೀನ್ ಗಾರ್‌ರವರು 'Suplementary Catalogue of Kannada Books'

ಎಂಬ ಹೆಸರಿನಲ್ಲಿ ೧೯೮೫ರಲ್ಲಿ ಪ್ರಕಟಿಸಿದ್ದಾರೆ. ಇದರ ಸಿದ್ಧತೆಯಲ್ಲಿ ಹಾವನೂರರು ನೆರವಾದರು. ಈ ಬಗ್ಗೆ 'ಇಂಡಿಯಾ ಆಫೀಸ್ ಲೈಬ್ರರಿ ಅಂಡ್ ರೆಕಾರ್ಡ್ಸ್'ನ ನಿರ್ದೇಶಕರಾದ ಬಿ.ಸಿ. ಬ್ಲೂಮ್ ಫೀಲ್ಡರು–

``I must join my thanks to those of Dr Gaur for the help rendered by Professor S.K. Havanur in cataloguing the nineteenth century collections of some 1, 500 titles in the India Office Library and Records. He generously agreed at a late stage to Dr Gaur's taking over his material and including it in her catalogue and I can only hope that in his new post ad Head of the Department of Kannada Studies, Kalina Campus, University of Bombay, he will feel that we have done justice to his pioneering work.'' ಎಂದಿದ್ದಾರೆ.

❑

ಅಧ್ಯಾಯ – ೩

ಗ್ರಂಥಾಲಯ ವಿಜ್ಞಾನಿ

ಡಾ. ಹಾವನೂರರು ಒಬ್ಬ ಹುಟ್ಟು ಗ್ರಂಥಾಲಯ ಶಾಸ್ತ್ರಜ್ಞ. ಈ ಮೊದಲೇ ಗಮನಿಸಿದಂತೆ ವಿದ್ಯಾರ್ಥಿ ದಿನಗಳಿಂದ ಮೊದಲುಗೊಂಡು ಜೀವನದ ಅಂತ್ಯದವರೆಗೆ ಗ್ರಂಥಾಲಯಗಳೊಂದಿಗಿನ ಅವರ ಸಖ್ಯ ನಿರಂತರವಾಗಿತ್ತು. ೧೯೫೫ರಷ್ಟು ಹಿಂದೆಯೇ ಅವರು 'ಗ್ರಂಥಾಲಯ ತಂತ್ರ' ಎಂಬ ಕೃತಿ ಬರೆದಿದ್ದಿದೆ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳ ಗ್ರಂಥಾಲಯಗಳಲ್ಲಿ ಕೆಲ ವರ್ಷಗಳ ಕಾಲ ಗ್ರಂಥಾಲಯ ಸಹಾಯಕರಾಗಿ ಕೆಲಸ ಮಾಡಿದ ಹಾವನೂರರು ೧೯೬೧ರಲ್ಲಿ ಮುಂಬೈನ ಪ್ರತಿಷ್ಠಿತ ವೈಜ್ಞಾನಿಕ ಸಂಸ್ಥೆಯಾದ 'ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್'ನಲ್ಲಿ ಸಹಾಯಕ ಗ್ರಂಥಪಾಲಕರಾಗಿ ನೇಮಕಗೊಂಡರು. ಸ್ವತಃ ವಿಜ್ಞಾನದ ವಿದ್ಯಾರ್ಥಿಯಲ್ಲದಿದ್ದ ಅವರು TIFR ನಂತಹ ಗಣ್ಯ ವೈಜ್ಞಾನಿಕ ಸಂಸ್ಥೆಯ ಉದ್ಯೋಗಿಯಾದದ್ದು ಒಂದು ಸ್ವಾರಸ್ಯಕರ ಸಂಗತಿ. 'ತಮಗೆ ಹೇಗೂ ಈ ಉದ್ಯೋಗ ಸಿಕ್ಕುವುದಿಲ್ಲ. ಆದರೆ ಸಂದರ್ಶನಕ್ಕೆ ಹೋದರೆ ರೈಲ್ವೇ ಚಾರ್ಜ್ ಕೊಡುತ್ತಾರೆ. ಹೋಗಿ ಬರೋಣ' ಎಂದು ಮುಂಬಯಿಗೆ ಬಂದ ಅವರು ಹಿಂದಿನ ದಿನ ಸಂಜೆ TIFR ಗೆ ಹೋದರು. ಅಲ್ಲಿಯ ಗ್ರಂಥಾಲಯದಲ್ಲಿ ಧಾರವಾಡದ ಜೋಶಿ ಎಂಬುವರ ಪರಿಚಯವಾಯಿತು. ಕ್ಯಾಂಟೀನಲ್ಲಿ ಚಹಾ ಕುಡಿಯುತ್ತಿದ್ದಾಗ ಅವರು ತೀರಾ ಸಹಜವಾಗಿ 'ಸಂದರ್ಶನದಲ್ಲಿ ಎರಡೇ ಸಂಗತಿಗಳಿಗೆ ಗಮನ ಕೊಡುತ್ತಾರೆ. ಒಂದು ಈ ಹಿಂದೆ ನೀವೇನಾದರೂ ಉಪಯುಕ್ತವಾದ ಕೆಲಸಗಳನ್ನು ಮಾಡಿದ್ದೀರಾ ಎನ್ನುವುದು. ಮತ್ತೊಂದು ಮುಂದೆ ಈ ಲೈಬ್ರರಿಗೆ ನಿಮ್ಮಿಂದ ದೊರಕಬಹುದಾದ ಕೊಡುಗೆಗಳೇನು ಎಂಬುದು.' ಎಂದು ಹೇಳಿದರು. ಈ ಸೂಚನೆಯನ್ನು ಹಾವನೂರರು ಸರಿಯಾಗಿಯೇ ಬಳಸಿಕೊಂಡರು.

ನೇರ ಮತ್ತು ಪ್ರಾಮಾಣಿಕ ಉತ್ತರಗಳನ್ನು ನೀಡಿದ್ದರಿಂದ ಸಂಸ್ಥೆ ಅವರನ್ನು ತನ್ನಲ್ಲಿ ಬರಮಾಡಿಕೊಂಡಿತು.

ಟಿ.ಐ.ಎಫ್.ಆರ್.ನ ಗ್ರಂಥಾಲಯ ೨೧ ವರ್ಷಗಳ ಕಾಲ ಹಾವನೂರರನ್ನು ಸಾಕಿ ಸಲಹಿತು. ಪ್ರಯತ್ನಶೀಲತೆ, ಸಹೃದಯತೆ, ಸಹಾಯ ತತ್ಪರತೆ ಮತ್ತು ಅಚ್ಚುಕಟ್ಟಿನ ಜೊತೆಗೆ ಹೊಸತೇನನ್ನಾದರೂ ಅರಸುತ್ತಿರಬೇಕೆನ್ನುವ ಪ್ರವೃತ್ತಿಯನ್ನು ಅವರು ಇಲ್ಲಿ ರೂಢಿಸಿಕೊಂಡರು. TIFR ನ ಲೈಬ್ರರಿ ಒಂದು ವಿನೂತನ ರೀತಿಯ ಶಿಸ್ತಿನ ಲೈಬ್ರರಿ.

ಟಿ.ಐ.ಎಫ್.ಆರ್. ಗ್ರಂಥಾಲಯ

ಅಲ್ಲಿಯ ಓದುಗರೆಲ್ಲರೂ ವಿಜ್ಞಾನಿಗಳು. ಸದಾ ತಮ್ಮ ಸಂಶೋಧನೆ, ಅಧ್ಯಯನ, ಚಿಂತನೆಗಳಲ್ಲಿ ಮುಳುಗಿರುವಂತಹವರು. ಯಾವ ನಿಮಿಷಕ್ಕೆ ಅವರಿಗೆ ಯಾವ ಮಾಹಿತಿ ಅಗತ್ಯವಾಗುತ್ತದೆಂದು ಅವರಿಗೇ ಕೆಲವೊಮ್ಮೆ ಗೊತ್ತಿರುವುದಿಲ್ಲ. ಹಾಗಾಗಿ ಇಂತಹ ಸಂಸ್ಥೆಯ ಗ್ರಂಥಾಲಯ ವರ್ಷದ ೩೬೫ ದಿನವೂ ಬೆಳಗ್ಗೆ ೮ರಿಂದ ರಾತ್ರಿ ೧೧ರ ವರೆಗೆ ತೆರೆದೇ ಇರಬೇಕು. ಸ್ವತಃ ಎಂ.ಎ. ಮುಗಿಸಿ ಪಿಎಚ್.ಡಿ. ಸಂಶೋಧನೆಯಲ್ಲಿ ತೊಡಗಿದ್ದರಿಂದ ಹಾವನೂರರಿಗೆ ತಮ್ಮ ಗ್ರಂಥಾಲಯಕ್ಕೆ ಬರುವವರ ಅಗತ್ಯ ಏನೆಂಬುದು ಚೆನ್ನಾಗಿಯೇ ಅರಿವಾಗಿತ್ತು. ಹಾಗಾಗಿಯೇ ಅವರು ಹಲವಾರು ವಿಧಾನಗಳ ಮೂಲಕ ತಮ್ಮ ಓದುಗರಿಗೆ ಅಗತ್ಯವಾದ ಎಲ್ಲ ಸೇವೆಯನ್ನು ಒದಗಿಸುವುದರಲ್ಲಿ ಯಶಸ್ವಿಯಾದರು.

ಒಬ್ಬ ಯಶಸ್ವೀ ಗ್ರಂಥಪಾಲಕನ ಕೆಲಸವಿರುವುದು ಪುಸ್ತಕಗಳ ನಡುವೆಯೇ ಹೊರತೂ ಟೇಬಲ್‌ನ ಮುಂದಲ್ಲ. ಇದನ್ನು ಅವರು ಕಲಿತಿದ್ದು ತಮ್ಮ ವಿದ್ಯಾಗುರುಗಳೂ, ಮುಂಬೈ ವಿಶ್ವವಿದ್ಯಾಲಯದ ಗ್ರಂಥಪಾಲರೂ ಆಗಿದ್ದ ಡಾ. ಮಾರ್ಷಲ್ ಎಂಬುವರಿಂದ. ಒಂದು ದಿನ ಹಾವನೂರರು ಅವರನ್ನು ಕಾಣಲೆಂದು ಹೋದಾಗ, ಒಬ್ಬ ಓದುಗರು ಮಾರ್ಷಲ್‌ರಲ್ಲಿಗೆ ಒಂದು ಮಾಹಿತಿಯನ್ನು ಕೇಳಿದರು. ಅದನ್ನು ಒದಗಿಸಿಕೊಡಲು ಅವರು ಯಾರಾದರೊಬ್ಬ ಅಸಿಸ್ಟೆಂಟರನ್ನು ಕರೆದು ಹೇಳಬಹುದಿತ್ತು. ಆದರೆ ಮಾರ್ಷಲ್‌ರು ತಾವೇ ಎದ್ದು ಆ ಮಾಹಿತಿ ಇದ್ದ ಪುಸ್ತಕವನ್ನು ತಂದುಕೊಟ್ಟರು. ಈ ಬಗೆಯ ನೆರವೇ ಗ್ರಂಥಪಾಲವೃತ್ತಿಯ ಮುಖ್ಯೋದ್ದೇಶವೆಂಬುದನ್ನು ಹಾವನೂರರು ಅಂದು ಅರಿತರು. ಈ ಒಂದು ಸಣ್ಣ ಸಂಗತಿಯನ್ನು ಅವರು ಜೀವನದುದ್ದಕ್ಕೂ ಅಳವಡಿಸಿ ಕೊಂಡಿದ್ದರಿಂದಲೇ ಅವರ ಗ್ರಂಥಪಾಲನ ಸೇವೆ ಜನಕ್ಕೆ ಮೆಚ್ಚಿಕೆಯಾಯಿತು.

೧೯೬೧ರಿಂದ ಎಂಟು ವರ್ಷಗಳ ಕಾಲ ಹಾವನೂರರು ಸಹಾಯಕ ಗ್ರಂಥಪಾಲಕನ ಹುದ್ದೆಯಲ್ಲಿದ್ದರು. ಮುಖ್ಯಸ್ಥರಾಗಿದ್ದ ಡಾ. ವಜೀಫ್‌ದಾರ ಎನ್ನುವವರು ೧೯೬೯ರಲ್ಲಿ

ನಿಧನರಾಗಿದ್ದರಿಂದ ಅವರಿಗೆ ಮುಖ್ಯ ಗ್ರಂಥಪಾಲಕನ ಹುದ್ದೆಗೆ ಬಡ್ತಿ ದೊರೆಯಿತು. ಆ ನಂತರ ಅವರು ಗ್ರಂಥಾಲಯವನ್ನು ಮತ್ತಷ್ಟು ಓದುಗ ಸ್ನೇಹಿಯಾಗಿ ಮಾಡಲು ಪಣತೊಟ್ಟರು. 'ಗ್ರಂಥಾಲಯ ಸೇವೆ' ಎಂದರೆ 'ಗೃಹಿಣಿಯ ಸೇವೆ'ಗೆ ಸಮಾನ ಎನ್ನುವುದು ಅವರ ನಂಬಿಕೆ. ಹೇಗೆ ಒಬ್ಬ ಗೃಹಿಣಿ ಮನೆ ಮಂದಿಯ ಎಲ್ಲ ಚಿಕ್ಕ – ದೊಡ್ಡ ಅಗತ್ಯಗಳ ಬಗೆಗೂ ಗಮನ ನೀಡುತ್ತಾಳೆಯೋ ಹಾಗೆಯೇ ಗ್ರಂಥಪಾಲಕರು ಓದುಗರ ಅಗತ್ಯಗಳಿಗೆ ತಕ್ಕಂತೆ ಸೌಲಭ್ಯಗಳನ್ನು ಒದಗಿಸಬೇಕೆನ್ನುವುದು ಅವರ ನಿಲುವು.

ಸಂಶೋಧಕರಿಗೆ ಮಾಹಿತಿ ಅಗತ್ಯವೆನ್ನುವುದು ಎಷ್ಟು ಮುಖ್ಯವೋ ಸರಿಯಾದ ಸಮಯಕ್ಕೆ ಅದು ಲಭ್ಯವಾಗಬೇಕಾದ್ದೂ ಅಷ್ಟೇ ಮುಖ್ಯ. ಈ ಸಂಗತಿಯನ್ನು ಅವರಿಗೆ ತಿಳಿಸಿಕೊಟ್ಟು ಕಣ್ಣು ತೆರೆಸಿದವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಒಬ್ಬ ವಿಜ್ಞಾನಿ. ಆತ ಒಮ್ಮೆ TIFRಗೆ ಬಂದಿದ್ದಾಗ ಹಾವನೂರರು ಅವರೊಂದಿಗೆ ಪ್ರಾಸಂಗಿಕವಾಗಿ ಮಾತನಾಡುತ್ತ ತಾವು ಗ್ರಂಥಾಲಯದಲ್ಲಿ ತಂದಿರುವ ಕೆಲವು ಬದಲಾವಣೆಗಳನ್ನು ಕುರಿತು ಪ್ರಸ್ತಾಪಿಸಿದರು. ಆಗ ಆತ ``Look here, I am not interested in those things. When ever I go to the Library, I should get what I want and whithout delay'' ಎಂದರು. ಅಂದಿನಿಂದ ತಡವಿಲ್ಲದೆ ಮಾಹಿತಿಯನ್ನು ಓದುಗರಿಗೆ ಹೇಗೆ ನೀಡಬಹುದು ಎಂಬುದರ ಬಗೆಗೆ ಚಿಂತಿಸಿ ಕೆಲವು ಸುಧಾರಣಾ ಕ್ರಮಗಳನ್ನು ಕೈಗೊಂಡರು.

ಅದರಲ್ಲಿ ಮೊದಲನೆಯದೆಂದರೆ ವಿದೇಶೀ ಪತ್ರಿಕೆಗಳಲ್ಲಿನ ವೈಜ್ಞಾನಿಕ ಸಂಗತಿಗಳ ಟಿಪ್ಪಣಿಯ ಪ್ರಕಟಣೆ. ಉದಾಹರಣೆಗೆ ಲಂಡನ್ನಿನ ಟೈಮ್ಸ್ ಪತ್ರಿಕೆಯನ್ನು ಪ್ರತಿದಿನ ಗ್ರಂಥಾಲಯಕ್ಕೆ ಏರ್‌ಮೇಲ್‌ನಿಂದ ತರಿಸಲಾಗುತ್ತಿತ್ತು. ಏಕೆಂದರೆ ಅದರಲ್ಲಿ ಪ್ರತಿದಿನವೂ ಹೊಚ್ಚ ಹೊಸ ವಿಜ್ಞಾನ ಶೋಧದ ಬಗ್ಗೆ ಟಿಪ್ಪಣಿ ಪ್ರಕಟವಾಗುತ್ತಿತ್ತು. ಆದರೆ ೩೬ ಪುಟಗಳ, ತೆಳುಕಾಗದದ ಆ ಪತ್ರಿಕೆಯ ಯಾವ ಪುಟದಲ್ಲಿ ಆ ಟಿಪ್ಪಣಿ ಇದೆ ಎಂದು ಸಂಶೋಧಕರು ಹುಡುಕುವುದು ವೇಳೆ ಹಿಡಿಯುವ ಮತ್ತು ತುಸು ಶ್ರಮದ ಕೆಲಸ. ಇಷ್ಟಕ್ಕೂ ಅದನ್ನು ಕಂಡುಕೊಂಡ ಮೇಲೆ ಅವರಿಗೆ ಆ ಟಿಪ್ಪಣಿ ತಮ್ಮ ಸಂಶೋಧನೆಗೆ ಅನಗತ್ಯವೂ ಆಗಬಹುದು. ಅದಕ್ಕಾಗಿ ಹಾವನೂರರು ಒಂದು ಉಪಾಯ ಮಾಡಿದರು. ಪ್ರತಿದಿನ ಪತ್ರಿಕೆ ಬಂದ ಕೂಡಲೇ ಬೇರೊಂದು ಕಾಗದದ ಮೇಲೆ ಅದರಲ್ಲಿಯ ವಿಷಯ, ದಿನಾಂಕ ಮತ್ತು ಪುಟ ಸಂಖ್ಯೆ ಇಷ್ಟನ್ನೂ ಟೈಪ್ ಮಾಡಿ ನೋಟೀಸ್ ಬೋರ್ಡ್‌ನ ಮೇಲೆ ಹಾಕತೊಡಗಿದರು. ಇದರಿಂದಾಗಿ ಪ್ರತಿಯೊಬ್ಬ ಸಂಶೋಧಕನೂ ಎಲ್ಲ ಪುಟಗಳನ್ನೂ ತಿರುವುವ ಶ್ರಮ ತಪ್ಪಿತು. ಈ ಸೇವೆ ಓದುಗರಿಗೆ ತುಂಬಾ ಮೆಚ್ಚಿಗೆಯಾಯಿತು.

ಹಾವನೂರರು ಜಾರಿಗೆ ತಂದ ಮತ್ತೊಂದು ಸುಧಾರಣೆಯೆಂದರೆ 'ದಾಸ್ತಾನು ಪರಿಶೀಲನೆ (Stock verification)ಯಲ್ಲಿ ಮಾಡಿದ ಬದಲಾವಣೆ. ಎಲ್ಲ ಗ್ರಂಥಾಲಯಗಳೂ ಪ್ರತಿವರ್ಷ ಈ ಕೆಲಸಕ್ಕಾಗಿ ಕೆಲವು ವಾರಗಳ ಕಾಲ ಓದುಗರ ಪ್ರವೇಶವನ್ನು ನಿರ್ಬಂಧಿಸುತ್ತವೆ. ಆದರೆ TIFR ನಂತಹ ಸಂಶೋಧನ ಸಂಸ್ಥೆಗಳಲ್ಲಿ ಹೀಗೆ ಬಾಗಿಲು ಹಾಕಿಬಿಟ್ಟರೆ ಸಂಶೋಧಕರ ಪಾಡೇನು? ಹಾಗೆಂದು ಪರಿಶೀಲನೆಯ ಕೆಲಸವನ್ನು ನಿಲ್ಲಿಸುವಂತೆಯೂ ಇಲ್ಲ. ಈ ಸಮಸ್ಯೆಯ ಎಲ್ಲ ಮುಖಗಳನ್ನು ಹಾವನೂರರು

೧೯೮೧ರಲ್ಲಿ ಹೈದರಾಬಾದಿನಲ್ಲಿ ನಡೆದ ೨೭ನೇ ಅಖಿಲ ಭಾರತ ಗ್ರಂಥಪಾಲಕ ಸಮ್ಮೇಳನದಲ್ಲಿ ಮಂಡಿಸಿದ `Stock verification - A death Anniversary' ಎಂಬ ಸಂಪ್ರಬಂಧದಲ್ಲಿ ಚರ್ಚಿಸಿದ್ದಾರೆ. 'ದಾಸ್ತಾನು ಪರಿಶೀಲನೆ' ಎಂಬ 'ವಾರ್ಷಿಕ ಶ್ರಾದ್ಧ'ದಿಂದ ಓದುಗರಿಗೆ ಆಗುವ ಸಮಸ್ಯೆಯನ್ನು ಕಡಿಮೆ ಮಾಡಲು TIFR ನಲ್ಲಿ ತಾವು ಕೈಗೊಂಡ ಹಲವು ಪ್ರಯೋಗಗಳನ್ನು ಮೊದಲಿಗೆ ವಿವರಿಸಿ ಕಡೆಗೆ ೫ ಇಂಚು ಉದ್ದ x ೩ ಇಂಚು ಅಗಲದ ವಿಶಿಷ್ಟ ನಮೂನೆಯ ಕಾರ್ಡ್‌ಗಳನ್ನು ಬಳಸುವುದರಿಂದ ಅತ್ಯಂತ ಕಡಿಮೆ ಸಮಯದಲ್ಲಿ ದಾಸ್ತಾನು ಪರಿಶೀಲನೆಯನ್ನು ಮುಗಿಸುವುದು ಸಾಧ್ಯವೆಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.

ಹಾವನೂರರ ಕಾಲದಲ್ಲಿ ಯಶಸ್ವಿಯಾದ ಮತ್ತೊಂದು ಯೋಜನೆಯೆಂದರೆ ವಿವಿಧ ಗ್ರಂಥಾಲಯಗಳ ನಡುವಣ ಆಕರಗಳ ಕೊಡುಕೊಳ್ಳುವ ವ್ಯವಸ್ಥೆ. ಎಂತಹ ಅತ್ಯಾಧುನಿಕವಾದ ಗ್ರಂಥಾಲಯವಾದರೂ ಸಂಪೂರ್ಣವಾಗಿ ಪರಿಪೂರ್ಣವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಆದರೆ ಪರಸ್ಪರ ಸಂಪರ್ಕ ಮತ್ತು ಸಮನ್ವಯದ ಮೂಲಕ ಗ್ರಂಥಾಲಯಗಳು ತಮ್ಮಲ್ಲಿ ಇಲ್ಲದ ಗ್ರಂಥಗಳನ್ನು ಬೇರೆಡೆಯಿಂದ ತರಿಸಿ ತನ್ನ ಓದುಗರಿಗೆ ಪೂರೈಸಬಹುದು. ಇದಕ್ಕಾಗಿ ಅವರು Bombay Science Librarian's Association (BOSLA) ಎಂಬ ಸಂಘವನ್ನು ೧೯೭೫ರಲ್ಲಿ ಹುಟ್ಟು ಹಾಕಿದರು.* ಇದರಿಂದಾಗಿ ಓದುಗ – ಗ್ರಂಥಾಲಯ ಎರಡಕ್ಕೂ ಪ್ರಯೋಜನವಾಯಿತು. ಹೇಗೆಂದರೆ, ಉದಾಹರಣೆಗೆ ಮುಂಬೈನ ಎರಡು ಗ್ರಂಥಾಲಯಗಳು ವಿದೇಶದಿಂದ ಒಂದು ವಿಜ್ಞಾನ ಪತ್ರಿಕೆಯ ತಲಾ ಒಂದೊಂದು ಪ್ರತಿಗಳನ್ನು ಖರೀದಿಸಬೇಕು ಎಂದುಕೊಳ್ಳೋಣ. ವಾಯುಮಾರ್ಗದಲ್ಲಿ ತರಿಸಿದರೆ ಪತ್ರಿಕೆ ಬೇಗ ಬರುತ್ತದೆ, ಆದರೆ ಖರ್ಚು ಹೆಚ್ಚು. ಹಾಗೆಂದು ಹಡಗಿನಲ್ಲಿ

---

* ಕಳೆದ ಶತಮಾನದ ೭೦ರ ದಶಕದ ಮಧ್ಯಭಾಗದಲ್ಲಿ ತಮಗಿರುವ ಸೀಮಿತ ಆರ್ಥಿಕ ಸಂಪನ್ಮೂಲದಿಂದ ವಿಜ್ಞಾನಿಗಳಿಗೆ ಅಗತ್ಯವಾಗುವಷ್ಟು ಪ್ರಮಾಣದಲ್ಲಿ ಆಕರಗಳನ್ನು ಒದಗಿಸುವುದು ಕಷ್ಟ ಎಂಬ ಕಾರಣದಿಂದ ಈ ಸಂಘ ಹುಟ್ಟಿತು. ಭಾಭಾ ಪರಮಾಣು ಸಂಶೋಧನ ಕೇಂದ್ರ, ಮುಂಬೈ ವಿಶ್ವವಿದ್ಯಾಲಯದ ರಾಸಾಯನಿಕ ತಂತ್ರಜ್ಞಾನ ವಿಭಾಗ, ಮುಂಬೈ ಐಐಟಿ ಮತ್ತು ಟಿ.ಎಫ್.ಐ.ಆರ್. ಇದರ ಮೊತ್ತ ಮೊದಲ ಸದಸ್ಯ ಸಂಸ್ಥೆಗಳು. ಡಾ. ಶ್ರೀನಿವಾಸ ಹಾವನೂರ (ಕಾರ್ಯದರ್ಶಿ) ಡಾ. ವಿ.ಎ. ಕಾಮತ್ ಮತ್ತು ಶ್ರೀ ಎಂ.ಎನ್. ಮಿಶ್ರಾ ಇದರ ಸ್ಥಾಪಕರು. ಈಗ ಸುಮಾರು ೪೦೦ ಮಂದಿ ಸದಸ್ಯರಿದ್ದಾರೆ. ಕಾರ್ಯಾಗಾರಗಳು, ವಿಚಾರ ಸಂಕಿರಣಗಳು ಮತ್ತು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ಈ ಸಂಸ್ಥೆಯು ಗ್ರಂಥಪಾಲಕರಿಗೆ ವೃತ್ತಿಪರ ತರಬೇತಿಯನ್ನು ನೀಡುತ್ತಿದೆ. BOSLA infoline ಎಂಬ ಪ್ರಕಟಣೆಯನ್ನು ಹೊರತರಲಾಗುತ್ತಿದೆ. ಇದೇ ಮಾದರಿಯಲ್ಲಿ ನಂತರ ಬೆಂಗಳೂರಿನಲ್ಲಿ FORSA, ಕಲ್ಕತ್ತಾದಲ್ಲಿ Calibnet, ಮದ್ರಾಸಿನಲ್ಲಿ MALIBNET ಮುಂತಾದ ಗ್ರಂಥಪಾಲಕರ ಸಂಘಗಳು ಹುಟ್ಟಿಕೊಂಡಿವೆ.

ತರಿಸಿದರೆ ತಡವಾಗುತ್ತದೆ. ಆದರೆ ಎರಡೂ ಗ್ರಂಥಾಲಯಗಳ ಗ್ರಂಥಪಾಲಕರು ಕೂತು ಚರ್ಚಿಸಿ ಯಾವ ಪತ್ರಿಕೆಗಳನ್ನು ಯಾರು ವಾಯುಮಾರ್ಗದಲ್ಲಿ ಮತ್ತು ಮತ್ತಾವುದನ್ನು ಸಮುದ್ರ ಮಾರ್ಗದಲ್ಲಿ ತಲುಪಬಹುದೆಂದು ತೀರ್ಮಾನಿಸಿದಲ್ಲಿ ಹಣ ಮತ್ತು ಸಮಯ ಎರಡೂ ಉಳಿತಾಯ ಸಾಧ್ಯ. ವಾಯುಮಾರ್ಗದಲ್ಲಿ ಪತ್ರಿಕೆ ಬಂದ ಕೂಡಲೇ ಅದರ ಪರಿವಿಡಿಯನ್ನು ಜೆರಾಕ್ಸ್‌ಮಾಡಿ ಎರಡನೇ ಲೈಬ್ರರಿಗೆ ಕಳುಹಿಸಬೇಕು. ಅಲ್ಲಿ ಯಾರಾದರೂ ವಿಜ್ಞಾನಿಗೆ ನಿರ್ದಿಷ್ಟವಾದ ಯಾವುದಾದರೂ ಲೇಖನ ಬೇಕಿದ್ದಲ್ಲಿ ಅದನ್ನು ಅಲ್ಲಿಂದಲೇ ತರಿಸಿಕೊಡಬಹುದು. ಮೂರು ತಿಂಗಳ ನಂತರ ಸಮುದ್ರದ ಮಾರ್ಗದಲ್ಲಿ ಈ ಸಂಸ್ಥೆಗೆ ಪತ್ರಿಕೆ ತಲುಪಿದರೂ ಓದುಗರಿಗೆ ಮಾಹಿತಿ ತಲುಪುವುದು ಇದರಿಂದ ತಡವಾಗುವುದಿಲ್ಲ. ಈ ಯೋಜನೆ ಎಷ್ಟು ಪ್ರಸಿದ್ಧವಾಯಿತೆಂದರೆ ಇತರ ನಗರಗಳಲ್ಲಿಯೂ BOSLA ದಂತಹ ಸಂಘಗಳು ಕಟ್ಟಿಕೊಂಡವು.

ಓದುಗರ ಅನುಕೂಲಕ್ಕಾಗಿ ಹಾವನೂರರು ಪರಿಚಯಿಸಿದ ಮತ್ತೊಂದು ವ್ಯವಸ್ಥೆ ಗ್ರಂಥಾಲಯಕ್ಕೆಂದೇ ಸ್ಕೂಟರ್ ಮತ್ತು ಅದಕ್ಕೊಬ್ಬ ಚಾಲಕನ ನೇಮಕ. ಮುಂಬೈಯಂತಹ ಮಹಾನಗರದಲ್ಲಿ ದೂರದಲ್ಲೆಲ್ಲೋ ಇರುವ ಮತ್ತೊಂದು ಲೈಬ್ರರಿಯಿಂದ ಪುಸ್ತಕಗಳನ್ನು ತಡವಿಲ್ಲದೆ ತರಲು ಇದರ ಅಗತ್ಯವಿತ್ತು. ಮತ್ತೊಂದು ಸಮಸ್ಯೆಯೆಂದರೆ ಸಂಶೋಧನ ಪತ್ರಿಕೆಗಳ ಸಂಪುಟಗಳನ್ನು ಬೈಂಡಿಂಗ್‌ಗೆಂದು ಬೈಂಡರ್‌ಗಳಿಗೆ ನೀಡುವುದು ಪದ್ಧತಿ. ಇವು ತಿಂಗಳುಗಟ್ಟಲೆ ಅವರಲ್ಲಿ ಉಳಿದಿರುತ್ತವೆ. ಆದರೆ ಆ ರಾಶಿಯಲ್ಲಿಯ ಯಾವುದಾದರೂ ಒಂದು ಸಂಚಿಕೆಯಲ್ಲಿನ ಒಂದು ನಿರ್ದಿಷ್ಟ ಸಂಪ್ರಬಂಧ ಯಾರಾದರೊಬ್ಬ

ವಿಜ್ಞಾನಿಗಳೊಂದಿಗೆ ಟಿ.ಐ.ಎಫ್.ಆರ್. ನಲ್ಲಿ

ಸಂಶೋಧಕರಿಗೆ ಬೇಕಾದರೆ ಏನು ಮಾಡುವುದು? 'ಬೈಂಡಿಂಗ್‌ಗೆ ಹೋಗಿದೆ' ಎಂದು ಮಾಮೂಲಿಯ ಉತ್ತರವನ್ನೇನೋ ಕೊಡಬಹುದು. ಆದರೆ ಸಂಶೋಧಕರಿಗೆ ಇದರಿಂದ ಆಗುವ ತೊಂದರೆ ಎಷ್ಟು? ಅದನ್ನು ತಪ್ಪಿಸುವ ಸಲುವಾಗಿ ವಾಹನ ಮತ್ತು ಚಾಲಕನ ಅಗತ್ಯವಿದೆ ಎಂದು ಪಟ್ಟು ಹಿಡಿದು ಹಾವನರರು ಅದನ್ನು ಜಾರಿಗೆ ತಂದರು. ಮೊದಲಿಗೆ ಇದಕ್ಕೆ ಆಡಳಿತ ವರ್ಗದಿಂದ ತುಸು ವಿರೋಧ ಬಂದಿತಾದರೂ ವಿಜ್ಞಾನಿಗಳಿಗೆ ಬಹಳ ಉಪಯುಕ್ತವಾಗಿದ್ದ ವ್ಯವಸ್ಥೆ ಇದಾಗಿದ್ದರಿಂದ ನಂತರವೂ ಮುಂದುವರೆಯಿತು.

ಹಾವನೂರರು TIFR ನ ಗ್ರಂಥಾಲಯದಲ್ಲಿ ತಂದ ಈ ಸುಧಾರಣೆಗಳಿಂದಾಗಿ ಹಲವು ಮಂದಿ ವಿಜ್ಞಾನಿಗಳು ಮತ್ತು ಸಂಶೋಧಕರಿಗೆ ಬಹಳ ಅನುಕೂಲವಾಯಿತು. ಅವರಲ್ಲಿ ಕೆಲವರು ತಮ್ಮ ಕೃತಿಗಳಲ್ಲಿ ಅದನ್ನು ಸ್ಮರಿಸಿಯೂ ಇದ್ದಾರೆ. ಉದಾಹರಣೆಗೆ ಅಂತರರಾಷ್ಟ್ರೀಯ ಖ್ಯಾತಿಯ ವಿಜ್ಞಾನಿಗಳಾದ ರಂಗಸ್ವಾಮಿ ನರಸಿಂಹನ್ ತಮ್ಮ ಒಂದು ಕೃತಿಯಲ್ಲಿ ಹಾವನೂರರ ಉಪಕಾರವನ್ನು ``I could not have written this book without the willing assistance of the library staff of the institute to locate and borrow books, Journals and papers from other places. I thank Dr. Havanur and his dedicated staff for their examplary assistance." ಎಂದು ಸ್ಮರಿಸಿದ್ದಾರೆ.

ನಿವೃತ್ತಿಯ ನಂತರವೂ ಹಾವನೂರರು ಕೆಲವು ಪ್ರಸಿದ್ಧ ಗ್ರಂಥಾಲಯಗಳ ಗೌರವ ನಿರ್ದೇಶಕರಾಗಿ ಅವುಗಳನ್ನು ಸುಸಜ್ಜಿತಗೊಳಿಸಿದರು. ಅವುಗಳಲ್ಲಿ ಮೊದಲನೆಯದು ಬೆಂಗಳೂರಿನ ಅತ್ಯಂತ ಪ್ರಾಚೀನವಾದ ಮತ್ತು ಬಹು ಅಪೂರ್ವವಾದ ಗ್ರಂಥಗಳನ್ನು ಉಳ್ಳ ಮಿಥಿಕ್ ಸೊಸೈಟಿಯ ಗ್ರಂಥಾಲಯ. ಈ ಗ್ರಂಥಾಲಯದಲ್ಲಿ ೧೯೯೬ರಿಂದ ೨೦೦೨ರ ವರೆಗೆ ಆರು ವರ್ಷಗಳ ಕಾಲ ಅವರು ಗೌರವ ನಿರ್ದೇಶಕರಾಗಿ ಸೇವೆ ಸಲ್ಲಿಸಿ ಅದನ್ನು ಸುಸಜ್ಜಿತಗೊಳಿಸಿದರು. ಅಲ್ಲಿ ಅವರು ಪರಿಚಯಿಸಿದ ಎರಡು ಅಂಶಗಳೆಂದರೆ ಸ್ಥಳೀಯ ಚರಿತ್ರೆ (Local History)ಗೆ ಸಂಬಂಧಿಸಿದ ಪ್ರತ್ಯೇಕವಾದ ಸಂಗ್ರಹ. ಮತ್ತೊಂದು ಹೊಸ ಪುಸ್ತಕಗಳ ಬಗ್ಗೆ ಓದುಗರಿಂದ ಕೋರಿಕೆಗೆ ಅವಕಾಶ. ಇತಿಹಾಸ, ಕಲೆ, ಸಂಸ್ಕೃತಿ ಮುಂತಾದ ಕ್ಷೇತ್ರಗಳಿಗೆ ಸಂಬಂಧಿಸಿದ ಹೊಸ ಪುಸ್ತಕಗಳನ್ನು ಗ್ರಂಥಾಲಯಕ್ಕೆ ಖರೀದಿಸುವ ಸಲುವಾಗಿ ಓದುಗರು ತಮ್ಮ ಸಲಹೆ ಸೂಚನೆಗಳನ್ನು ಒಂದು ರಿಜಿಸ್ಟರಿನಲ್ಲಿ ನಮೂದಿಸುವ ವ್ಯವಸ್ಥೆಯನ್ನು ಅವರು ಜಾರಿಗೆ ತಂದರು. ಇದರಿಂದಾಗಿ ಗ್ರಂಥಾಲಯದ ಸಂಗ್ರಹ ಮತ್ತಷ್ಟು ಮೌಲಿಕವಾಯಿತು. ತಮ್ಮ ಸ್ವಂತ ಸಂಗ್ರಹದ ಸುಮಾರು ೫೦೦ ಕೃತಿಗಳನ್ನು ಅವರು ಇಲ್ಲಿಗೆ ಕೊಡುಗೆಯಾಗಿ ನೀಡಿದ್ದಾರೆ.

'ಉಲ್ಲೇಖಾರ್ಹವಾದ ಮತ್ತೊಂದು ಸಂಸ್ಥೆಯೆಂದರೆ ಮಂಗಳೂರಿನ ಕರ್ನಾಟಕ ಥಿಯೋಜಿಕಲ್ ಕಾಲೇಜಿನ (ಕೆ.ಟಿ.ಸಿ) ಗ್ರಂಥಾಲಯ. ಇದು ಬಾಸೆಲ್ ಮಿಷನ್ನಿನ ಒಂದು ಅಂಗಸಂಸ್ಥೆ. ಹರ್ಮನ್ ಮೊಗ್ಲಿಂಗ್, ಕಿಟೆಲ್, ವುರ್ತ್, ಜೀಗ್ಲರ್ ಮುಂತಾದ ಮಿಷನರಿಗಳ ಸಂಪೋಷಣೆಯನ್ನು ಪಡೆದ ಸಂಸ್ಥೆ ಇದು. ಕೆ.ಟಿ.ಸಿ.ಗೂ ಹಾವನೂರರಿಗೂ ಎಲ್ಲಿಲ್ಲದ

ನಂಟು. 'ಹೊಸಗನ್ನಡದ ಅರುಣೋದಯ'ದ ರಚನೆಯ ಕಾಲದಿಂದಲೂ ಅವರು ಇಲ್ಲಿಗೆ ಹೊಕ್ಕು ಬಳಸುತ್ತಿದ್ದುದುಂಟು.

ವಿಶ್ವವಿದ್ಯಾನಿಲಯದಲ್ಲಿ ಅವರು ಕನ್ನಡ ಪ್ರಾಧ್ಯಾಪಕರಾಗಿದ್ದ ಕಾಲಾವಧಿಯಲ್ಲಿ ಅಲ್ಲಿನ ಆಕರ ಸಾಮಗ್ರಿಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಒಂದು ಅರ್ಥದಲ್ಲಿ ಪತ್ರಾಗಾರದ ಅಪೂರ್ವ ಸಾಮಗ್ರಿಗಳನ್ನು ಸಾರ್ಥಕಪಡಿಸಿದರು. ಮಿಷನರಿಗಳ ದಿನಚರಿ, ಪತ್ರ ವ್ಯವಹಾರ, ಕ್ರೈಸ್ತಸಭಾಕ್ಕೆ ಸಂಬಂಧಿಸಿದ ದಾಖಲೆಗಳು, ಜನಸಾಮಾನ್ಯರು 'ಸಭಾ'ಕ್ಕೆ ತೋರುತ್ತಿದ್ದ ಪ್ರತಿಕ್ರಿಯೆಗಳು, ಆ ಕಾಲದ ಮಿಷನರಿಗಳು ರಚಿಸಿದ ಪಠ್ಯ ಪುಸ್ತಕಗಳು, ಕ್ರೈಸ್ತ ಸಂಗೀತ ರಚನೆಗಳು ಇವುಗಳನ್ನು ಕುರಿತು ಹಾವನೂರರು ಹೊಸ ಅನ್ವೇಷಣೆ ನಡೆಸಿದರು. ಇದರಿಂದ ಹತ್ತೊಂಬತ್ತನೆಯ ಶತಮಾನದ ಕನ್ನಡ, ತುಳು ಸಾಹಿತ್ಯ ಹಾಗೂ ಸಾಮಾಜಿಕ ಚರಿತ್ರೆಗೆ ಅನೇಕ ಹೊಸ ಸೇರ್ಪಡೆಗಳನ್ನು ಮಾಡುವುದರಲ್ಲಿ ಯಶಸ್ವಿಯಾದರು.

೨೦೦೬ರಿಂದ ೨೦೦೮ರ ವರೆಗೆ ಮೂರು ವರ್ಷಗಳ ಕಾಲ ಹಾವನೂರರು ಮಂಗಳೂರಿನ ಕೆ.ಟಿ.ಸಿ. ಸಂಶೋಧನಾ ಕೇಂದ್ರಕ್ಕೆ ಗೌರವ ಸಂಶೋಧಕರಾಗಿ ಹೋದರು. ಬಾಸೆಲ್ ಮಿಷನ್ ಪ್ರೆಸ್‌ನಲ್ಲಿ ಮುದ್ರಣಗೊಂಡ (೧೯ನೆಯ ಶತಮಾನ) ಹಾಗೂ ಆ ಸಂಸ್ಥೆ ಪ್ರಕಾಶಿಸಿದ ಎಲ್ಲಾ ಪುಸ್ತಕಗಳು ಅಲ್ಲಿಯ ಪತ್ರಾಗಾರದಲ್ಲಿರಲಿಲ್ಲ. ಅಲ್ಲಿ ಲಭ್ಯವಿರದ ಅನೇಕ ಅಪೂರ್ವ ಗ್ರಂಥಗಳು ಬಾಸೆಲ್‌ನಲ್ಲಿದ್ದವು. ಅವುಗಳೆಲ್ಲವೂ ಸಿಗುವಂತೆ ಮಾಡುವ ಸಲುವಾಗಿ 'ಬಾಸೆಲ್ ಮಿಷನ್ ಹೆರಿಟೇಜ್' ಯೋಜನೆಯಡಿ ಅಲ್ಲಿನ ಸಂಗ್ರಹದಲ್ಲಿದ್ದ ತೀರಾ ಹಳೆಯ ಹಾಗೂ ಅಮೂಲ್ಯ ಗ್ರಂಥಗಳನ್ನು ಮೈಕ್ರೋಫಿಲ್ಮ್ ರೂಪದಲ್ಲಿ ಜೋಪಾನ ಮಾಡುವ ಯೋಜನೆಯೊಂದನ್ನು ಕೆ.ಟಿ.ಸಿ. ಕೈಗೆತ್ತಿಕೊಂಡಾಗ ಕನ್ನಡ, ತುಳು, ಮಲಯಾಳಂ ಪ್ರಕಟಣೆಗಳಲ್ಲಿ ಹಳೆಯ ಹಾಗೂ ಅಮೂಲ್ಯನಿಸಿದವುಗಳಲ್ಲಿ ಸುಮಾರು ಮೂರು ಸಾವಿರ ಪುಸ್ತಕಗಳ ೧೬೯ ಮೈಕ್ರೋ ಫಿಲ್ಮ್‌ಗಳು ಕೆ.ಟಿ.ಸಿ.ಗೆ ಬಂದುವು. ಬಾಸೆಲ್‌ನಿಂದ ಅಪಾರ ಸಂಖ್ಯೆಯ ಮಹತ್ವದ ಗ್ರಂಥಗಳು ಬರುವಂತೆ ಮಾಡುವಲ್ಲಿ ಹಾವನೂರರ ನೆರವು ಸ್ಮರಣೀಯ. ಬಂದ ಮೈಕ್ರೋಫಿಲ್ಮ್‌ಗಳನ್ನು ಓದುವ ಸಲುವಾಗಿ 'ಮೈಕ್ರೋಫಿಲ್ಮ್ ರೀಡರ್'ನಂತಹ ಉಪಕರಣವನ್ನು ಪುನರ್‌ರೂಪಿಸುವಲ್ಲಿ ಅವರು ಸಹಕಾರಿಯಾದರು. ಇಲ್ಲಿಗೆ ಬಂದ ಮೈಕ್ರೋಫಿಲ್ಮ್‌ಗಳಲ್ಲಿ ಒಂದೊಂದು ಪುಸ್ತಕದ ಬೇರೆ ಬೇರೆ ಆವೃತ್ತಿಗಳಿದ್ದವು. ಬಾಸೆಲ್‌ನಿಂದ ಬಂದ ಹಾಗೂ ಕೆ.ಟಿ.ಸಿ. ಪತ್ರಾಗಾರದಲ್ಲಿದ್ದ ಎಲ್ಲಾ ಕನ್ನಡ, ತುಳು ಭಾಷೆಯ ೧೯ ಮತ್ತು ೨೦ನೆಯ ಶತಮಾನದ ಮೊದಲ ಅರ್ಧದ ಎಲ್ಲಾ ಬಾಸೆಲ್ ಮಿಷನ್ ಪ್ರಕಟಣೆಗಳನ್ನು ಗ್ರಂಥಾಲಯ ವಿಜ್ಞಾನದ ನಿಯಮಾನುಸಾರ ವರ್ಗೀಕರಿಸಿ ಒಂದು ಕ್ಯಾಟಲಾಗನ್ನು ಸಿದ್ಧಪಡಿಸಿಕೊಟ್ಟರು. ಈ ಮಾಹಿತಿ ಮುಂದಿನ ಸಂಶೋಧಕರಿಗೆ ಅಪೂರ್ವ ಸಂಪತ್ತು.

ಹಳೆಯ ಕಾಲದ ಈ ಗ್ರಂಥಾಲಯವನ್ನು ಆಧುನಿಕ ಗ್ರಂಥಾಲಯ ಶಾಸ್ತ್ರದ ವರ್ಗೀಕರಣ ವಿಧಾನದ ಮೂಲಕ ಮರು ಜೋಡಿಸಿದ್ದು ಅವರ ಹೆಗ್ಗಳಿಕೆ.

ಕೆ.ಟಿ.ಸಿ.ಯ ವಿದ್ಯಾರ್ಥಿಗಳಲ್ಲಿ ಕನ್ನಡದಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಬಹುಮಾನ ನೀಡುವುದಕ್ಕಾಗಿ ಶಾಶ್ವತ ನಿಧಿ ಸ್ಥಾಪನೆಗೆ ಅವರು ನೆರವಾದರು.

ಹಾವನೂರರು ತಮ್ಮ ಜೀವಿತಾವಧಿಯಲ್ಲಿ ಸಂಗ್ರಹಿಸಿದ್ದ ಗ್ರಂಥಗಳಲ್ಲಿ ಸುಮಾರು ೧೫೦೦ ಅಮೂಲ್ಯವಾದ ಸಂಶೋಧನಾ ಗ್ರಂಥಗಳನ್ನು ಕೆ.ಟಿ.ಸಿ.ಯ ಗ್ರಂಥಾಲಯಕ್ಕೆ ದಾನವಾಗಿ ನೀಡಿದರು. ಅಷ್ಟೇ ಅಲ್ಲ, ಅವುಗಳನ್ನು ವರ್ಗೀಕರಿಸಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಜೋಡಿಸಿ ಇಟ್ಟರು.

ಸುಮಾರು ೧೫೦೦ ಪುಸ್ತಕ – ಪತ್ರಿಕೆಗಳಿರುವ ಈ ಗ್ರಂಥ ಸಂಪದದಲ್ಲಿ ಹಾವನೂರರ ಮುಖ್ಯ ವ್ಯಾಸಂಗ ವಿಷಯಗಳಾದ ಕನ್ನಡ ಸಾಹಿತ್ಯ ಮತ್ತು ಕರ್ನಾಟಕ ಇತಿಹಾಸಕ್ಕೆ ಪ್ರಾಧಾನ್ಯವಿದೆ. ಸಾಹಿತ್ಯ ಪ್ರಕಾರದಲ್ಲಿಯ ಹಳೆಗನ್ನಡ ಕಾವ್ಯಗಳು ಮತ್ತು ಹೊಸಗನ್ನಡ ಸಾಹಿತ್ಯದ ವಿಮರ್ಶನ ಗ್ರಂಥಗಳು ಸಾಹಿತ್ಯಾಭಾಸಿಗಳಿಗೆ ವಿಶೇಷ ಪ್ರಯೋಜನಕಾರಿಯಾಗಿವೆ. ಇವುಗಳಿಗಿಂತ ಹೆಚ್ಚು ಮಹತ್ವದವುಗಳೆಂದರೆ, ಸಾಹಿತ್ಯ ಸಮ್ಮೇಳನಗಳ ಮತ್ತು ಉತ್ಸವ ಕಾಲದ "ಸ್ಮರಣ ಸಂಚಿಕೆ"ಗಳನ್ನು ಗ್ರಂಥಾಲಯದಲ್ಲಿ ಲಭ್ಯವಾಗುವಂತೆ ಮಾಡಿದ್ದಾರೆ.

ಅವರು ನೀಡಿದ ಗ್ರಂಥ ಸಮುಚ್ಚಯದಲ್ಲಿ ಹಿರಿದು ಲೇಖಕರ ಸಮಗ್ರ ಸಂಪುಟಗಳಿರುವುದು ಇನ್ನೊಂದು ವಿಶೇಷ ಸಂಗತಿಯಾಗಿದೆ. ಕೈಲಾಸಂ, ಡಿ.ವಿ.ಜಿ, ಮುಳಿಯ ತಿಮ್ಮಪ್ಪಯ್ಯ, ಎಂ.ಎನ್. ಕಾಮತ್, ಗೋವಿಂದ ಪೈ, ಗೌರೀಶ ಕೈಕಿಣಿ ಮತ್ತು ಪಾವೆಂ ಆಚಾರ್ಯ ಇವರುಗಳ ಹೆಚ್ಚಿನ ಬರಹಗಳಲ್ಲದೆ ವಿಮರ್ಶಾ ಗ್ರಂಥಗಳೂ ಇವೆ. ಎದ್ದು ಕಾಣುವ ದೊಡ್ಡ ಸಂಗ್ರಹ ಶಿವರಾಮ ಕಾರಂತರ ಕೃತಿಗಳದ್ದು. ಈಚಿನವರಾದ ಎಂ.ಎಂ. ಕಲಬುರ್ಗಿಯವರ ಬಹ್ವಂಶದ ಬರಹಗಳಿಗೂ ಇಲ್ಲಿ ಇಂಬು ದೊರೆತಿದೆ. ರವೀಂದ್ರನಾಥ ಠಾಕೂರರಿಗೆ ನೊಬೆಲ್ ಬಹುಮನ ದೊರೆತಾಗ ಅವರ ಕೃತಿಗಳನ್ನು ಜರ್ಮನ್ ಭಾಷೆಗೆ ಅನುವಾದಿಸಲಾಯಿತು. ಅದೂ ಪ್ರಥಮ ಮಹಾಯುದ್ಧ ಕಾಲದಲ್ಲಿ! ಅವು ಕೂಡಾ ಹಾವನೂರರ ಸಂಗ್ರಹದಲ್ಲಿವೆ. ಪ್ರಸಿದ್ಧ ಲೇಖಕರ ಸನ್ಮಾನ ಇಲ್ಲವೆ ಸಂಸ್ಮರಣ ನಿಮಿತ್ತದಿಂದ ಸಂಭಾವನಾ ಗ್ರಂಥಗಳು ಹೊರಡುತ್ತವಷ್ಟೇ, ಅಂತಹ ಅನೇಕ ಸಂಪುಟಗಳೂ ಇಲ್ಲಿ ಸೇರ್ಪಡೆಯಾಗಿವೆ. ಇನ್ನೊಂದು ಸಮೃದ್ಧ ಸಂಗ್ರಹ ಇತಿಹಾಸ ವಿಷಯದ್ದು. ಅದರಲ್ಲಿಯೂ ಕರ್ನಾಟಕ ಇತಿಹಾಸದ ವಿವಿಧ ಅಂಶಗಳ ಅಭ್ಯಾಸಿಗಳಿಗೆ ಇಲ್ಲಿ ವಿಪುಲ ಸಾಮಗ್ರಿ ಲಭ್ಯವಿದೆ. ಜೊತೆಗೆ ತಾವು ಸಂಗ್ರಹಿಸಿದ್ದ ೨೫ ಮಾಹಿತಿ ಫೈಲುಗಳನ್ನು ದಾನವಾಗಿ ನೀಡಿದರು. ಇವುಗಳಲ್ಲಿ ಹಳೆಯ ಕಾಗದ ಪತ್ರಗಳು, ಪ್ರೆಸ್ ಕಟಿಂಗ್ಸ್, ಕರ್ನಾಟಕದ ಬೇರೆ ಬೇರೆ ಪ್ರದೇಶಗಳ ಬಗ್ಗೆ ಐತಿಹಾಸಿಕ ಮಾಹಿತಿ, ನಾಡಿನ ಶಿಲ್ಪಕಲೆ, ಶಾಸನ ಸಮೀಕ್ಷೆ, ಕನ್ನಡ ಪತ್ರಿಕಾ ಪ್ರಪಂಚದ ಅಪೂರ್ವ ದಾಖಲೆಗಳು, ಕನ್ನಡ – ಮರಾಠಿ ಬಾಂಧವ್ಯವನ್ನು ಕುರಿತ ಮಾಹಿತಿಗಳು, ಕಂಪ್ಯೂಟರ್ ಬಳಕೆಯ ಸಾಧ್ಯತೆಯ ಮಾಹಿತಿಗಳು ಈ ಫೈಲುಗಳಲ್ಲಿದ್ದು ಅಪೂರ್ವ ಮಾಹಿತಿಕೋಶಗಳಾಗಿವೆ.

❑

ಅಧ್ಯಾಯ – ೪

ಸೃಜನಶೀಲ

೧. ಸಣ್ಣಕತೆ

ಹಾವನೂರರ ಸಾಹಿತ್ಯ ಕೃಷಿ ಆರಂಭಗೊಂಡಿದ್ದು ಸಣ್ಣಕತೆಗಳೊಂದಿಗೆ. ೧೯೩೯ರಲ್ಲಿ ಕೇವಲ ೧೪ ವರ್ಷದವರಿದ್ದಾಗ ಅವರು ಬರೆದ 'ಹೋಟೆಲಿನ ಪ್ರಭಾವ' ಎಂಬ ಸಣ್ಣಕತೆಯೇ ಅವರ ಮೊದಲ ಪ್ರಕಟಿತ ಬರಹ. ಅದು ಮುದ್ರಣಗೊಂಡಿದ್ದು ಹಾವೇರಿಯ ಹೈಸ್ಕೂಲಿನ ಪತ್ರಿಕೆಯಲ್ಲಿ. ಮುಂದೆ ಅವರು 'ಮುಕ್ಕಣ್ಣ', 'ಶೂರ್ಪನಖಿ,' 'ಪತ್ರಪರೀಕ್ಷೆ,' 'ಪ್ರಥಮ ಪತಿವ್ರತೆ' ಮುಂತಾದ ನಲವತ್ತಕ್ಕೂ ಹೆಚ್ಚು ಕತೆಗಳನ್ನು ಬರೆದರು. ಅವೆಲ್ಲ ಜಯಂತಿ, ಪ್ರಕಾಶ, ಯುಗಪುರುಷ, ಕತೆಗಾರ, ನಗುವ ನಂದ, ಕಸ್ತೂರಿ, ಉಷಾ, ನುಡಿ ಮುಂತಾದ ಪತ್ರಿಕೆಗಳಲ್ಲಿ ಬೆಳಕು ಕಂಡಿವೆ. ಹಾವನೂರರ 'ತಿಮ್ಮಯ್ಯನವರ ಆಕಾಲಿಕ ಮರಣ' ಎಂಬ ಕತೆ ೧೯೪೮ರಲ್ಲಿ 'ಜಯಂತಿ' ಪತ್ರಿಕೆಯು ಆಯೋಜಿಸಿದ್ದ ಕಥಾಸ್ಪರ್ಧೆಯಲ್ಲಿ ಎರಡನೇ ಬಹುಮಾನವನ್ನು ಪಡೆದುಕೊಂಡಿತು. ಅದೇ ವರ್ಷ 'ಅವರು ಮತ್ತು ದೇವಕ್ಕ' ಎಂಬ ಅವರ ಮೊದಲ ಕಥಾಸಂಕಲನವನ್ನು ಗೋಕರ್ಣದ ಪರ್ಣಕುಟಿ ಗ್ರಂಥ ಮಾಲೆ ಹೊರತಂದಿತು.

ಬರವಣಿಗೆಯಲ್ಲಿ ನಿರತ

ಹನ್ನೊಂದು ವರ್ಷಗಳ ನಂತರ, ಎಂದರೆ ೧೯೫೯ರಲ್ಲಿ ಹೊರಬಂದದ್ದು ಅವರ ಎರಡನೇ ಕಥಾ ಸಂಕಲನವಾದ 'ಕಾಗೆಗೆ ಹೇಳಿದ ಕಥೆ.' ಕಥಾವಸ್ತು ನಿರೂಪಣ ತಂತ್ರ ಮುಂತಾದ ಅಂಶಗಳಿಂದ ಮಾತ್ರವಲ್ಲದೆ ಮುದ್ರಣದ ದೃಷ್ಟಿಯಿಂದಲೂ ಈ ಸಂಕಲನ ವಿಶಿಷ್ಟವಾದದ್ದು. ಇಂಗ್ಲಿಷಿನ 'ಪಾಕೆಟ್ ಬುಕ್' ಸರಣಿಯ ಮಾದರಿಯಲ್ಲಿ ಕನ್ನಡದಲ್ಲಿ ಮೊತ್ತ ಮೊದಲ ಬಾರಿಗೆ ಡೆಮ್ಮಿ ೧/೧೨ ಆಕಾರದಲ್ಲಿ ಈ ಕೃತಿ ಹೊರಬಂದಿದೆ. ಕರ್ನಾಟಕ ರಾಜ್ಯ ಸರ್ಕಾರದ ಸಂಸ್ಕೃತಿ ಪ್ರಸಾರ ಇಲಾಖೆಯ ಆ ವರ್ಷದ 'ಅತ್ಯುತ್ತಮ ಕಥಾಸಾಹಿತ್ಯ ವಿಭಾಗದ ಕೃತಿ' ಎಂಬ ಬಹುಮಾನವನ್ನು ಅದು ಗಳಿಸಿಕೊಂಡಿತು.

೧೯೬೩ರಲ್ಲಿ ಬಾಫ್ರೋ ಪ್ರಕಾಶನವು ಹಾವನೂರರ ಮೂರನೇ ಕಥಾ ಸಂಕಲನವಾದ 'ಕುಚೋದ್ಯದ ಕಥೆಗಳು'ಅನ್ನು ಹೊರತಂದಿತು. ಸ್ಟೀಫನ್ ತ್ಸ್ವೆಯಿಕ್, ಗಾಲ್ಸ್‌ವರ್ದಿ, ಬ್ರನೋಫ್ರಾಂಕ್, ಫೆಡ್ರಿಕ್‌ಬ್ರೌನ್, ಝೊಶ್ಚೆಂಕೋ ಮುಂತಾದ ಕತೆಗಾರರ ಕತೆಗಳನ್ನು ಇಲ್ಲಿ ಕನ್ನಡದ ಜಾಯಮಾನಕ್ಕೆ ಅಳವಡಿಸಲಾಗಿದೆ. ಲೇಖಕರೇ ಉಲ್ಲೇಖಿಸಿರದಿದ್ದಲ್ಲಿ ಇವು ರೂಪಾಂತರಿತ ಕತೆಗಳೆಂದು ಹೇಳಲು ಸಾಧ್ಯವಾಗದಷ್ಟು ಚೆನ್ನಾಗಿದೆ ಇಲ್ಲಿಯ ನಿರೂಪಣೆ.

ಹೆಣ್ಣಿನ ಜೀವನದ ಏಳುಬೀಳುಗಳನ್ನು ವಯೋಮಾನ ಕ್ರಮದಲ್ಲಿ ಚಿತ್ರಿಸುವ 'ಗಂಧ ಮತ್ತು ಕಲ್ಲು' ಹಾವನೂರರ ಮೂರನೆಯ ಮತ್ತು ಕಡೆಯ ಕಥಾಸಂಕಲನ. ೨೦೦೬ರಲ್ಲಿ ಬೆಂಗಳೂರಿನ ಅಖಿಲು ಸೇವಾ ಸಂಸ್ಥೆಯು ಹೊರತಂದಿರುವ ಈ ಸಂಗ್ರಹದಲ್ಲಿ ಆಧುನಿಕ ದಾಂಪತ್ಯದ ಶ್ರುತಿ - ಅಪಶ್ರುತಿಗಳನ್ನು ಮೂಲದ್ರವ್ಯವಾಗಿ ಉಳ್ಳ ಒಂಭತ್ತು ಕತೆಗಳಿವೆ. ಹದಿಹರೆಯದ ಹೊಸಬಿಸಿ, ವಿವಾಹಪೂರ್ವ ಮನೋಧರ್ಮ, ವೈವಾಹಿಕ ಬದುಕಿನ ಸ್ವಪ್ನಲೋಕ, ತಾಯ್ತನದ ಸಂಭ್ರಮ, ಸಂಸಾರದ ವಿರಸ, ಮಾನಸಿಕ ವಿಚ್ಛೇದ ಮುಂತಾದ ಸಾಂಸಾರಿಕ ಬದುಕಿನ ಹಲವು ಮಗ್ಗಲುಗಳನ್ನು ಈ ಕತೆಗಳು ಓದುಗರ ಮುಂದೆ ಬಿಡಿಸಿಡುತ್ತವೆ.

ಸಂಖ್ಯೆಯ ದೃಷ್ಟಿಯಿಂದ ಹಾವನೂರರು ನೂರಾರು ಕತೆಗಳನ್ನು ಬರೆದವರೇನಲ್ಲ ಎಂಬುದು ನಿಜವೇ. ಆದರೆ ಇವರ ಎಲ್ಲ ಕತೆಗಳೂ ಗಟ್ಟಿಕಾಳುಗಳು ಎಂಬುದರಲ್ಲಿ ಎರಡು ಮಾತಿಲ್ಲ. ಕೇವಲ ೨೦ ವರ್ಷದ ತರುಣ 'ಐರಣಿ ಶ್ರೀನಿವಾಸ' (ಶ್ರೀನಿವಾಸ ಹಾವನೂರ)ರ 'ಅವರು ಮತ್ತು ದೇವಕ್ಕ' ಕತೆಗಳನ್ನು ಓದಿ ಗೌರೀಶ ಕಾಯ್ಕಿಣಿಯವರಂತಹ ಪ್ರಸಿದ್ಧ ಸಾಹಿತಿ, ವಿಮರ್ಶಕರು

> "... 'ಅವರು' ಯಾವ ಭಾಷೆಗೂ ಭೂಷಣವಾಗಬಲ್ಲ ಒಂದು ಒಳ್ಳೇ ಕತೆ. ಇದೊಂದೇ ಬರೆದರೂ ಐರಣಿಯವರು ಲಲಿತ ಸಾಹಿತ್ಯದಲ್ಲಿ ಸಿದ್ಧಹಸ್ತರೆನಿಸುತ್ತಿದ್ದರು... 'ದೇವಕ್ಕ' ಕತೆಯೇನೋ ಚೆನ್ನಾಗಿದೆ. ತಂತ್ರವೂ ಹದಗೆಟ್ಟಿಲ್ಲ. ಸಾವಕಾಶವಾಗಿ ಪ್ರತಿಲೋಮಪದ್ಧತಿಯಿಂದ ಕಥೆಯ ಅನುಪೂರ್ವಿಯನ್ನು ಅಲ್ಲಲ್ಲಿ ಹೆಣೆದು ಒಂದು ತುಂಬ ತಥ್ಯದ ಚಿತ್ರವನ್ನು ಐರಣಿಯವರು ಬಿಂಬಿಸಿದ್ದಾರೆ. ಆದರೆ ಅದೇಕೋ ಕತೆಯ ವೇಗ ತೀರ ಮಂದವೆನಿಸುವುದು... ಆದರೂ ಎರಡೂ ಕತೆಗಳಲ್ಲಿನ ಮನೋಧರ್ಮದ ಆವಿಷ್ಕಾರ ಮನೋಜ್ಞವಾಗಿದೆ. ದೇವುಡು ಅವರ 'ಅಂತರಂಗ'ದ ನಂತರ ಸಹೇತುಕವಾಗಿ ಹೀಗೆ ಅಂತರಂಗದ ತೆರೆತೆರೆಗಳನ್ನು

> ಪರೆಪರೆಯಾಗಿ ಬಿಡಿಸಿ ಅರಳಿಸಿ ತೋರಿಸಲು ಹೊರಟ ಕತೆಗಾರರು ಐರಣಿಯವರೇ ಎಂದು ಹೇಳಿಬಿಡಬೇಕೆಂದೆನಿಸುವುದು! ಇಲ್ಲವಾದರೆ "ಏನೂ ಇಲ್ಲದ ಜಗಳ ಕ್ರಿಮಿನಲ್ ಕೇಸಾಗಿ ಮಾರ್ಪಟ್ಟ" ಒಂದು ಸಂದರ್ಭವನ್ನೆತ್ತಿಕೊಂಡು ಅದರಲ್ಲಿ ವಿದ್ಧವೂ ಅವಿದ್ಧವೂ ಆದ ಮಾತೃಹೃದಯದ ಹೊಯ್ದಾಟ ಹೋರಾಟಗಳ ಕರುಣ ದಾರುಣವಾದ ಚಿತ್ರವನ್ನು ಕುಸುರಾಗಿ ಕಳೆಗೊಳಿಸಿದ ಐರಣಿಯವರ ಕತೆಯ ಕೈಗಾರಿಕೆ ನಿಜವಾಗಿಯೂ ಸ್ತುತ್ಯ..." ('ಅವರು ಮತ್ತು ದೇವಕ್ಕ'ದ ಮುನ್ನುಡಿ)

ಎಂದು ಉದ್ಗರಿಸುತ್ತಿರಲಿಲ್ಲ. ನುಡಿ, ದೇಶಬಂಧು, ಕರ್ನಾಟಕ ವೈಭವ, ಯುಗಪುರುಷ Bharat Jyoti ಮುಂತಾದ ಆ ಕಾಲದ ಪ್ರಸಿದ್ಧ ಪತ್ರಿಕೆಗಳಲ್ಲಿ ಈ ಕೃತಿಯ ವಿಮರ್ಶೆಗಳು ಪ್ರಕಟವಾಗಿವೆ.

ಹಾವನೂರರ ಕೆಲವು ಕತೆಗಳು ರೇಡಿಯೂ ರೂಪಾತರಗೊಂಡಿದೆ ಅಷ್ಟೇ ಅಲ್ಲದೆ ಇತರ ಭಾಷೆಗಳಿಗೂ ಅನುವಾದಗೊಂಡಿವೆ. ಉದಾಹರಣೆಗೆ 'ಸ್ವಪ್ನಮುರಲಿ' ಎಂಬ ಕತೆ ಅದೇ ಹೆಸರಿನಲ್ಲಿ ಮರಾಠಿಗೆ ಅನುವಾದಗೊಂಡು ೧೯೬೭ರ 'ಮನೋಹರ' ಪತ್ರಿಕೆಯಲ್ಲಿ ಪ್ರಕಟಗೊಂಡರೆ ಇವರ 'ಶೂರ್ಪನಖಾ'ವನ್ನು ವ್ಯಾಸರಾಯ ಬಲ್ಲಾಳರು ಅದೇ ಹೆಸರಿನಲ್ಲಿ ಇಂಗ್ಲಿಷಿಗೆ ಭಾಷಾಂತರಿಸಿದ್ದಾರೆ. ಅದೇ ರೀತಿ 'ನಿಃಸಂತಾನ' ಎಂಬುದು 'ಸಂತಾನದುಃಖ' ಎಂಬ ಹೆಸರಿನಲ್ಲಿ ಮಲಯಾಳಂ ಭಾಷೆಗೆ ಅನುವಾದಗೊಂಡು ೧೯೬೮ರಲ್ಲಿ 'ಮಾತೃಭೂಮಿ'ಯಲ್ಲಿ ಮುದ್ರಿತವಾಗಿದೆ. 'ಗಂಧ ಮತ್ತು ಕಲ್ಲು' ಹಾವನೂರರ ಬಹು ಚರ್ಚಿತವಾದ ಸಣ್ಣಕತೆ. ಪ್ರಸಿದ್ಧ ನಾಟಕಕಾರ ಹೆನ್ರಿ ಇಬ್ಸೆನ್ನನ 'ಡಾಲ್ಸ್ ಹೌಸ್' ಎಂಬ ನಾಟಕದ ಪ್ರೇರಣೆಯಿಂದ ರಚಿತವಾದ ಕತೆ ಇದು. ೧೯ನೇ ಶತಮಾನದಲ್ಲಿ ರಚಿತವಾದ ಈ ನಾಟಕದಲ್ಲಿ ನಾಯಕಿಯು ತನ್ನ ಗಂಡನ ನಡವಳಿಕೆಗೆ ಬೇಸತ್ತು ಮನೆಬಿಟ್ಟು ಹೊರಬರುತ್ತಾಳೆ. ಆ ಕಾಲಕ್ಕೆ ಇದು ಅತ್ಯಂತ ಕ್ರಾಂತಿಕಾರಕವಾದ ನಿಲುವು. ಆದರೆ ಹಾವನೂರರ ಕತೆಯಲ್ಲಿ 'ಮನೆಯಾಕೆ' ಹಾಗೆ ಮಾಡುವುದಿಲ್ಲ. ಬದಲಾಗಿ 'ಮನೆಯ ಮಕ್ಕಳ ತಾಯಿಯಾಗಿರುವ ನನಗೆ ಆ ಮನೆಯಲ್ಲಿ ಬದುಕಿ ಬಾಳುವ ಹಕ್ಕಿದೆ. ಆದರೆ ಗಂಡನೊಂದಿಗೆ ಮಾತುಕತೆಯ ಅಗತ್ಯವಿಲ್ಲ' ಎಂಬ ದಿಟ್ಟ ನಿಲುವನ್ನು ಆಕೆ ಕೈಗೆತ್ತಿಕೊಳ್ಳುತ್ತಾಳೆ. 'ಗಂಧ ತೀಡಿದ' ಹಾಗಿರಬೇಕಾದ ಗಂಡ ಹೆಂಡಿರ ಜಗಳ ಎರಡು ಕಲ್ಲುಗಳನ್ನು ಘಟ್ಟಿಸಿದಂತೆ ಆದಾಗ ಏರ್ಪಡುವ ಪರಿಸ್ಥಿತಿಯನ್ನು ಚಿತ್ರಿಸುವ ಈ ಕತೆ ೧೯೬೭ರಷ್ಟು ಹಿಂದೆಯೇ 'ಸಾರಿಕಾ' ಎಂಬ ಹಿಂದಿ ಪತ್ರಿಕೆಯಲ್ಲಿ 'ಚಂದನ್ ಔರ್ ಪತ್ಥರ್' ಎಂಬ ಹೆಸರಿನಲ್ಲಿ ಅನುವಾದಗೊಂಡು ಪ್ರಕಟವಾಯಿತು. ತೆಲುಗು, ಗುಜರಾತಿ, ಉರ್ದು ಮುಂತಾದ ಭಾಷೆಗಳಿಗೂ ಅನುವಾದಗೊಂಡಿರುವ ಈ ಕತೆ ೧೯೭೧ರ ವೇಳೆಗೆ ಕೆಲವು ತರಗತಿಗಳಿಗೆ ಪಠ್ಯವಾದದ್ದೂ ಇದೆ.

ಕಾದಂ-ಕಥನ

ಕನ್ನಡ ಸೃಜನಶೀಲ ಸಾಹಿತ್ಯಕ್ಕೆ ಹಾವನೂರರು ನೀಡಿದ ವಿಶಿಷ್ಟ ಕೊಡುಗೆಯೆಂದರೆ 'ಕಾದಂ-ಕಥನ'ಗಳದ್ದು. ಇದು ಕಾದಂಬರಿಯ ಡೈಜೆಸ್ಟ್ ಅಥವಾ ಸಾರಾಂಶವಲ್ಲ.

ಇಂಗ್ಲಿಷ್‌ನಲ್ಲಿಯ 'ಮ್ಯಾಕ್ಸ್‌ಮಿಲನ್ ಸೀರೀಸ್'ನಂತೆ ಮಕ್ಕಳಿಗಾಗಿ ಬರೆದ ಕಥಾಸಾರವೂ ಅಲ್ಲ. ಬದಲಾಗಿ ಕಾದಂಬರಿಯೊಂದರ 'ಕತೆಯ ಮೆಯ್ಗಡಲೀಯದೆ' ಅದರ ಕೆಲವು ಹೃದ್ಯವಾದ ಸನ್ನಿವೇಶಗಳನ್ನು ಯಥಾವತ್ತಾಗಿ ಬಳಸಿಕೊಂಡು ಆ ಮೂಲಕ ಹೇಳಲಾದ ಕಥನ. ಆಯ್ದುಕೊಂಡ ಕಾದಂಬರಿ ಕನ್ನಡದ್ದೇ ಆದರೆ ಕಾದಂಬರಿಕಾರರ ನುಡಿಕಟ್ಟನ್ನೇ ಚಾಚೂ ತಪ್ಪದಂತೆ ಇಟ್ಟುಕೊಳ್ಳುವುದು ಹಾವನೂರರ ವಿಧಾನ. ಇದರಿಂದಾಗಿ ಮೂಲಕೃತಿಯನ್ನೇ ಸಂಕ್ಷೇಪದಲ್ಲಿ ಓದಿದಂತಾಗಿ ವಿಶೇಷ ರಸಾನುಭವವಾಗುವುದು.

ಸಾಧಾರಣವಾಗಿ ಕಾದಂ-ಕಥನಗಳಲ್ಲಿ ಕಾದಂಬರಿಯ ಆದಿ-ಮಧ್ಯ-ಅಂತ್ಯಗಳನ್ನು ಉಳಿಸಿಕೊಳ್ಳುವುದು ವಾಡಿಕೆ. ಆದರೆ ಕೆಲವು ಕಾದಂಬರಿಗಳಲ್ಲಿ ಹಾಗೆ ಮಾಡಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಕಾದಂಬರಿಯ ಪೂರ್ವಾರ್ಧದ ಅಥವಾ ಉತ್ತರಾರ್ಧದ ಕಥಾ ಭಾಗವನ್ನಷ್ಟನ್ನೇ ಆಯ್ದುಕೊಂಡು ಅವರು ಕಥೆಯನ್ನು ನಿರೂಪಿಸಿದ್ದಾರೆ. ಇನ್ನು ಕೆಲವೆಡೆ ಕಾದಂಬರಿಯ ವಿಶಿಷ್ಟ ಪಾತ್ರವೊಂದನ್ನು ಆಯ್ದು ಕೊಂಡು ಆ ವ್ಯಕ್ತಿಗೆ ಸಂಬಂಧಿಸಿದ್ದಷ್ಟೇ ಕಥಾಭಾಗ ಹಾಗೂ ಸನ್ನಿವೇಶಗಳನ್ನು ನಿರೂಪಿಸಿರುವುದೂ ಉಂಟು.

ತಾವು ಓದಿ ಮೆಚ್ಚಿದ ಕಾದಂಬರಿಗಳ ಸ್ವಾರಸ್ಯವನ್ನು ಇತರರಿಗೂ ಉಣಬಡಿಸುವ ಉದ್ದೇಶದಿಂದ ಹಾವನೂರರು ೧೯೫೦ರಷ್ಟು ಹಿಂದೆಯೇ ನುಡಿ, ಕತೆಗಾರ ಮುಂತಾದ ಪತ್ರಿಕೆಗಳಲ್ಲಿ ಕಾದಂ-ಕಥನಗಳನ್ನು ಪ್ರಕಟಿಸಲು ಆರಂಭಿಸಿದರು. ಲಭ್ಯ ಮಾಹಿತಿಯ ಪ್ರಕಾರ ೧೯೫೦ರಲ್ಲಿ 'ನುಡಿ'ಯಲ್ಲಿ ಪ್ರಕಟವಾದ, ಬ್ರಾಂಟೆ ಎಂಬಾತ ಬರೆದ 'ಜೇನ್ ಆಯರ್' ಎಂಬ ಕೃತಿಯ ಸಂಕ್ಷೇಪವೇ ಅವರ ಮೊತ್ತ ಮೊದಲ ಕಾದಂ-ಕಥನ. ಹಿಂದೆಯೇ 'ದುರಂತದೇವಿ ಟೆಸ್' (ಹಾರ್ಡಿ), ರಮೋನಾ (ಎಚ್.ಎಚ್. ಜೆಕ್ಸನ್) ಮುಂತಾದವು ಬೆಳಕು ಕಂಡವು. ೧೯೫೨-೫೩ರಲ್ಲಿ 'ಕತೆಗಾರ' ಪತ್ರಿಕೆಯಲ್ಲಿ ಧರ್ಮಸೆರೆ (ಜಿ.ಬಿ.ಜೋಶಿ) ಧೂಮಕೇತು (ಕಡಗೊಂಡ್ಲು ಶಂಕರಭಟ್ಟ) ಮನೆಗೆ ಬಂದ ಮಹಾಲಕ್ಷ್ಮಿ (ತರಾಸು) ನಿಸರ್ಗ (ಮಿರ್ಜಿ ಅಣ್ಣಾರಾಯ) ಚೋಮನದುಡಿ (ಶಿವರಾಮ ಕಾರಂತ), ಅಶಾಂತಿಪರ್ವ (ಆನಂದಕಂದ) ಮುಂತಾದ ಕಾದಂಬರಿಗಳನ್ನು ಅವರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಆದರೆ ಇವೆಲ್ಲ ಕೇವಲ ೬-೮ ಪುಟಗಳಿಗಷ್ಟೇ ಸೀಮಿತ ವಾಗಿರುತ್ತಿದ್ದುದರಿಂದ ಸಂಪೂರ್ಣ ರಸಾಸ್ವಾದನೆ ಸಾಧ್ಯವಿರಲಿಲ್ಲ.

೧೯೫೬ರಲ್ಲಿ 'ಕಸ್ತೂರಿ' ಮಾಸಪತ್ರಿಕೆಯು ಆರಂಭವಾಯಿತು. ಇಂಗ್ಲಿಷ್‌ನ 'ರೀಡರ್ಸ್ ಡೈಜೆಸ್ಟ್' ಮಾದರಿಯಲ್ಲಿ ಅದನ್ನು ರೂಪಿಸಬೇಕೆಂಬುದು ಅದರ ಸಂಪಾದಕರಾಗಿದ್ದ ಪಾ.ವೆಂ. ಆಚಾರ್ಯರ ಕನಸು. ಆಚಾರ್ಯರ ಒತ್ತಾಸೆಯಿಂದಾಗಿ ಹಾವನೂರರು ಕಸ್ತೂರಿಯ ಆರಂಭಿಕ ಸಂಚಿಕೆಗಳಿಂದಲೂ ಅಲ್ಲಿಯ 'ಪುಸ್ತಕ ವಿಭಾಗ'ಕ್ಕೆ ಕಾದಂ-ಕಥನಗಳನ್ನು ಸಿದ್ಧಪಡಿಸಿ ಕೊಡಲು ಆರಂಭಿಸಿದರು. ಇವು ಸುಮಾರು ೨೫-೩೦ ಪುಟಗಳಷ್ಟು ವಿಸ್ತಾರವಾಗಿ ಇರುತ್ತಿದ್ದುದರಿಂದ ಕಥೆಯ ನಿರೂಪಣೆ ಇನ್ನಷ್ಟು ಸೊಗಸುಗಟ್ಟಲು ಕಾರಣವಾಯಿತು.

ಕಸ್ತೂರಿಯಲ್ಲಿ ಹಾವನೂರರು ಸುಮಾರು ೫೦ಕ್ಕೂ ಹೆಚ್ಚು ಕಾದಂ-ಕಥನಗಳನ್ನು

ಪ್ರಕಟಿಸಿದ್ದಾರೆ. ಅದರಲ್ಲಿ ದೇವುಡು ಅವರ 'ಮಹಾಕ್ಷತ್ರಿಯ,' ಗಳಗನಾಥರ 'ಮಾಧವ ಕರುಣಾವಿಲಾಸ,' ಕೆರೂರು ವಾಸುದೇವಾಚಾರ್ಯರ 'ಯದು ಮಹಾರಾಜ' ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು' ಎಸ್.ಎಲ್. ಭೈರಪ್ಪನವರ 'ದಾಟು', 'ತಂತು' 'ಪರ್ವ', 'ವಂಶವೃಕ್ಷ ಮುಂತಾದ ಕನ್ನಡದ ಪ್ರಮುಖ ಕೃತಿಗಳ ರಸವತ್ತಾದ ಭಾಗಗಳಿವೆ. ಕೇವಲ ಕನ್ನಡದ ಕೃತಿಗಳನ್ನು ಮಾತ್ರವಲ್ಲದೆ ಆರ್.ಎಲ್. ಸ್ಟೀವನ್‌ಸನ್ನನ 'ಡಾ. ಜೆಕ್ಕಿಲ್ ಮತ್ತು ಮಿ. ಹೈಡ್,' ಖುಷವಂತ ಸಿಂಗರ 'ಟ್ರೈನ್ ಟು ಪಾಕಿಸ್ತಾನ್,' 'ಬ್ರಾಂಟೆಯ ವುದರಿಂಗ್ ಹೈಟ್ಸ್', ಮುಂತಾದ ಇಂಗ್ಲಿಷ್ ಕೃತಿಗಳು; ನಾ. ಪೇಂಡಸೆಯವರ 'ರಾಮಶರಣ ಜೀ ಗೋಷ್ಠ' ಗ.ದಿ. ಮಾಡಗೂಳಕರರ 'ಗ್ರಾಮಜೀವನ' ಮೊದಲಾದ ಮರಾಠಿ ಕಾದಂಬರಿಗಳು; ವಿಭೂತಿ ಭೂಷಣ ಬಂದೋಪಾಧ್ಯಾಯರ 'ಪಥೇರ್ ಪಾಂಚಾಲಿ', ಪ್ರಬೋಧಕುಮಾರ ಸನ್ಯಾಲರ 'ಯಾತ್ರಿಕ' ಮೊದಲಾದ ಬಂಗಾಳಿ ಕಾದಂಬರಿಗಳು ಮುಂತಾದವನ್ನು ಹಾವನೂರರು ಕಾದಂ – ಕಥನ ರೂಪದಲ್ಲಿ ಪ್ರಸ್ತುತಪಡಿಸಿದ್ದಾರೆ.

ಕೇವಲ ಸಿದ್ಧಕಾದಂಬರಿಗಳನ್ನು ಕಾದಂ ಕಥನಕ್ಕೆ ಅಳವಡಿಸಿರುವುದು ಮಾತ್ರವಲ್ಲದೆ ವಡ್ಡಾರಾಧನೆ, ಅದ್ಭುತ ರಾಮಾಯಣಗಳಂತಹ ಅಭಿಜಾತ ಕೃತಿಗಳು; ಕ್ರಿಸ್ತನ ಕೊನೆದಿನ, ಚಾಫೇಕರ ಬಂಧುಗಳು, ಸುರಪುರದ ದುರಂತ, ವಾಟರ್ಲೂ, ಸಿಸಿರೋ ಪ್ರಕರಣ ಮೊದಲಾದ ಚಾರಿತ್ರಿಕ ಸಂಗತಿಗಳು; ನೆಹರೂ ದರ್ಶನ, ನೆಹರೂ ಸಂವಾದ, ರೋಸೆನ್ ಬರ್ಗರ ವಿಚಾರಣೆ, ಇತ್ಯಾದಿ ಪ್ರಚಲಿತ ವಿಷಯಗಳನ್ನೂ ಹಾವನೂರರು ಕಾದಂಬರಿ ಗಳಂತೆಯೇ ರಸವತ್ತಾಗಿ ನಿರೂಪಿಸಿದ್ದಾರೆ. ಬಹುಶಃ 'ಕಸ್ತೂರಿ'ಯಲ್ಲಿ ಶ್ರೀ ಜಿ. ಗಂಗಾಧರ ಹೆಗಡೆ ಮತ್ತು ಹಾವನೂರರಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಕಾದಂ–ಕಥನಗಳನ್ನು ಪ್ರಕಟಿಸಿದವರು ಇನ್ನಾರೂ ಇಲ್ಲವೆಂದೇ ಹೇಳಬೇಕು.

ಹಾವನೂರರ ಎಂಟು ಕಾದಂ–ಕಥನಗಳ ಮೊತ್ತ ಮೊದಲ ಸಂಗ್ರಹವಾದ 'ಮಾತಂಗಿ ಮತ್ತು ಇತರ ಕಾದಂ ಕಥನಗಳು' ಕೃತಿ ೧೯೮೨ರಲ್ಲಿ ಧಾರವಾಡದ ಪ್ರತಿಭಾ ಗ್ರಂಥ ಮಾಲೆಯಿಂದ ಮೊದಲಬಾರಿಗೆ ಪ್ರಕಟವಾಯಿತು. ಅನಂತರದ್ದು ೧೯೮೪ರಲ್ಲಿ ಧಾರವಾಡದ್ದೇ ಆದ ಅನನ್ಯ ಪ್ರಕಾಶನದಿಂದ ಹೊರಬಂದ 'ಕುಮುದಿನಿ ಹಾಗೂ ಇತರ ಕಾದಂ–ಕಥನಗಳು.' ಬಸವರಾಜ ಕಟ್ಟೀಮನಿಯವರ 'ಮಾಡಿ ಮಡಿದವರು' ಕಾದಂಬರಿಯ ಸಂಕ್ಷಿಪ್ತ ರೂಪ ಅದೇ ಹೆಸರಿನಲ್ಲಿ ೧೯೯೮ರಲ್ಲಿ ಬೆಳಕು ಕಂಡಿತು. ಮರುವರ್ಷ ಕನಕಪುರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಾಗ ಸಮ್ಮೇಳನಾಧ್ಯಕ್ಷರಾಗಿದ್ದ ಎಸ್.ಎಲ್. ಭೈರಪ್ಪನವರ ಕಾದಂಬರಿಗಳಿಂದ ಆರಿಸಲಾದ ಐದು ಪ್ರಸಂಗಗಳ ಸಂಗ್ರಹವಾಗಿ 'ಡಾ. ಎಸ್.ಎಲ್. ಭೈರಪ್ಪನವರ ಕಾದಂ–ಕಥನಗಳು' ಕೃತಿ ಹೊರಬಂದಿದೆ.

ಲಲಿತ ಪ್ರಬಂಧಗಳು

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ 'ಸಂಶೋಧಕ' ಎಂಬ ಹಣೆಪಟ್ಟಿಯನ್ನು ಹೊತ್ತಿರುವವರು ಲಲಿತ ಪ್ರಬಂಧಗಳನ್ನು ಬರೆದಿರುವುದು ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆ. ಹಾಗಾಗಿ 'ಸಂಶೋಧಕರಿಗೂ ಲಲಿತಪ್ರಬಂಧಗಳಿಗೂ ಎತ್ತಣ – ಸೀಗೆಯ ಸಂಬಂಧ'ವೆಂದೇ

ನಂಬಿಕೆ. ಆದರೆ ಹಾವನೂರರು ಈ ಮಾತಿಗೆ ದೊಡ್ಡ ಅಪವಾದ. ಅವರು ಹುಟ್ಟು ವಿನೋದ ಸ್ವಭಾವದವರು. ಬದುಕಿನ ಸಣ್ಣ ಸಣ್ಣ ಸಂಗತಿಗಳಲ್ಲಿಯೂ ಅವರು ರುಚಿಯನ್ನು ಕಾಣಬಲ್ಲವರು. ತಮ್ಮ ಪರಿಚಯದ ಪರಿಧಿಗೆ ಬಂದ ಯಾರನ್ನೂ ಅವರು ತಮ್ಮ ಆತ್ಮೀಯ ವಲಯಕ್ಕೆ ಸೇರಿಸಿಕೊಳ್ಳಲು ಹಿಂದುಮುಂದು ನೋಡಿದವರಲ್ಲ. ಸಣ್ಣ ಮಕ್ಕಳಿಂದ ಹಿಡಿದು ವಯೋವೃದ್ಧರವರೆಗೆ; ಸಮಾಜದ ಅತಿಗಣ್ಯರಿಂದ ಹಿಡಿದು ಚಾ ದುಕಾನಿನ ಮಾಣಿಯವರೆಗೆ ಎಲ್ಲರಲ್ಲಿಯೂ ಏಕರೀತಿಯಿಂದ ಬೆರೆಯುವ ಕಲೆ ಅವರಿಗೆ ಸಿದ್ಧಿಸಿದೆ. ಅವರ ಈ ಎಲ್ಲ ಗುಣ ಸ್ವಭಾವಗಳ ಪ್ರತಿಫಲನವನ್ನು ಅವರ ಲಲಿತ ಪ್ರಬಂಧಗಳಲ್ಲಿ ನಿಚ್ಚಳವಾಗಿ ಕಾಣಬಹುದು. 'ಪ್ರಿಯಂವದಾ,' 'ಶ್ರೀಸಿ', 'ಶ್ರೀ.ಹಾ,' 'ಶ್ರೀಶ', ಹಾಫೀಸ್, ಎಸ್.ಎನ್. ಗಲಗಲಿ, ಪಿ.ಎನ್. ಕುಲಕರ್ಣಿ ದುಶ್ಯಂತ ಮುಂತಾದ ಹೆಸರುಗಳಲ್ಲಿ ಅವರು ಈ ಪ್ರಬಂಧಗಳನ್ನು ಬರೆದಿದ್ದಾರೆ.

೫೦ರ ದಶಕದಲ್ಲಿ ಮುಂಬೈನ 'ನುಡಿ' ಪತ್ರಿಕೆಯಲ್ಲಿ ಕೆಲಕಾಲ ಅವರು 'ಕಾಂತಾ ಸಮ್ಮಿತಿ' ಎಂಬ ಲಲಿತ ಅಂಕಣವನ್ನು ನಿರ್ವಹಿಸಿದ್ದಾರೆ. ಆ ವೇಳೆಯಲ್ಲಿಯೇ ಅವರ 'ಸ್ವತಂತ್ರ ಭಾರತದಲ್ಲಿ ನನ್ನ ಸ್ಥಾನಮಾನ', 'ಯಾರಿಗೆ ಕಿವಿಕೇಳುವುದಿಲ್ಲ,' 'ಕೈಹಿಡಿದವರ ಕಳಕಳಿ' 'ನೀವು ತಿಳಿದಿರುವುದೊಳಿತು,' 'ರೈಲ್ವೆ ಅಪಘಾತಗಳ ನಿವಾರಣೆ' ಮೊದಲಾದ ಬರಹಗಳು 'ನುಡಿ'ಯಲ್ಲಿ ಪ್ರಕಟವಾದವು. ನಂತರ ಕೆಲದಿನಗಳ ಕಾಲ ಬತ್ತಿದಂತಿದ್ದ ಹಾವನೂರರ ಹಾಸ್ಯದ ಒರತೆ 'ಕಸ್ತೂರಿ'ಯ ಆಗಮನದೊಂದಿಗೆ ಮತ್ತೆ ಜಿನುಗಲಾರಂಭಿಸಿತು. ಪಾವೆಂ ಆಚಾರ್ಯರ ಒತ್ತಾಸೆಯಿಂದಾಗಿ ಅವರ ಪ್ರಸಿದ್ಧ ಲಲಿತ ಪ್ರಬಂಧಗಳಾದ 'ಒಕ್ಕಲಗಿತ್ತಿ,' 'ನನ್ನಷ್ಟಕ್ಕೆ ನಾನು,' 'ಆಧುನಿಕ ಗಂಡಸರ ರೋಗಗಳು' ಮುಂತಾದವುಗಳು ರಚಿತವಾದವು.

೧೯೯೯ರಲ್ಲಿ ಪುತ್ತೂರಿನ ಕರ್ನಾಟಕ ಸಂಘ ಹೊರತಂದ 'ಒಂದಿಷ್ಟು ಲಘು; ಒಂದಿಷ್ಟು ಗಂಭೀರ' ಎಂಬ ಸಂಕಲನದಲ್ಲಿ ಮೇಲೆ ಕಾಣಿಸಿದ ಪ್ರಬಂಧಗಳು ಮಾತ್ರವಲ್ಲದೆ 'ವಿಷ್ಣುವಿನ ಅವತಾರಗಳು ಹತ್ತು ಮಾತ್ರವೇನಾ'? 'ನೆಂಟಾಸ್ತಿಕೆ,' 'ಹೆಸರು, ಅಡ್ಡ ಹೆಸರು, ಅಡ್ನಾಡಿ ಹೆಸರು,' 'ಮರಣ ಸಂಭ್ರಮ,' ವಿದೇಶದಲ್ಲಿ ನಾ ಕಂಡ ನಾರಿಯರು' 'ವಿಮಾನದಲ್ಲಿ ಜಲಬಾಧೆ' ಮುಂತಾದ ಹದಿನೆಂಟು ಪ್ರಬಂಧಗಳಿವೆ. ೨೦೦೮ರಲ್ಲಿ ಪ್ರಕಟವಾದ ಹಾವನೂರರ ಆಯ್ದ ಬರಹಗಳ ಸಂಕಲನವಾದ 'ಸಂ-ಕಥನ'ದಲ್ಲಿ ಈ ಸಂಗ್ರಹದಲ್ಲಿ ಇರದ 'ದೇವಗಣದವರು' 'ಬಿಳೀ ಸುಳ್ಳು,' ನನ್ನ ಲಂಚಗುಳಿ ನೌಕರಿ,' 'ಅಜ್ಜ ಮೊಮ್ಮಗರ ಕ್ಷೌರ ಪ್ರಸಂಗ'ಗಳು ಸೇರ್ಪಡೆಗೊಂಡಿವೆ.

ನಿತ್ಯ ಜೀವನದ ಸಂಗತಿಗಳಿಗೆ ಹಾಸ್ಯದ ಲೇಪವನ್ನು ಹಚ್ಚಿ ಲಲಿತ ಪ್ರಬಂಧಗಳನ್ನು ಸಿದ್ಧಪಡಿಸುವುದು ಸಾಮಾನ್ಯ ವಿಧಾನವಷ್ಟೇ. ಆದರೆ ಇತರರ ಬರಹಗಳಲ್ಲಿ ಬಹುಮಟ್ಟಿಗೆ ಕಾಣಸಿಗದ, ಹಾವನೂರರ ಪ್ರಬಂಧಗಳಲ್ಲಿ ಮಾತ್ರವೇ ಹೆಚ್ಚಾಗಿ ತೋರುವ ಮುಖ್ಯ ಅಂಶವೆಂದರೆ ಸಂಶೋಧಕನ ಪ್ರವೃತ್ತಿ. ಸತ್ಯನಾರಾಯಣ ಪೂಜೆಯ ಮೂಲ ಚೂಲಗಳನ್ನು ಕುರಿತಂತೆ ಅವರು ಬರೆದಿರುವ 'ಈತ ಸತ್ಯನಾರಾಯಣ' ನಿಜಕ್ಕೂ ಒಂದು ಸಂಶೋಧನ ಪ್ರಬಂಧವೇ. ನಿರೂಪಣೆ ಶೈಲಿ ಮಾತ್ರ ಲಲಿತರೂಪದ್ದು. "ಈಗ ಎಲ್ಲೆಲ್ಲೂ

ಮನೆ ಮಾತಾಗಿರುವ ಸತ್ಯನಾರಾಯಣ ವ್ರತ ಒಂದೆರಡು ಶತಕಗಳಷ್ಟೇ ಹಳೆಯದು. ಉತ್ತರ ಭಾರತದಲ್ಲಿದ್ದ 'ವೀರರು' ಎಂಬ ಮುಸ್ಲಿಂ ಸನ್ಯಾಸಿಗಳ ಆರಾಧನೆಯ ಹಿನ್ನೆಲೆ ಇದಕ್ಕಿದೆ. ಈ ವ್ರತಕ್ಕೆಂದು ತಯಾರಿಸುವ 'ಸಪಾದ ಭಕ್ಷ್ಯ' ಎಂಬ ಪ್ರಸಾದವನ್ನು ಯಾವ ಪ್ರಾಚೀನ ಪಾಕಶಾಸ್ತ್ರವೂ ಉಲ್ಲೇಖಿಸಿಲ್ಲ" ಎಂದೆಲ್ಲಾ ಅವರು ಈ ಪ್ರಬಂಧದಲ್ಲಿ ದಾಖಲಿಸಿದ್ದಾರೆ! ಅದೇ ರೀತಿಯಲ್ಲಿ 'ವಿಷ್ಣುವಿನ ಅವತಾರಗಳು ಹತ್ತು ಮಾತ್ರವೇ?' ಎಂಬ ಪ್ರಬಂಧದಲ್ಲಿ ಕೃಷ್ಣನಿಗೆ ಮೀಸೆ ಇತ್ತೆಂದು ಹೇಳುವ ಕುಮಾರವ್ಯಾಸನ ಪದ್ಯದ ಉಲ್ಲೇಖ, ಕ್ರೈಸ್ತ ಮಿಷನರಿಗಳು ಕೃಷ್ಣನ ಲೀಲೆಗಳನ್ನು ಟೀಕಿಸಿದ ಬಗೆ ಮುಂತಾದ ಗಂಭೀರ ಅಂಶಗಳು ಲಲಿತವಾದ ರೀತಿಯಲ್ಲಿಯೇ ಪ್ರಸ್ತಾಪಿತಗೊಂಡಿವೆ.

ಇತರ ಲೇಖನಗಳು

ಕೇವಲ ಲಲಿತ ಪ್ರಬಂಧಗಳನ್ನು ಮಾತ್ರವಲ್ಲದೆ ಪ್ರಚಲಿತ ಸಂಗತಿಗಳಿಗೆ ಸಂಬಂಧಿಸಿದ ಗಂಭೀರ ಸ್ವರೂಪದ ಕೆಲವು ಲೇಖನಗಳನ್ನು ಹಾವನೂರರು ರಚಿಸಿದ್ದಾರೆ. ಅವುಗಳಲ್ಲಿ ಕೆಲವು 'ನುಡಿ'ಯಲ್ಲಿ (ಕೆ.ಪಿ.ಸಿ.ಸಿ. ಅಧ್ಯಕ್ಷರ ಅವಗಾಹನೆಗೆ, ಮುಂಬಯಿಯಲ್ಲಿ ಕನ್ನಡ ಸಾಹಿತ್ಯರಂಗ, ಇತ್ಯಾದಿ) ಪ್ರಕಟವಾದರೆ ಮತ್ತೆ ಕೆಲವು 'ಕಸ್ತೂರಿ'ಯಲ್ಲಿ (ಕಸಬರಿಕೆ ರಾಯಭಾರಿಣಿ ಮತ್ತು ಪ್ರಧಾನಮಂತ್ರಿ; ಚೀನೀಯರು ನಿಜವಾಗಿ ಎವರೆಸ್ಟ್ ಏರಿದರೇ? ಮೊಸಳೆ, ಮನುಷ್ಯ ಮತ್ತು ಬೇಟೆ; ಸಾಂತಾ ಮೇರಿಯಾದ ಮಹಾಯಾತ್ರೆ, ತುಕಾನಾ ಹುಡುಗಿ ಪ್ರಾಯಕ್ಕೆ ಬಂದಾಗ, ಏಡನ್ನಿನಲ್ಲಿ ಏನಿದು ಗೊಂದಲ ಇತ್ಯಾದಿ) ಬೆಳಕು ಕಂಡವು. 'ನಮ್ಮ ದೇಶದ ಪಂಚಶೂಲದ ನಿವಾರಣೆ' ಎಂಬ ಅವರ ಬರಹವಂತೂ ಕಸ್ತೂರಿಯ 'ಪುಸ್ತಕ ವಿಭಾಗ'ದಲ್ಲಿ ಪ್ರಕಟವಾಗುವಷ್ಟು ದೀರ್ಘವಾಗಿದೆಯಲ್ಲದೆ ಹಲವು ಸಂಚಿಕೆಗಳಲ್ಲಿ ಓದುಗರು ಪ್ರಶ್ನೋತ್ತರ ನಡೆಸಲೂ ಕಾರಣವಾಯಿತು.

ವ್ಯಕ್ತಿ ಚಿತ್ರಣ

ವ್ಯಕ್ತಿಗಳ ಗುಣ ಸ್ವಭಾವಗಳನ್ನು ಅಕ್ಷರ ರೂಪಕ್ಕೆ ಇಳಿಸುವುದರಲ್ಲಿ ಹಾವನೂರರು ಸಿದ್ಧಹಸ್ತರು. ಕೆಲವೇ ಸಾಲುಗಳು ಅಂಕಣದ ಬರಹಗಳಿಂದ ಹಿಡಿದು ಪೂರ್ಣ ಪ್ರಮಾಣದ ಪ್ರತ್ಯೇಕ ಕೃತಿಗಳವರೆಗೆ ಅವರು ನೂರಾರು ಮಂದಿ ವಿಶಿಷ್ಟ ಸಾಧಕರ ಬದುಕಿನ ವಿವರಗಳನ್ನು ಸಜೀವವಾಗಿ ಚಿತ್ರಿಸಿದ್ದಾರೆ.

ನಿಜ ಹೇಳಬೇಕೆಂದರೆ ಹಾವನೂರರ ವ್ಯಕ್ತಿ ಚಿತ್ರಗಳು ಅವರ ಸಂಶೋಧನ ಪ್ರವೃತ್ತಿಯ ಮತ್ತೊಂದು ಅಭಿವ್ಯಕ್ತಿಯೇ ಆಗಿದೆ. ಅವರೇ ಒಂದು ಕಡೆ ತಮ್ಮ ಈ ಬಗೆಯ ಬರಹಗಳನ್ನು "*ಹಾವನೂರರ ಲೇಖನ ಕಾರ್ಯದ ಒಂದು ವಿಶೇಷತೆ ಎಂದರೆ ಅವರು ಬದುಕಿದ್ದವರನ್ನು ಮುಟ್ಟ ಹೋಗುವುದಿಲ್ಲ. ಸತ್ತವರನ್ನು ಹಾಯಾಗಿ ಇರಗೊಡುವುದಿಲ್ಲ' ಅಂತೆಯೇ ಮುದ್ದಣ, ಗೋವಿಂದ ಪೈ, ಮೊಗ್ಲಿಂಗ್, ಎಲಿಯಟ್ ಮ.ಪ್ರ.ಪೂಜಾರ, ಹಟ್ಟಿಯಂಗಡಿ ನಾರಾಯಣರಾವ್, ಪೇಜಾವರ ಸದಾಶಿವರಾವ್ ಹೀಗೆ ಎಷ್ಟೋ ಜನ ದಿವಂಗತರಾದವರ ಬದುಕು ಹಾಗೂ ಬರಹಗಳನ್ನು ಜಾಲಾಡಿದ್ದಾರೆ*" ಎಂದು ನಗೆಯಾಡಿದ್ದಾರೆ! ಆದರೆ

'ಹೊಸಗನ್ನಡದ ಅರುಣೋದಯ'ವೇ ೬೫೦ ಹೆಚ್ಚು ಜನರ ಜೀವನ ಸಾಧನೆಗಳನ್ನು ಕುರಿತದ್ದು ಎಂಬುದನ್ನು ನೆನೆದಾಗ ಅವರು ಏಕೆ ಬದುಕಿದವರನ್ನು ಬಿಟ್ಟು 'ಸತ್ತವರ ಸಂಗದಲಿ ಹೊತ್ತು ಹೋಗುವುದೆನಗೆ' ಎಂದುಕೊಂಡರೆಂಬುದು ಅರ್ಥವಾಗುತ್ತದೆ. ಹಾಗೆಂದ ಮಾತ್ರಕ್ಕೆ ತೀರಾ ಅವರು ಸಮಕಾಲೀನರನ್ನು ಕುರಿತು ಬರೆದೇ ಇಲ್ಲವೆಂದೇನಲ್ಲ. ಶಿವರಾಮ ಕಾರಂತ, ಎಸ್.ಎಲ್. ಭೈರಪ್ಪ, ವ್ಯಾಸರಾಯ ಬಲ್ಲಾಳ ಮುಂತಾದ ಆತ್ಮೀಯರ ಬಗ್ಗೆ ಅವರ ಬರಹಗಳಿವೆ.

ಹಾವನೂರರ ವ್ಯಕ್ತಿ ಚಿತ್ರಣಗಳಲ್ಲಿ ಅತಿರಂಜಕತೆಯ ಲೇಪನವಿಲ್ಲ. ಎಲ್ಲರಿಗೂ ಗೊತ್ತಿರುವ ಸಂಗತಿಗಳನ್ನೇ ಮತ್ತೆ ಮತ್ತೆ ಹೇಳುವ ಚರ್ವಿತ ಚರ್ವಣವದಲ್ಲ. ವ್ಯಕ್ತಿ ಪ್ರಸಿದ್ಧ ಅಥವಾ ಅಪ್ರಸಿದ್ಧನಾಗಿರಲಿ, ಅವನ ನಿಜ ಸ್ವಭಾವವನ್ನು ಚಿತ್ರಿಸುವುದರಲ್ಲಿ ಅವರಿಗೆ ಹೆಚ್ಚಿನ ಒಲವು. ಹಾಸ್ಯದ ಲೇಪವನ್ನು (ಕೆಲವೊಮ್ಮೆ ತಮಗೇ ವಿಶಿಷ್ಟವಾದ ಉತ್ತರ ಕರ್ನಾಟಕದ ಶೈಲಿಯಲ್ಲಿಯೂ) ಹೊಂದಿದ ಇವರ ವ್ಯಕ್ತಿಚಿತ್ರಣಗಳನ್ನು ಓದುವುದೇ ಒಂದು ಸೊಗಸು. ಉದಾಹರಣೆಗೆ ಎಸ್.ಎಲ್. ಭೈರಪ್ಪನವರನ್ನು ಕುರಿತಂತೆ ಅವರು ಬರೆದ ಬರಹದ ತುಣುಕಿದು:

ಹೀಗಿದ್ದಾರೆ ಈ ಭೈರಪ್ಪನವರು

ಭೈರಪ್ಪ ಇಂದಿನ ನಮ್ಮ ಅತ್ಯಂತ ಜನಪ್ರಿಯ ಕಾದಂಬರಿಕಾರರು. ಕನಕಪುರದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು. ಸರಿಯೇ. ಅವರು ನೋಡಲು ಹೇಗಿದ್ದಾರೆ? ಅವರ ಊಟ ಉಡಿಗೆ, ಮಾತು ನಡತೆ, ಅವರ ಸ್ನೇಹಿತವರ್ಗ, ಅವರು ಕಾದಂಬರಿ ಬರೆಯೋ ವಿಧಾನ ಈ ತರಹದ ಸಾಮಾನ್ಯ ಕುತೂಹಲ ಅನೇಕಾನೇಕರಿಗೆ ಅವರ ಕಾದಂಬರಿಗಳನ್ನು ಓದುವವರಿಗೂ ಇರುವುದು ಸಹಜ.

ಅವರ ಯಾವ ಕಾದಂಬರಿ ಪುಸ್ತಕಗಳಲ್ಲಿಯೂ ಅವರ ಫೋಟೋ ಇರುವುದಿಲ್ಲ. ಸಭೆ ಸಮಾರಂಭಗಳಲ್ಲಿ ಭಾಗವಹಿಸದ ಕಾರಣದಿಂದ ಪೇಪರುಗಳಲ್ಲಿ ಫೋಟೋ ಪ್ರಕಟವಾದ ಸಂದರ್ಭಗಳೂ ಕಡಿಮೆಯೇ. ಸಮ್ಮೇಳನಾಧ್ಯಕ್ಷರಾಗಿದ್ದುದಾಗಿನಿಂದ ಮಾತ್ರ ಅವರ ಸಾದಾಸೀದದರ್ಶನ ಆಗ್ತಾ ಇದೆ. ಅದರಂತೆ ಅವರ ಉಡುಗೆ ತೊಡುಗೆ ದಿನಚರಿ ನಮ್ಮ ನಿಮ್ಮ ಹಾಗೇ ಇದೆ. ಮತ್ತೆ ಅವರೀಗ ವಾನಪ್ರಸ್ಥಾಶ್ರಮಿಗಳು. ಆದ್ದರಿಂದ ಬೆಳಗಿನ ವಾಕಿಂಗ್, ಒಂದಿಷ್ಟು ವ್ಯಾಯಾಮ ತಪ್ಪದೇ ಮಾಡುತ್ತಾರೆ.

ಜಂಟಲ್‌ಮನ್ ಅಥವಾ ಸದ್ಗೃಹಸ್ಥರಿಗೆ ಕೆಲವು ಸಚ್ಚಟಗಳು ಇರುತ್ತವೆ. ಅವೆಂದರೆ ಚಹಾ ಕಾಫಿ ಕುಡಿಯೋದು, ಆಗೀಗ, ಎಲೆ ಅಡಿಕೆ, ಸಿಗರೇಟು ಸೇದೋದು, ನಡುಬೀದಿಯಲ್ಲಿ ಹೊರಟಾಗ ಅಕಸ್ಮಾತ್ ದೇವಸ್ಥಾನ ಕಂಡರೆ ಕಾಲನ್ನು ಚಪ್ಪಲಿಯಿಂದ ಅರ್ಧಕ್ಕೆ ಹೊರತೆಗೆದು ನಮಸ್ಕಾರ ಮಾಡೋದು. ಯಾರಾದರೂ ಭೆಟ್ಟಿಯಾದರೆ 'ಏನು? ಭೆಟ್ಟೀನೇ ಇಲ್ಲ. ಹೇಗಿದ್ದೀರಿ? ಮನೀಕಡೆ

ಬರ್ತೀನಿ' ಎಂಬ ಉಪಚಾರದ ಮಾತಾಡೋದು ಇತ್ಯಾದಿ. ಇವೆಲ್ಲ ಸದ್ಗೃಹಸ್ಥರ ಲಕ್ಷಣ. ಆದರೆ ಘೈರಪ್ಪ ಇವಾವುದನ್ನೂ ಮಾಡೋದಿಲ್ಲ. ಆ ಅರ್ಥದಲ್ಲಿ ಅವರು ಸದ್ಗೃಹಸ್ಥರಲ್ಲ!

ತಾವು ಚಹಾ ಕಾಫಿ ತಗೊಳ್ಳದಿದ್ರೂ, 'ಮನೀ ಕಡೆ ಬರ್ರೀಲ್ಲಾ' ಅಂತ ಕರೆಯದಿದ್ದರೂ ಅವರ ಮನಿಗೆ ನೀವು ಹೋಗೋ ಪ್ರಸಂಗ ಬಂದರೆ ಚೆನ್ನಾಗಿ ಆತಿಥ್ಯ ಮಾಡ್ತಾರೆ. ನೀವು ಬರುವುದನ್ನು ತಮ್ಮ ಶ್ರೀಮತಿಗೆ ತಿಳಿಸಿ ನಿಮಗೆ ರುಚಿಸಬಹುದಾದ ಪದಾರ್ಥಗಳನ್ನು ತಯಾರಿಸ ಹೇಳ್ತಾರೆ.

ಬೆಳಗಿನ ಸಮಯ : ಅವರ ಮನೆಯಲ್ಲಿ ನೀವು ಉಪ್ಪಿಟ್ಟನ್ನೋ, ಅವಲಕ್ಕಿಯನ್ನೋ ತಿನ್ನುತ್ತಾ ಇದ್ದೀರಿ. ಆಗ ಅವರು 'ಉಪ್ಪಿನಕಾಯಿ, ಚಟ್ನಿಪುಡಿ ಬಂದಿಷ್ಟು ಬೇಕೆ? ಇವರಲ್ಲಿ ಮೆಣಸಿನಕಾಯಿ ಹಾಕಿಲ್ಲ. ಯಾಕಂದ್ರೆ ನಾನು ತಿನ್ನೋಲ್ಲ' ಎನ್ನುತ್ತಾರೆ. 'ಏನು ಕಾರಣ?' ಎಂದು ನಿಮ್ಮ ಪ್ರಶ್ನೆ. ಅದಕ್ಕೆ ಉತ್ತರವಾಗಿ 'ಮೆಣಸಿನಕಾಯಿಯಲ್ಲಿ ಯಾವುದೇ ವಿಟಮಿನ್ ಸತ್ವ ಇರುವುದಿಲ್ಲ. ನಾನು ತಿಳ್ಕೊಂಡಿದೀನಿ' ಎನ್ನುತ್ತಾರೆ. ನಮಗೆ ಯಾವುದಾದರೊಂದು ಖಾದ್ಯ ಪದಾರ್ಥ ಬೇಡವಾಗಿದ್ದರೆ, ಸೇರದಿದ್ದರೆ ಅಲ್ಲಿಗೆ ಬಿಟ್ಟು ಬಿಡುತ್ತೇವೆ. ಘೈರಪ್ಪ ಅದರ ಪೂರ್ವಾಪರಾನೆಲ್ಲಾ ಶೋಧಿಸ ಹೋಗ್ತಾರೆ. ಬೇರಾವುದೇ ವಿಷಯವಿದ್ದರೂ ಹಾಗೇನೆ.

ಇನ್ನು ಅವರೇ ನಿಮ್ಮ ಮನೆಗೆ ಅತಿಥಿಯಾಗಿ ಬಂದರೆಂದು ತಿಳಿಯಿರಿ. ನಿಮಗೊಂದು ಗುಟ್ಟು ಹೇಳ್ತೀನಿ. ಒಳ್ಳೊಳ್ಳೇ ಸಿಹಿ ಭಕ್ಷ್ಯ ಮಾಡಿಸಿರಿ. ಹೋಳಿಗೆ, ಲಾಡು, ಪಾಯಸ ಯಾವುದೂ ಆದೀತು. ಸಿಹಿ ಎಂದರೆ ಅವರಿಗೆ ಪಂಚಪ್ರಾಣ....

ಬಹುಶಃ ೧೯೫೦ರಲ್ಲಿ 'ನುಡಿ'ಯಲ್ಲಿ ಮುದ್ರಿತವಾಗಿರುವ ನ.ಸು. ಹರ್ಡೀಕರರನ್ನು ಕುರಿತಾದ ಬರಹವೇ ಹಾವನೂರರು ಮೊತ್ತಮೊದಲು ಪ್ರಕಟಿಸಿದ ವ್ಯಕ್ತಿಚಿತ್ರಣವಿರಬೇಕು. ನಂತರದ ದಿನಗಳಲ್ಲಿ ಕರ್ಮವೀರ, ಕಸ್ತೂರಿ ಮುಂತಾದ ಪತ್ರಿಕೆಗಳಿಂದ ಹಿಡಿದು ನಿಧನರಾಗುವ ಕೆಲವು ವರ್ಷಗಳ ಮೊದಲು ಉದಯವಾಣಿಯಲ್ಲಿ ಪ್ರಕಟವಾಗುತ್ತಿದ್ದ 'ಹೀಗೊಂದು ಹಳೇಸುದ್ದಿ' ಎಂಬ ಅಂಕಣದವರೆಗೆ ಹಲವು ಪತ್ರಿಕೆಗಳಲ್ಲಿ ಅವರು ವ್ಯಕ್ತಿಚಿತ್ರಗಳನ್ನು ಬರೆದ್ದಿದೆ. ಮೈಸೂರು ವಿಶ್ವವಿದ್ಯಾಲಯದ ಕನ್ನಡ ವಿಶ್ವಕೋಶದಲ್ಲಿ ಹಾವನೂರರು ದೊಡ್ಡಸಂಕಣ್ಣ ನಾಯಕ, ಗುಳವಾಡಿ, ವೆಂಕಟರಾವ್, ಹಾಗೂ ಚುರಮುರಿ ಶೇಷಗಿರಿರಾವ್‌ರನ್ನು ಕುರಿತು ಬರೆದ ವ್ಯಕ್ತಿಚಿತ್ರಗಳಿವೆ.

ಪುಸ್ತಕ ರೂಪದಲ್ಲಿ ಹೊರಬಂದವನ್ನು ಲೆಕ್ಕಕ್ಕೆ ಹಿಡಿಯುವುದಾದರೆ ೧೯೪೯ರಲ್ಲಿ ಧಾರವಾಡದ ಪರಾಗ ಪ್ರಕಾಶನದಿಂದ ಪ್ರಕಟವಾದ 'ಕರ್ತವ್ಯಾನಂದ ಶ್ರೀ ರಾಮಪುರೋಹಿತರು' ಮೊತ್ತ ಮೊದಲ ಕೃತಿ. ಕೆಲವು ವ್ಯಕ್ತಿಗಳ ಬಗ್ಗೆಯಂತೂ ಅವರು ಒಂದಕ್ಕಿಂತ ಹೆಚ್ಚು ಬಾರಿ ಬರೆದಿದ್ದಾರೆ. ಉದಾಹರಣೆಗೆ ಗಳಗನಾಥರ ಬಗ್ಗೆ ಅವರು ಮೊದಲು ಬರೆದ ೧೦ ಪುಟಗಳ ಲೇಖನ ೧೯೬೭ರಲ್ಲಿ 'ಕಸ್ತೂರಿ'ಯಲ್ಲಿ ಪ್ರಕಟವಾಯಿತು.

ಮತ್ತೆ ೧೯೭೨ರಲ್ಲಿ ಇದು ೧೨೦ ಪುಟಗಳಿಗೆ ವಿಸ್ತಾರಗೊಂಡು ಕನ್ನಡ ಸಾಹಿತ್ಯ ಪರಿಷತ್ತಿನಿಂದ 'ಗಳಗನಾಥ ಮಾಸ್ತರರು' ಎಂಬ ಹೆಸರಿನಲ್ಲಿ ಹೊರಬಂದಿದೆ. ಹತ್ತುವರ್ಷ ಸಂದ ಬಳಿಕ ರಾಷ್ಟ್ರೋತ್ಥಾನ ಪರಿಷತ್ತಿನ 'ಭಾರತ ಭಾರತೀ ಪುಸ್ತಕ ಮಾಲೆ'ಗಾಗಿ ಮತ್ತೆ ಗಳಗನಾಥರನ್ನೇ ಕುರಿತು ಬರೆಯುವ ಅವಕಾಶ ಒದಗಿತು. ಅಲ್ಲಿಯೂ ಈ ಸರಣಿಯೇನೂ ಮುಗಿಯಲಿಲ್ಲ. ೨೦೦೦ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಗೆ ಮತ್ತೆ 'ಕಾದಂಬರಿಕಾರ ಗಳಗನಾಥರು' ಕೃತಿಯನ್ನು ಅವರೇ ಬರೆದುಕೊಡಬೇಕಾಯ್ತು! ಇದೇ ರೀತಿಯಲ್ಲಿ ಕಿಟೆಲ್, ಬಿ.ಎಲ್. ರೈಸ್ ಮುಂತಾದವರ ಬಗ್ಗೆ ಒಂದಕ್ಕಿಂತ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ. ಎಚ್.ಜೆ. ಭಾಭಾ ಮತ್ತು ಸೋದೆ ವಾದಿರಾಜರ ಬಗ್ಗೆ ಅವರು ಇಂಗ್ಲಿಷಿನಲ್ಲಿ ಕೃತಿ ರಚಿಸಿದ್ದಾರೆ. ಕಿಟೆಲರ ಬಗ್ಗೆ ಇವರು ಬರೆದ ಗ್ರಂಥವನ್ನು ಎಸ್.ಟಿ. ಭಟ್ ಎಂಬುವರು ಜರ್ಮನ್ ಭಾಷೆಗೆ ಅನುವಾದಿಸಿದ್ದಾರೆ.

ನಾಟಕ ಹಾಗೂ ರೇಡಿಯೋ ನಾಟಕಗಳು

೧೯೪೧ರಷ್ಟು ಹಿಂದಿನಿಂದಲೇ ಹಾವನೂರರು ಏಕಾಂಕಗಳು ಮತ್ತು ರೇಡಿಯೋ ನಾಟಕಗಳನ್ನು ರಚಿಸುತ್ತಾ ಬಂದಿದ್ದರು. 'ಉಗ್ರಪ್ಪನ ಉದ್ಧಾರ' ಮತ್ತು 'ಕಲಾವಿದನ ಕೂಡ' ಎಂಬ ಏಕಾಂಕಗಳು 'ತೇಜಸ್ವಿ' ಎಂಬ ಪತ್ರಿಕೆಯಲ್ಲಿ ಕ್ರಮವಾಗಿ ೧೯೪೧ ಮತ್ತು ೧೯೪೪ರಲ್ಲಿ ಪ್ರಕಟವಾದವು. 'ಹೊಸ ಸೀರೆಗಾಗಿ', 'ಆನಂದ ಭವನದ ಇತಿವೃತ್ತ,' 'ಯುಗಾದಿಯ ಉಡುಗೊರೆ', 'ಜನ್ಮ ಕುಂಡಲಿ' ಮುಂತಾದವು ಶುದ್ಧ ರೇಡಿಯೋ ರೂಪಗಳಾದರೆ 'ಹೆಂಡತಿ ಹೀಗಾದರೆ,' '೨೫ನೇ ವರ್ಷ', 'ಐದರಿಂದ ಐದರವರೆಗೆ' ಮೊದಲಾದವು ರೇಡಿಯೋದಲ್ಲಿ ಪ್ರಸಾರವಾಗುವುದರೊಂದಿಗೆ ಮೊಗವೀರ, ನಗುವ ನಂದ, ರಾಯಭಾರಿ ಮುಂತಾದ ಪತ್ರಿಕೆಗಳಲ್ಲೂ ಬೆಳಕು ಕಂಡಿವೆ.

ಇತರೆ

ಅವಿವಾಹಿತ ಹೆಣ್ಣುಮಕ್ಕಳ ಬದುಕು, ಬವಣೆಯನ್ನು ಕುರಿತಂತೆ ಹಾವನೂರರು ೧೯೫೯ರಷ್ಟು ಹಿಂದೆಯೇ 'ಅವಿವಾಹಿತೆ' ಎಂಬ ಕೃತಿಯನ್ನು ರಚಿಸಿದ್ದಾರೆ. ವಿವಾಹದ ವಯಸ್ಸಿನ ಕನ್ಯೆಯರ ಮಾನಸಿಕ ತುಮುಲಗಳು, ಬಾಹ್ಯ ಪ್ರವೃತ್ತಿ, ಅದಕ್ಕೆ ಕಾರಣಗಳು ಹಾಗೂ ಪರಿಹಾರ ಇತ್ಯಾದಿಗಳನ್ನು ಕುರಿತು ಅವರು ಇಲ್ಲಿ ಚರ್ಚಿಸಿದ್ದಾರೆ. ಬಹುಶಃ ೨೦ನೇ ಶತಮಾನದ ಮಧ್ಯಭಾಗದಲ್ಲಿ ಅವಿವಾಹಿತೆಯರನ್ನು ಕುರಿತಂತೆ ಪ್ರಕಟವಾಗಿರುವ ಏಕೈಕ ಕೃತಿ ಇದು ಎನ್ನಬಹುದು. ೧೯೯೬ರಲ್ಲಿ ಇವರ 'ಪ್ರೇಕ್ಷಣೀಯ ಕರ್ನಾಟಕ' ಪ್ರಕಟವಾಗಿದೆ.

❑

ಅಧ್ಯಾಯ – ೫

ಸಂಘಟಕ

ನಾಲ್ಕಾರು ಯೋಜನೆಗಳನ್ನು ಏಕಕಾಲಕ್ಕೆ ರೂಪಿಸುವುದು, ಅದಕ್ಕೆ ಅಗತ್ಯವಾದ ಜನ, ಧನ, ಮಾಹಿತಿ ಮುಂತಾದವುಗಳನ್ನು ಸಂಗ್ರಹಿಸುವುದು; ಹೊಗಳಿಯೋ, ಬೈದೋ ಅಥವಾ ಚುಚ್ಚು ಮಾತನಾಡಿಯೋ ಜನರಿಂದ ಕೆಲಸ ಮಾಡಿಸುವುದು, ಎಲ್ಲಕ್ಕಿಂತ ಹೆಚ್ಚಾಗಿ ಕೆಲಸ ಮಾಡುವುದರಲ್ಲಿ ಎಲ್ಲರಿಗಿಂತ ಒಂದು ಹೆಜ್ಜೆ ಮುಂದಿರುವುದು ಇದೆಲ್ಲಾ ಹಾವನೂರರಿಗೆ ಲೀಲಾಜಾಲ. ಸಮಾನ ಆಸಕ್ತರನ್ನು ಒಟ್ಟಿಗೆ ಸೇರಿಸಿಕೊಂಡು ಲಗುಬಗೆಯಿಂದ ಕೆಲಸ ಕಾರ್ಯ ಗಳನ್ನು ಮಾಡುವುದರಲ್ಲಿ ಅವರಿಗೆ ತುಂಬು ಉತ್ಸಾಹ. ಮುಂಬೈ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾಗ ಅವರು "ಮುಂಬೈ ವಿಶ್ವವಿದ್ಯಾಲಯದ ಭಾಷಾ ವಿಭಾಗಗಳ ಒಕ್ಕೂಟ (COBULD) ಎಂಬ ಸಂಘಟನೆಯಲ್ಲಿ ಪ್ರಮುಖ ಹುದ್ದೆಯನ್ನು ಅವಿರೋಧವಾಗಿ ಆರಿಸಿಬಂದು ನಿರ್ವಹಿಸಿದ್ದರು. ಗ್ರಂಥ ಪಾಲಕರಾಗಿ ಅವರು ಸ್ಥಾಪಿಸಿದ BOSLAದ ವಿವರಗಳನ್ನು ಈಗಾಗಲೇ ನೋಡಿದ್ದೇವೆ. ಸಾಹಿತ್ಯಕ ವಲಯದಲ್ಲಿಯೂ ಅವರು ಇಂತಹುದೇ ಪ್ರಯತ್ನಗಳನ್ನು ಬಾಲ್ಯದಿಂದಲೂ ನಡೆಸಿಕೊಂಡು ಬಂದ್ದದ್ದಿದೆ.

ಹೈಸ್ಕೂಲಿನಲ್ಲಿ ಓದುತ್ತಿದ್ದ ಕಾಲದಲ್ಲಿಯೇ (೧೯೪೩) ಅವರು 'ಕಿರಿಯ ಸಾಹಿತಿಗಳ ಬಳಗ' ವನ್ನು ಸ್ಥಾಪಿಸಿದ್ದಲ್ಲದೆ ಒಂದು ಸಮ್ಮೇಳನವನ್ನೂ ನಡೆಸಿದ್ದರಂತೆ. ೧೯೫೩ರ ಸುಮಾರಿಗೆ ಹುಬ್ಬಳ್ಳಿ ಯಲ್ಲಿ ಸೇಲ್ಸ್‌ಟ್ಯಾಕ್ಸ್ ಇಲಾಖೆಯಲ್ಲಿ ನೌಕರಿಯಲ್ಲಿದ್ದಾಗ 'ಸಾಹಿತ್ಯ ಮಂಟಪ' ಎಂಬ ಸಂಸ್ಥೆ ಯನ್ನು ಅವರು ಆರಂಭಮಾಡಿದರು. ಡಿ.ಎಸ್.ಕರ್ಕಿ, ಪಾ.ವೆಂ. ಆಚಾರ್ಯ ಮುಂತಾದ ಹಿರಿಯ ಸಾಹಿತಿಗಳು ಇದರ ಪ್ರತಿ ತಿಂಗಳ ಸಭೆಯಲ್ಲಿ ಭಾಗವಹಿಸುತ್ತಿದ್ದುದುಂಟು. ಇದೇ ಸಂದರ್ಭದಲ್ಲಿ ಹವ್ಯಾಸಿ ರಂಗಭೂಮಿಯ ಚಟುವಟಿಕೆಗಳಲ್ಲಿ ಹಾವನೂರ ದಂಪತಿಗಳು ಸಕ್ರಿಯವಾಗಿ ತೊಡಗಿಕೊಂಡರು. ಶ್ರೀರಂಗರು ಮತ್ತು ಜಿ.ಬಿ. ಜೋಷಿಯವರ ಮುಂದಾಳ್ತನದಲ್ಲಿ ಉತ್ತರ ಕರ್ನಾಟಕದಲ್ಲಿ ಪ್ರವರ್ಧಮಾನಕ್ಕೆ

'ಕಣ್ಣುಗಳು' ನಾಟಕದಲ್ಲಿ ಹಾವನೂರ ದಂಪತಿಗಳು

ಬರುತ್ತಿದ್ದ ಹವ್ಯಾಸಿ ರಂಗಭೂಮಿಗೆ ಇವರು ಇಂಬುಕೊಟ್ಟರು. ವಿರೂಪಾಕ್ಷನಾಯಕ, ಮಾಲತಿಕಟ್ಟಿ, ಭೀಮಸೇನಜೋಶಿ, ಹಾವನೂರ ದಂಪತಿಗಳು - ಮುಂತಾದವರನ್ನು ಒಳಗೊಂಡ 'ಕರ್ನಾಟಕ ಕಲೋದ್ಧಾರಕ ಸಂಘ' ಧಾರವಾಡದ ಪ್ರಸಿದ್ಧ ರಂಗಾಸಕ್ತರ ವೇದಿಕೆ. ಇತರ ಊರುಗಳಿಗೂ ತೆರಳಿ ನಾಟಕಗಳನ್ನು ಪ್ರದರ್ಶಿಸುವಷ್ಟು ಕ್ರಿಯಾಶೀಲವಾಗಿತ್ತು ಇದರ ಚಟುವಟಿಕೆಗಳು.

ಮುಂಬೈ ವಾಸ ವೇಳೆಗೆ (೧೯೬೧) ಹಾವನೂರರ ಸಂಘಟನ ಶಕ್ತಿಗೆ ಮತ್ತಷ್ಟು ಇಂಬು ದೊರೆಯಿತು. 'ಸಾಹಿತ್ಯ ಕೂಟ'ಕ್ಕೆ ಅವರು ಜೀವತುಂಬಿದರು. ಸಿ.ಎಂ. ಕುಲಕರ್ಣಿ, ಸಿ.ಕೆ. ದೀಕ್ಷಿತ್, ರಾಮಚಂದ್ರ ಉಚ್ಚಿಲ್ ಮುಂತಾದವರನ್ನು ತಮ್ಮ ತೆಕ್ಕೆಗೆ ಹಾವನೂರರು ಸೆಳೆದುಕೊಂಡರು. ಶಂ.ಬಾ. ಜೋಶಿಯವರ ಕೃತಿಗಳ ಬಗ್ಗೆ 'ಸಾಹಿತ್ಯ ಕೂಟ' ವಿಚಾರ ಸಂಕಿರಣವನ್ನು ನಡೆಸಿತು. ಸ್ವಭಾವತಃ ಅಂತಃಮುಖಿಯಾಗಿದ್ದ ಬಲ್ಲಾಳ ಸಭಾಕಂಪನವನ್ನು ದೂರಗೊಳಿಸಿ ಅವರನ್ನು ವಾಗ್ಮಿಯನ್ನಾಗಿಸಿದ ಹೆಗ್ಗಳಿಕೆ ಹಾವನೂರರದೇ!

ಮುಂಬೈನ ಕನ್ನಡ ಕಾರ್ಯಕ್ರಮ ಒಂದರಲ್ಲಿ

ಪುಣೆಯ ಮರಾಠಿ-ಕನ್ನಡ ಸ್ನೇಹವರ್ಧನ ಕೇಂದ್ರ ಹಾವನೂರರ ಕಲ್ಪನೆಯ ಕೂಸು. ಸಾಂಸ್ಕೃತಿಕವಾಗಿ ಅನೇಕ ಸಾಮ್ಯಗಳನ್ನು ಹೊಂದಿದ್ದರೂ ರಾಜಕೀಯ ಕಾರಣಗಳಿಗಾಗಿ ಸದಾ ಕಚ್ಚಾಡುವ ಮನೋಸ್ಥಿತಿಯಲ್ಲಿರುವ ಈ ಎರಡೂ ರಾಜ್ಯದವರನ್ನು ಭಾವನಾತ್ಮಕವಾಗಿ ಒಂದುಗೂಡಿಸುವ ಉದಾತ್ತ ಉದ್ದೇಶದಿಂದ ಈ ಸಂಸ್ಥೆ ಆರಂಭವಾಯಿತು. ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರಾಧ್ಯಾಪಕರಾಗಿದ್ದುದರಿಂದ ಸಹಜವಾಗಿಯೇ ಅವರು ಮಹಾರಾಷ್ಟ್ರ ಸರ್ಕಾರದ ಕನ್ನಡ ಪಠ್ಯಪುಸ್ತಕವಾದ 'ಬಾಲಭಾರತಿ'ಯ ಸಂಪಾದಕ ಮಂಡಳಿಯ ಅಧ್ಯಕ್ಷರಾಗಿದ್ದರು (೧೯೮೫-೧೯೯೨). ವಿಶ್ವವಿದ್ಯಾಲಯದಿಂದ ನಿವೃತ್ತರಾಗಿ ಪುಣೆಗೆ ಹೋಗಿ ನೆಲೆಸಿದ ಮೇಲೆ ಪಠ್ಯಪುಸ್ತಕದ ಜೊತೆ ಜೊತೆಗೇ ಸ್ನೇಹವರ್ಧನ ಕೇಂದ್ರದ ಚಟುವಟಿಕೆಗಳೂ ಗರಿಗೆದರಿದವು. ೧೯೮೯ರ ಏಪ್ರಿಲ್ ೯ರಂದು ಮರಾಠಿಯ ಜ್ಞಾನಪೀಠ

ಪ್ರಶಸ್ತಿ ವಿಜೇತ ಸಾಹಿತಿ ಪು.ಲ. ದೇಶಪಾಂಡೆಯವರ ಅಭಿನಂದನ ಸಮಾರಂಭ ದೊಂದಿಗೆ ಕೇಂದ್ರ ವಿಧ್ಯುಕ್ತವಾಗಿ ಆರಂಭವಾಯಿತು. ಡಾ. ಅನಂತ ತೋರೋ, ಶ್ರೀನಿವಾಸ ಹಾವನೂರ ಮತ್ತು ಡಾ. ದತ್ತಾತ್ರೇಯ ಪುಂಡೆ ಕೇಂದ್ರದ ನಿರ್ದೇಶಕರು. ಸಂಗೀತ ನಾಟಕ ಅಕಾಡೆಮಿಯ ಆಗಿನ ಅಧ್ಯಕ್ಷ ಗಿರೀಶ್ ಕಾರ್ನಾಡ್ ಹಾಗೂ ಮುಂಬೈ ಮತ್ತು ಪೂನಾ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಭಾಗವಹಿಸಿದ್ದ ಈ ಸಮಾರಂಭದಲ್ಲಿ ಪೂನಾ ವಿಶ್ವವಿದ್ಯಾಲಯದಲ್ಲಿ ಕನ್ನಡ – ಮರಾಠಿ ಸಂಯುಕ್ತ ಅಧ್ಯಯನಕ್ಕಾಗಿ ಪೀಠವೊಂದನ್ನು ಸ್ಥಾಪಿಸುವಂತೆ ಗುಲಬರ್ಗಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಡಾ. ಹಾ.ಮಾ. ನಾಯಕರು ಸಲಹೆ ಮಾಡಿದರು. ತಕ್ಷಣವೇ ಕೇಂದ್ರವು ತನ್ನ ಪತಿಯಿಂದ ೫೦ ಸಾವಿರ ರೂ.ಗಳ ದೇಣಿಗೆಯನ್ನು ಈ ಕಾರ್ಯಕ್ಕಾಗಿ ಘೋಷಿಸಿತು!

ಪೂನಾ ವಿಶ್ವವಿದ್ಯಾಲಯದ ಆಗಿನ ಉಪಕುಲಪತಿಗಳಾದ ಡಾ. ಗುಪ್ತೆಯವರ ಅಧ್ಯಕ್ಷತೆಯಲ್ಲಿ ಎಂಟು ಮಂದಿ ಪ್ರಸಿದ್ಧ ಸಾಹಿತಿಗಳು, ಶಿಕ್ಷಣ ತಜ್ಞರು ಮತ್ತು ದಾನಿಗಳ ಸಮಿತಿಯೊಂದು ರಚನೆಯಾಯಿತು. ಸುಮಾರು ೧೫ ಲಕ್ಷ ರೂ.ಗಳ ವೆಚ್ಚದಲ್ಲಿ ಈ ಪೀಠವನ್ನು ಸ್ಥಾಪಿಸುವ ಚಿಂತನೆ ಹರಳುಗಟ್ಟಿ ತೊಡಗಿತು. ಕೆಳಕಂಡ ಕೆಲವು ಯೋಜನೆಗಳನ್ನು ಕೇಂದ್ರವು ಕೈಗೆತ್ತಿಕೊಳ್ಳಬಯಸಿತು:

೧. ಸಂತ ಮತ್ತು ದಾಸ ಸಾಹಿತ್ಯಗಳ ತೌಲನಿಕ ಅಧ್ಯಯನ, ಅಂತರ ಭಾಷಾ ಅನುವಾದದ ಸಮಸ್ಯೆಗಳು ಮುಂತಾದ ವಿಷಯಗಳನ್ನು ಕುರಿತು ವಿಚಾರ ಸಂಕಿರಣಗಳು ಮತ್ತು ಕಾರ್ಯಾಗಾರಗಳ ಆಯೋಜನೆ.

೨. ಆಸಕ್ತ ಮಹಾರಾಷ್ಟ್ರೀಯರಿಗೆ ಕನ್ನಡವನ್ನು ಕಲಿಸುವ ನಾಲ್ಕು ತಿಂಗಳ ಸರ್ಟಿಫಿಕೇಟ್ ಕೋರ್ಸ್.

೩. ಮರಾಠಿ – ಕನ್ನಡದ ನಡುವಣ ಆದಾನ – ಪ್ರದಾನಗಳ ಬಗ್ಗೆ ವಿವರ ನೀಡುವ ಪರಾಮರ್ಶನ ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರದ ಸ್ಥಾಪನೆ.

ಸ್ನೇಹವರ್ಧನ ಕೇಂದ್ರದ ಸಮಾರಂಭದಲ್ಲಿ ಶಿವರಾಮ ಕಾರಂತರು

೪. ಎರಡೂ ಭಾಷೆಗಳಲ್ಲಿ ಕೃತಿಗಳ ಪ್ರಕಟಣೆ.

೫. ಕನ್ನಡ – ಮರಾಠಿ ಸಂಸ್ಕೃತಿ, ಕಲೆ, ಧರ್ಮ, ಜಾನಪದ ಮುಂತಾದ ವಿಷಯಗಳಲ್ಲಿ ಸಂಶೋಧನೆ ಮಾಡಬಯಸುವವರಿಗೆ ಮಾರ್ಗದರ್ಶನ ಮತ್ತು ಧನ ಸಹಾಯ.

ಎರಡೂ ರಾಜ್ಯಗಳ ಪ್ರಮುಖ ವಿದ್ವಾಂಸರುಗಳನ್ನು ವಿಷಯ ತಜ್ಞರಾಗಿರಿಸಿಕೊಂಡು ಈ ಯೋಜನೆಗಳಲ್ಲಿ ಕೆಲವನ್ನಾದರೂ ಕಾರ್ಯರೂಪಕ್ಕೆ ತರುವಲ್ಲಿ ಹಾವನೂರರು ಯಶಸ್ವಿಯಾದರು. (ವೈಯಕ್ತಿಕ ನೆಲೆಯಲ್ಲಿಯಂತೂ ಈ ಕಾರ್ಯವನ್ನು ಹಾವನೂರರು ನಿರಂತರವಾಗಿ ಮಾಡುತ್ತಲೇ ಬರುತ್ತಿದ್ದರು. ಮುರಳೀಧರ ಜಗತಾಫ ಎಂಬ ಲೇಖಕರು ಹಿಂದಿ ಭಾಷೆಯಲ್ಲಿ 'ಮಹಾತ್ಮ ಫುಲೆ'ಯವರ ಬಗ್ಗೆ ಕೃತಿ ರಚಿಸಿದ್ದರು. ಕನ್ನಡದಲ್ಲಿಯೂ ಫುಲೆಯವರ ಬಗ್ಗೆ ಒಂದು ಪುಸ್ತಕವೂ ರಚನೆಯಾಗದಿರುವುದನ್ನು ಅವರ ಗಮನಕ್ಕೆ ತಂದ ಹಾವನೂರರು ಆ ಪುಸ್ತಕದ ವಿಸ್ತೃತ ಕನ್ನಡ ಆವೃತ್ತಿಯನ್ನು ನವಕರ್ನಾಟಕ ಪ್ರಕಾಶನದ ಮೂಲಕ ೧೯೯೪ರಲ್ಲಿ ಪ್ರಕಟಗೊಳ್ಳುವಂತೆ ಮಾಡಿದರು.)

ಇಂದಿಗೂ ಸ್ನೇಹ ಸಂವರ್ಧನ ಕೇಂದ್ರವು ಮರಾಠಿಗಳು ಮತ್ತು ಕನ್ನಡಿಗರನ್ನು ಬೆಸೆಯುವ ಕೆಲಸವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ. ಹಾವನೂರರು ಸಕ್ರಿಯವಾಗಿ ತೊಡಗಿಕೊಂಡಿದ್ದ ಮತ್ತೊಂದು ಸಂಘಟನೆ 'ಕನ್ನಡ ಪತ್ರಿಕಾಭಿಸರಣ ಸಂಸ್ಥೆ.' ಪತ್ರಿಕಾ ಪ್ರಪಂಚದ ಕುಲಗೋತ್ರವನ್ನು ಕಂಡುಹಿಡಿಯುವುದಕ್ಕಾಗಿ ೧೯೭೭ರಷ್ಟು ಹಿಂದೆ ಈ ಸಂಸ್ಥೆ ಅಸ್ತಿತ್ವದಲ್ಲಿ ಬಂತು. ಇದ್ದವರು ನಾಲ್ಕೇ ಜನ. ಮೋಹನ ಗ. ಹೆಗಡೆ ಪ್ರಮುಖ ಸಂಗ್ರಹಕಾರರು. ಅನಂತರ ಅವರ ಜೊತೆಗೂಡಿದರು. ಪಂಡಾರಿ ಚೆಲ್ಲಪ್ಪನ್ ಮತ್ತು ಆಮೇಲೆ ಬಿ. ಶ್ಯಾಮಸುಂದರ್. ಹಾವನೂರರು ಯೋಜನೆಯನ್ನು ರೂಪಿಸಿ ಇಡೀ ಕಾರ್ಯಕ್ರಮದ ನಿರ್ದೇಶನವನ್ನು ನಿರ್ವಹಿಸಿದರು. ಇವರೆಲ್ಲ ಬೇರೆ ಬೇರೆ ಊರುಗಳಲ್ಲಿದ್ದವರಾದರೂ ಕಾಲಕಾಲಕ್ಕೆ ಭೇಟಿಯಾಗಿ ವಿಚಾರ ವಿನಿಮಯ ಮಾಡುತ್ತಿದ್ದರು. ಏಳೆಂಟು ವರ್ಷಗಳ ಕಾಲ ಪತ್ರಿಕಾ ಸಂಗ್ರಹಗಳಿರುವ ಸ್ಥಳಗಳಿಗೆ ಸ್ವತಃ ಹೋಗಿಯೋ, ಪತ್ರವ್ಯವಹಾರ ಮಾಡಿಯೇ ಮಾಹಿತಿ ಸಂಗ್ರಹಿಸಲಾಯಿತು. ಇದರ ಫಲವೇ ಹಿಂದೆ ಪ್ರಸ್ತಾಪಿಸಿದ 'ಕನ್ನಡ ಪತ್ರಿಕಾ ಸೂಚಿ'ಯ ಪ್ರಕಟಣೆ.

ಮಂಗಳೂರಿನಲ್ಲಿ ಇದ್ದ ಸಂದರ್ಭದಲ್ಲಿ ಹಾವನೂರರು 'ಸಂವಾದ' ಎಂಬ ಸಂಘಟನೆಯನ್ನು ಹುಟ್ಟು ಹಾಕಿದರು. ಡಾ. ಜಲಜಾಕ್ಷಿ, ಬಿ.ಎಂ. ರೋಹಿಣಿ, ಡಾ. ಮೀನಾಕ್ಷಿ ರಾಮಚಂದ್ರ ಮುಂತಾದ ಸಹ ಸಂಶೋಧಕರ ನೆರವಿನಿಂದ ಕನ್ನಡ ಸಾಹಿತ್ಯ ಮಾಹಿತಿ ಕೋಶ, ಹಳಗನ್ನಡದಲ್ಲಿಯ ಪ್ರಾಚೀನಶಾಸ್ತ್ರಗಳ ಮಾಹಿತಿ, ಕನ್ನಡ ಪತ್ರಿಕಾ ಮಾಹಿತಿ, ಹರಿದಾಸ ಸಾಹಿತ್ಯ ಮಾಹಿತಿ, ಯಕ್ಷಗಾನ ಪ್ರಸಂಗ ಮಾಹಿತಿಕೋಶ ಮುಂತಾದವುಗಳನ್ನು ಸಿದ್ಧಪಡಿಸಿ kannadaliteratureinfo.org ಎಂಬ ವೆಬ್‌ಸೈಟನ್ನು ಸಿದ್ಧಪಡಿಸುವುದು ಅವರ ಯೋಜನೆ. ಇದಕ್ಕೆ ಪ್ರಮುಖವಾದ ಆರ್ಥಿಕ ಬೆಂಬಲ ದೊರೆತಿದ್ದು ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಮೊಮ್ಮಗಳಾದ ಡಾ. ವಿ. ವಸಂತ ಶ್ರೀಯವರಿಂದ ಎಂಬುದನ್ನು ಅವರು ಕೃತಜ್ಞತೆಯಿಂದ ವರದಿಗಳಲ್ಲಿ ಸ್ಮರಿಸಿದ್ದಾರೆ. ❑

ಅಧ್ಯಾಯ – ೬

ವ್ಯಕ್ತಿತ್ವ

ಅಷ್ಟೇನೂ ಎತ್ತರವಲ್ಲದ, ತುಂಬಾ ಕುಳ್ಳೂ ಅಲ್ಲದ ಆಕೃತಿ; ದುಂಡುಮುಖ, ಕಪ್ಪುಬಣ್ಣದ ದಪ್ಪಕಟ್ಟಿನ ಕನ್ನಡಕದ ಒಳಗೆ ಮಿನುಗುವ ಕಣ್ಣುಗಳು. ಚೈತನ್ಯಶೀಲತೆಯೇ ಮೂರ್ತಿವೆತ್ತಂತಿರುವ ಹಾವಭಾವ, ಹಲವು ಹತ್ತು ವರ್ಷಗಳ ಕಾಲ ಮುಂಬೈ, ಮಂಗಳೂರು, ಪುಣೆ, ಬೆಂಗಳೂರುಗಳಲ್ಲಿ ವಾಸಿಸಿದ್ದರೂ ಸ್ವಲ್ಪವೂ ಬದಲಾಗದ ಅಪ್ಪಟ ಧಾರವಾಡ ಶೈಲಿಯ ಮಾತು; ಎಂದೂ ಕೋಪಗೊಳ್ಳದ, ಆದರೆ ಕೋಪಗೊಂಡಂತೆ ಸೊಗಸಾಗಿ ನಟಿಸಬಲ್ಲ ಕೀಟಲೆತನ–ಇವರೇ ಹಾವನೂರರು.

ನಿರಾಡಂಬರತೆ ಹಾವನೂರರ ಜೀವನದ ಮೂಲಸೂತ್ರ. ತಾವು ಅಂತರರಾಷ್ಟ್ರೀಯ ಮಟ್ಟದ ಸಂಶೋಧಕರು, ಎರಡೆರಡು ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿದ್ದವರು ಎಂಬ ಹಮ್ಮು ಅವರನ್ನು ಎಂದೂ ಕಾಡಿದ್ದಿಲ್ಲ. ದಂತದ ಗೋಪುರದಲ್ಲಿ ಕುಳಿತು ಯಃಕಶ್ಚಿತ್‌ಗಳಾದ ಜನಸಾಮಾನ್ಯರನ್ನು 'ಶ್ರೀಮದನುಗ್ರಹ' ದೃಷ್ಟಿಯಿಂದ ನೋಡುವ ಸಾಹಿತೀ ವರ್ಗಕ್ಕೆ ಅವರು ಎಂದೂ ಸೇರಿದವರಲ್ಲ. ಮಹಾನ್ ಸಂಶೋಧಕರಿಂದ ಮೊದಲುಗೊಂಡು ಹೋಟೆಲ್ ಮಾಣಿಯವರೆಗೆ ಎಲ್ಲರೊಂದಿಗೂ ಅವರದು ಒಂದೇ ರೀತಿಯ ಆತ್ಮೀಯ ನಡವಳಿಕೆ. ಅವರ ಸ್ನೇಹ ಸಂಪರ್ಕಕ್ಕೆ ಬಂದವರು ಯಾರೂ ಅದರಿಂದ ಬಿಡಿಸಿಕೊಳ್ಳಲು ಎಂದೂ ಬಯಸದಂತಹ ವ್ಯಕ್ತಿತ್ವ ಅವರದು.

ನೋಡಲು ಬಹಳ ಸರಳ ಎಂಬಂತೆ ಕಂಡರೂ ಹಾವನೂರರು ಬಹಳ ಶಿಸ್ತಿನ ಮನುಷ್ಯ. ಟೈಂ ಟೇಬಲ್ ಇಲ್ಲದೆ ಅವರು ಎಂದೂ ಬದುಕಿದವರೇ ಅಲ್ಲ. ದಿನಚರಿಯನ್ನು ಬರೆಯದೆ ಅವರು ಬರೆಯದೇ ಇದ್ದ ದಿನವೇ ಇಲ್ಲ. ಮಾಡಿದ ಕೆಲಸವನ್ನು ದಾಖಲಿಸುವುದು ಮಾತ್ರವಲ್ಲ, ಮರುದಿನದ ಕರ್ತವ್ಯಗಳನ್ನೂ; ಉದಾಹರಣೆಗೆ ಮುಂಬೈಯಲ್ಲಿ ಪಿಎಚ್.ಡಿ.ಗೆಂದು ಅಭ್ಯಾಸ ಮಾಡುತ್ತಿದ್ದಾಗ ಅವರ ಒಂದು ದಿನಚರಿಯ ಪುಟವನ್ನು ಸ್ವಲ್ಪ ನೋಡಿ:

> *"೮ ಬೆಳಗ್ಗೆ–ಉಪಹಾರ: ೮.೩೦ಕ್ಕೆ ವಾಕಿಂಗ್ ಕಂಪನಿ: ೮.೪೫ ಸಾಧನಾ. ೯. ಬ್ಯಾಗ್ ಚಪ್ಪಲಿ ರಿಪೇರಿ: ೯.೩೦ ಪಿಲಿಟ್ ಲೈಬ್ರರಿ: ೧೦.೩೦ ಮಾರ್ಷಲ್ ಜೊತೆಗೆ ಯೂನಿವರ್ಸಿಟಿ ಲೈಬ್ರರಿ. ೧೦.೪೫ ಪಾನಾಮೋಲ್‌ನಲ್ಲಿ ಬರುವ ಗುರುಗಳ ಭೇಟಿ: ೧೨ ಮಾಡರ್ನ್ ಹಿಂದೂ ಹೋಟೆಲ್: ಬಿಬ್ಲಿಯಾಗ್ರಾಫಿ ಬಗ್ಗೆ*

ಗುರುಗಳೊಡನೆ ಸಮಾಲೋಚನೆ; ೨.೩೦ ರೂಮ್; ೩.೪೫ ಮಾಟುಂಗ; ೪.೪೫ ರೂಮ್; ಬರವಣಿಗೆ...”

ನಂತರದಲ್ಲೂ ಅವರೇನು ಈ ಪದ್ಧತಿಯನ್ನು ಕೈಬಿಟ್ಟಿರಲಿಲ್ಲ. ಅವರ ಟೇಬಲ್‌ನ ಮೇಲೆ ಹಾಸಿದ್ದ ಗಾಜಿನ ಅಡಿಯಲ್ಲಿ ಒಂದು ಕಾಗದ ಸದಾ ಎದ್ದು ಕಾಣುವಂತಿರುತ್ತಿತ್ತು. ಅದರಲ್ಲಿದದ್ದು ಎರಡೇ ಮಾತು; ‘ವಾರಕ್ಕೆ ಎರಡು ಹೊಸ ಲೇಖನದ ಬರವಣಿಗೆ ಮತ್ತು ಮೂರು ಹಳೇದರ ತಿದ್ದುಪಡಿ.’ ಯೋಜನೆಗಳನ್ನು ಹಾಕುವುದರಲ್ಲಿ ಮತ್ತು ಸಮಯಕ್ಕೆ ಸರಿಯಾಗಿ ಅದನ್ನು ಮುಗಿಸುವುದರಲ್ಲಿ ಅವರಿಗೆ ಅವರೇ ಸಾಟಿ. ಅವಶ್ಯ ಬಿದ್ದರೆ ಬರವಣಿಗೆಗೆಂದೇ ಬೆಂಗಳೂರನ್ನು ಬಿಟ್ಟು ದೂರದ ಮುಂಬೈಗೋ ಅಥವಾ ಮಂಗಳೂರಿಗೂ ಹೋಗಿ ಕೂಡುತ್ತಿದ್ದದ್ದೂ ಉಂಟು. ಆ ಸಮಯದಲ್ಲಿ ಅವರ ಟೆಲಿಫೋನ್ ನಂ. ತಿಳಿದಿರುತ್ತಿದ್ದದ್ದು ಕೂಡಾ ಬೆರಳೆಣಿಕೆಯಷ್ಟೇ ಜನಕ್ಕೆ.

ಹಾವನೂರರು ಒಂದು ಪ್ರಬಲವಾದ ಅಯಸ್ಕಾಂತ. ಅವರ ಪ್ರೀತಿ, ಕಾರ್ಯಶೈಲಿಗೆ ಒಲಿದು ಅವರೆಡೆಗೆ ಬಗೆ ಬಗೆಯ ಜನ ಬರುತ್ತಿದ್ದರು; ಅವರೆಲ್ಲರಿಗೂ ಅವರವರ ಅಗತ್ಯಕ್ಕೆ ತಕ್ಕಂತೆ ಹಾವನೂರರ ಜೋಳಿಗೆಯಲ್ಲಿ ಜ್ಞಾನಭಿಕ್ಷೆ ಸದಾ ಸಿದ್ಧವಿರುತ್ತಿತ್ತು. ವಿಶೇಷವೆಂದರೆ ಅವರ ಸಂಪರ್ಕಕ್ಕೆ ಬಂದ ಕೆಲವೇ ದಿನಗಳಲ್ಲಿ ಎಂತಹ ಸಣ್ಣ ಕಬ್ಬಿಣದ ತುಂಡೂ ತಾನೇ ಒಂದು ಅಯಸ್ಕಾಂತವಾಗಿ ಬಿಡುತ್ತಿತ್ತು. ಯಾರಿಗೆ ಯಾವ ಕೆಲಸ ಮಾಡಲು ಸಾಧ್ಯ ಎಂಬುದನ್ನು ಅವರ ಬುದ್ಧಿ ಕ್ಷಣಾರ್ಧದಲ್ಲಿ ಗ್ರಹಿಸಿ ಬಿಡುತ್ತಿತ್ತು. ಪ್ರತಿಯೊಬ್ಬರಿಗೂ ಅವರವರ ಆಸಕ್ತಿ, ಶ್ರದ್ಧೆ, ಅನುಕೂಲಗಳಿಗೆ ತಕ್ಕಂತೆ ಯೋಜನೆಗಳನ್ನು ಹಾಕಿಕೊಡುವುದರಲ್ಲಿ ಅವರು ಎತ್ತಿದ ಕೈ. ಏನಿಲ್ಲದಿದ್ದರೆ ಓದುವ ಹವ್ಯಾಸವಿದ್ದರೂ ಸಾಕು, ತಮ್ಮ ಗ್ರಂಥ ಸಂಗ್ರಹದಿಂದ ಪುಸ್ತಕಗಳನ್ನು ಒಯ್ದು ಓದಿ ‘ಪರತ್ ತಂದು ಕೊಡಲು’ ಹೇಳುತ್ತಿದ್ದರು. ಬೆಂಗಳೂರಿನ ಬಸವನಗುಡಿಯ ಮನೆಯ ಎದುರಿದ್ದ ಹೋಟೆಲ್‌ನ ಮಾಣಿಗಳಿಗೆ ತಾವೇ ಕಾದಂಬರಿಗಳನ್ನು ಒಯ್ದು ಕೊಟ್ಟು ಓದಿಸುತ್ತಿದ್ದ ಮಹಾನುಭಾವ ಅವರು!

ಪಾಕಶಾಸ್ತ್ರ ಹಾವನೂರರಿಗೆ ಒಲಿದಿದ್ದ ಮತ್ತೊಂದು ಕಲೆ. ಅಡುಗೆ ಮಾಡುವುದರಲ್ಲಿ, ಮಾಡಿದ್ದನ್ನು ಇತರರಿಗೆ ಉಣಿಸುವುದರಲ್ಲಿ ಮತ್ತು ಸ್ವಾದಿಷ್ಟಕರವಾದ ತಿನಿಸುಗಳನ್ನು ಬೇರೆ ಬೇರೆಡೆಗಳಿಂದ ತಂದು ಆಪ್ತೇಷ್ಟರಿಗೆ ಹಂಚುವುದರಲ್ಲಿ ಅವರಿಗೆ ಮಹಾ ಸಂತೋಷ. ಅವರ ಮೇಜಿನ ಖಾನೆಗಳಲ್ಲಿ ಫೇಡೆಯ, ಸವಣೂರು ಖಾರದ ಡಬ್ಬಿಗಳು ಇಲ್ಲದ ದಿನವೇ ಇರಲಿಲ್ಲ ಎಂದರೆ ತಪ್ಪಲ್ಲ. ಯಾರಾದರೂ ಸಂಕೋಚದಿಂದ ‘ಬೇಡ ಸಾರ್’ ಎಂದು ಗಿಂಜಾಡಿದರೆ ‘ನಾನೇ ಖಾಸ್ ತಯಾರ್ ಮಾಡಿದೀನ್ರೀ’ ಎಂತಲೋ ಅಥವಾ ‘ಅಮೆರಿಕೆಯಲ್ಲಿ ಇಂದು ನನಗೊಬ್ಬ ಮೊಮ್ಮಗ ಹುಟ್ಟಿದ’ ಎಂದೋ, ಇನ್ನೂ ಕೆಲವೊಮ್ಮೆ ‘ಇಂದು ನನ್ನ ಹುಟ್ಟಿದ ದಿನ’ ಎಂದೋ ಬಹಳ ಸುಲಭವಾಗಿ ಒಂದು ಸುಳ್ಳಿನ ಬಾಣ ಬಿಟ್ಟು (ಅಪದ್ಧಕ್ಕೆ ಅಪ್ಪಣೇನೇ?!) ಸಿಹಿ ತಿನ್ನಿಸುತ್ತಿದ್ದರು. ಮಕ್ಕಳನ್ನು ಕಂಡರಂತೂ ಬಹಳ ಪ್ರೀತಿ. ಐದು ವರ್ಷದ ಒಳಗಿನ ಮಕ್ಕಳ ಫೋಟೋಗಳನ್ನು ಸಂಗ್ರಹಿಸುವುದು ಅವರ ನೆಚ್ಚಿನ ಹವ್ಯಾಸಗಳಲ್ಲೊಂದು. ದೂರದ ಊರುಗಳಲ್ಲಿ ಇದ್ದಾಗಲೂ ಕೊರಿಯರ್‌ನ ಮೂಲಕ ಆತ್ಮೀಯರಿಗೆ ಅದರಲ್ಲೂ ವಿಶೇಷವಾಗಿ ಅವರ ಮಕ್ಕಳಿಗೆ (ಮಕ್ಕಳಿಗೆ ಮಾತ್ರ!)

ತಿಂಡಿಯನ್ನು ಅವರು ಕಳುಹಿಸುತ್ತಿದ್ದರೆಂದರೆ ನೀವು ನಂಬಬೇಕು! ಬದುಕನ್ನು ಹಾವನೂರರಷ್ಟು ಉತ್ಕಟವಾಗಿ ಪ್ರೀತಿಸಿದವರನ್ನು ಕಾಣುವುದು ಸ್ವಲ್ಪ ಕಷ್ಟ.

ಕೆ.ಟಿ.ಸಿ.ಯಲ್ಲಿನ ಮಧುರ ಕ್ಷಣ

ಯಾವುದೇ ಕೆಲಸವನ್ನು ಕೈಗೆತ್ತಿಕೊಂಡರೂ ಸಂಪೂರ್ಣವಾಗಿ ಅದರಲ್ಲಿ ತೊಡಗಿಸಿಕೊಳ್ಳುವುದು ಹಾವನೂರರ ಜಾಯಮಾನ. ಹಾಗೆಂದ ಮಾತ್ರಕ್ಕೆ ಯೋಜನೆಗಳು ಅವರ ತಲೆಯ ಮೇಲೆ ಕಿರೀಟದಂತೆ ಅಲಂಕರಿಸಿದಂತೆ ತೋರುತ್ತಿದ್ದವೇ ಹೊರತು ಮಣಭಾರದಿಂದ ಅವರ ಗೋಣನ್ನು ಮುರಿಯುವಂತೆ ಕಾಣುತ್ತಿರಲಿಲ್ಲ. ಎಲ್ಲ ಗಾಂಭೀರ್ಯತೆಯ ನಡುವೆಯೂ ಸಂಗತಿಗಳನ್ನೂ ಲಘು ಹಾಸ್ಯದ ಧಾಟಿಯಲ್ಲಿ ನೋಡಬಲ್ಲ ಲಾಘವ ಅವರಿಗೆ ಸಿದ್ಧಿಸಿತ್ತು. ತಮ್ಮನ್ನು ತಾವೇ ಕೀಟಲೆಯ ಕಣ್ಣಿನಿಂದ ನೋಡಿಕೊಳ್ಳುವ ಅವರ ಶೈಲಿಗೆ ಅತ್ಯುತ್ತಮ ಉದಾಹರಣೆಯೆಂದರೆ 'ದುಶ್ಯಂತ ಉವಾಚ' ಎಂಬ ಶಬ್ದ ಚಿತ್ರ.

❑

ಜೀವನ ಪಥ

ಜನನ	:	೨೮-೧೨-೧೯೨೭
ತಂದೆ	:	ನರಸಿಂಹಾಚಾರ್ಯ ಗಲಗಲಿ
ತಾಯಿ	:	ರಮಾಬಾಯಿ
೧೯೪೩	:	ಮೆಟ್ರಿಕ್
೧೯೪೭	:	ಬಿ.ಎ. ಪದವಿ (ವಿಲ್ಲಿಂಗ್ಡನ್ ಕಾಲೇಜು, ಸಾಂಗ್ಲಿ)
೧೯೪೭-೪೮	:	ಫೆಲೋ ಮತ್ತು ಇಂಗ್ಲಿಷ್ ಟ್ಯೂಟರ್ (ವಿಲ್ಲಿಂಗ್ಡನ್ ಕಾಲೇಜು, ಸಾಂಗ್ಲಿ)
೧೯೪೮-೫೦	:	ಹೈಸ್ಕೂಲ್ ಮಾಸ್ತರ, ಆಕಾಶವಾಣಿ ಉದ್ಘೋಷಕ ಇತ್ಯಾದಿ ವೃತ್ತಿಗಳು
೧೯೫೧	:	ವಿವಾಹ, ಶಕುಂತಲಾ ವಾಳ್ವೇಕರ (ಭಾರತಿ)ರವರೊಂದಿಗೆ
೧೯೫೧	:	ಗ್ರಂಥಾಲಯ ವಿಜ್ಞಾನದಲ್ಲಿ ಡಿಪ್ಲೊಮಾ, ಮುಂಬೈ
೧೯೫೧-೫೬	:	ಮಾರಾಟ ತೆರಿಗೆ ಇಲಾಖೆಯಲ್ಲಿ ಇನ್ಸ್‌ಪೆಕ್ಟರ್
೧೯೬೦	:	ಕನ್ನಡ ಎಂ.ಎ. ಪೂನಾ ವಿಶ್ವವಿದ್ಯಾಲಯ
೧೯೫೬-೬೧	:	ಸಹಾಯಕ ಗ್ರಂಥಪಾಲಕ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
೧೯೬೧-೮೨	:	ಗ್ರಂಥಪಾಲಕ, ಟಿ.ಐ.ಎಫ್.ಆರ್. ಮುಂಬೈ
೧೯೭೧	:	ಪಿಎಚ್.ಡಿ. (ಪೂನಾ ವಿಶ್ವವಿದ್ಯಾಲಯ)
೧೯೮೨-೮೪	:	ಪ್ರಾಧ್ಯಾಪಕ ಮತ್ತು ಮುಖ್ಯಸ್ಥ ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾಲಯ
೧೯೮೪-೮೯	:	ಪ್ರಾಧ್ಯಾಪಕ ಮತ್ತು ಮುಖ್ಯಸ್ಥ, ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾಲಯ
೧೯೯೩	:	ಕನ್ನಡ ರಾಜ್ಯೋತ್ಸವ ಪ್ರಶಸ್ತಿ
೧೯೯೯	:	ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ
೧೯೯೯	:	ಕರ್ನಾಟಕ ಇತಿಹಾಸ ಅಕಾಡೆಮಿಯ ೧೩ನೇ ವಾರ್ಷಿಕ ಸಮ್ಮೇಳನದ ಅಧ್ಯಕ್ಷ.
೨೦೦೩	:	'ಸಂದೇಶ' ಪ್ರಶಸ್ತಿ, ಮಂಗಳೂರು
೨೦೦೪	:	ಮುಳಿಯ ತಿಮ್ಮಪ್ಪಯ್ಯ ಪ್ರಶಸ್ತಿ, ಮೂಡಬಿದರೆ
೨೦೦೫	:	ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಮೂಡಬಿದಿರೆ
೨೦೦೫	:	ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ ಅಧ್ಯಕ್ಷ
೨೦೦೮	:	ಕನ್ನಡ ವಿಶ್ವವಿದ್ಯಾಲಯದ ನಾಡೋಜ ಗೌರವ
೨೦೦೮	:	ಚಿದಾನಂದ ಪ್ರಶಸ್ತಿ
೨೦೦೮	:	ಸಂ-ಕಥನ ಬಿಡುಗಡೆ
೨೦೧೦	:	ನಿಧನ (ಏಪ್ರಿಲ್ ೫, ಬೆಂಗಳೂರಿನಲ್ಲಿ)

* *

ಶ್ರೀನಿವಾಸ ಹಾವನೂರ ಸಾಹಿತ್ಯ ಸಂಪದ

ಸಂಶೋಧನೆ

೧. ಹೊಸಗನ್ನಡದ ಅರುಣೋದಯ — ೧೯೭೪, ೨೦೦೦, ೨೦೧೧
೨. ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ, ಹನಿಗತೆ, ಕಂಪ್ಯೂಟರ್ ಇತ್ಯಾದಿ — ೧೯೯೮
೩. ಕನ್ನಡ ವ್ಯಾಸಂಗಕ್ಕೆ ಕಂಪ್ಯೂಟರ್ ಸಹಾಯ — ೨೦೦೨
೪. ಮರೆಯಲಾಗದ ಮುಂಬೈ ಕರ್ನಾಟಕ — ೨೦೦೫
೫. ತುಂಗಭದ್ರೆ – ನಾಡಿಗೆ ವರವೋ? ಶಾಪವೋ?

ಕಥಾ ಸಂಕಲನ

೧. ಅವರು ಮತ್ತು ದೇವಕ್ಕ — ೧೯೪೮
೨. ಕಾಗೆಗೆ ಹೇಳಿದ ಕತೆ — ೧೯೫೯
೩. ಕುಚೋದ್ಯದ ಕತೆಗಳು — ೧೯೮೩
೪. ಗಂಧ ಮತ್ತು ಕಲ್ಲು — ೨೦೦೬

ಕಾದಂ – ಕಥನ

೧. ಮಾತಂಗಿ ಮತ್ತಿತರ ಕಾದಂ – ಕಥನಗಳು — ೧೯೮೨
೨. ಕುಮುದಿನಿ ಹಾಗೂ ಇತರ ಕಾದಂ – ಕಥನಗಳು — ೧೯೮೪
೩. ಮಾಡಿ ಮಡಿದವರು — ೧೯೯೮
೪. ಡಾ. ಎಸ್.ಎಲ್. ಭೈರಪ್ಪನವರ ಕಾದಂ – ಕಥನಗಳು — ೧೯೯೯

ಲಲಿತ ಪ್ರಬಂಧಗಳು

೧. ಒಂದಿಷ್ಟು ಲಘು, ಒಂದಿಷ್ಟು ಗಂಭೀರ — ೧೯೯೯

ವ್ಯಕ್ತಿಚಿತ್ರ/ಏಕವ್ಯಕ್ತಿ ವಿಷಯಕ

೧.	ಕರ್ತವ್ಯಾನಂದ ಶ್ರೀ ರಾಜಪುರೋಹಿತರು	೧೯೫೯
೨.	ಗಳಗನಾಥ ಮಾಸ್ತರರು	೧೯೬೯
೩.	ಹೈದರಾಬಾದಿನ ವೀರ ಕನ್ನಡಿಗ – ಚಿಮ್ಮಲಗಿಯವರು	೧೯೮೦
೪.	ಶ್ರೇಷ್ಠ ಪುಸ್ತಕೋದ್ಯಮಿ ಮ. ಗೋವಿಂದರಾವ್	೧೯೯೬
೫.	ಕಾದಂಬರಿಕಾರ ಗಳಗನಾಥರು	೨೦೦೦
೬.	Sode Shri Vadiraja Teertha	೨೦೦೨
೭.	ಪತ್ರಕರ್ತರ ಆಚಾರ್ಯ ಪಾ.ವೆಂ. ಆಚಾರ್ಯ	೨೦೦೮
೮.	ರೆ.ಡಾ. ಫರ್ಡಿನಾಂಡ್ ಕಿಟೆಲ್	೨೦೦೯

ಸೂಚಿಗಳು

೧.	ಅ.ನ.ಕೃ. ಗ್ರಂಥಸೂಚಿ	೧೯೬೦
೨.	ಮಧುರ ಚೆನ್ನ ಸಂಸ್ಮರಣೆ	೧೯೬೪
೩	ಎಂ. ಗೋವಿಂದ ಪೈ ವಾಙ್ಮಯ ದರ್ಶನ	೧೯೬೬
೪.	Suplementary Catalogue of Kannada Books (Assistance to Dr. A. Gaur)	೧೯೮೫
೫.	ಕನ್ನಡ ಪತ್ರಿಕಾ ಸೂಚಿ (ಮೋಹನ ಹೆಗಡೆರೊಡನೆ)	೨೦೦೪
೬.	ಕನಕದಾಸರ ಕೀರ್ತನೆಗಳಲ್ಲಿನ ಶಬ್ದ ಪ್ರಯೋಗಕೋಶ (ವಿ.ಕೃಷ್ಣರೊಂದಿಗೆ)	೨೦೧೦
೭.	ಸಮಗ್ರ ಹರಿದಾಸ ವಾಙ್ಮಯಕೋಶ)	೨೦೧೪

ಸಮೀಕ್ಷೆ ಮತ್ತು ಸಂಪಾದನೆ

ಸಾಹಿತ್ಯಕ

೧.	೧೯೫೬ರ ಕನ್ನಡ ಸಾಹಿತ್ಯ ದರ್ಶನ	೧೯೫೭
೨.	ಗೋವಿಂದ ಪೈ ವಾಙ್ಮಯ ಸಮೀಕ್ಷೆ	೧೯೮೩
೩.	ಬೆಂಗೇರಿಯವರ ಬರಹಗಳು	೧೯೯೦
೪.	ಶ್ರೀವಾದಿರಾಜರ ತೀರ್ಥ ಪ್ರಬಂಧ – ಕಾವ್ಯಾತ್ಮಕ ಸಮೀಕ್ಷೆ	೧೯೯೧
೫.	ಹಟ್ಟಿಯಂಗಡಿ ನಾರಾಯಣರಾವ್ – ಸಾಹಿತ್ಯ ವಾಚಿಕೆ	೧೯೯೪
೬.	ಪತ್ರಗಳು ಚಿತ್ರಿಸಿದ ಗೋವಿಂದ ಪೈ	೧೯೯೫
೭.	Epigraphical Studies by SLN Rao. (with Dr. H.S. Gopal Rao)	೧೯೯೭

೮. ತುರಮುರಿಯವರ 'ಕರ್ನಾಟಕ ಶಬ್ದ ಮಂಜರಿ' ೨೦೦೦
೯. ಮ.ಪ್ರ. ಪೂಜಾರರ 'ಹಳಗನ್ನಡ ಕವಿಕಾವ್ಯ ಮಹೋನ್ನತಿ' ೨೦೦೦
೧೦. ಕಿಟ್ಟೆಲ್ಲರ ಕವನಕೋಶ ೨೦೦೩
೧೧. ದಕ್ಷಿಣ ಕನ್ನಡದ ಸಾರಸ್ವತ ಪರಂಪರೆ ೨೦೦೪
೧೨. ಮುಳಿಯ ತಿಮ್ಮಪ್ಪಯ್ಯ ಸಾಹಿತ್ಯ ವಾಚಿಕೆ ೨೦೦೬
೧೩. ತುರಮರಿ ಶೇಷಗಿರಿರಾಯರ ಶಾಕುಂತಲಾ ಅನುವಾದ ೨೦೦೬
೧೪. ರಂ. ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ'ಯ ಮುಂದುವರಿಕೆ ೨೦೦೬
೧೫. ರಂ.ಶ್ರೀ. ಮುಗಳಿಯವರು ಚಿತ್ರಿಸಿದ ಪಂಪರನ್ನರು ೨೦೦೬
೧೬. ರಾಮಚಂದ್ರ ಉಚ್ಚಿಲರ 'ಪಂಪರಾಮಾಯಣ – ಗದ್ಯಾನುವಾದ' ೨೦೦೭
೧೭. ಮಧ್ಯಕಾಲೀನ ಕರ್ನಾಟಕ (ಡಾ. ಜಿ.ಎಸ್. ದೀಕ್ಷಿತರ ಕನ್ನಡ ಲೇಖನಗಳು) ೨೦೦೮
೧೮. South India: an Expidition in to the past
(English articles of Dr. G.S. Dixit) ೨೦೧೧

ಹರಿದಾಸ ಸಾಹಿತ್ಯ

೧. ಹರಿದಾಸರು ಹಾಡಿ ಹೊಗಳಿದ ಶ್ರೀ ವಾದಿರಾಜರು ೧೯೯೮
೨. ಹರಿದಾಸರು ಸ್ತುತಿಸಿದ ಶ್ರೀ ಸತ್ಯಬೋಧರು ೨೦೦೦
೩. ಸೋದೆ ಶ್ರೀ ವಿಶ್ವೇಂದ್ರತೀರ್ಥರ 'ಕೀರ್ತನ ಮಂಜರಿ' ೨೦೦೧
೪. ಹರಿದಾಸರು ಸ್ತುತಿಸಿದ ಮಂತ್ರಾಲಯ ಮಠದ ಯತಿವರೇಣ್ಯರು ೨೦೦೨
೫. ಪುರಂದರದಾಸರ ಜನಪ್ರಿಯ ಕೀರ್ತನೆಗಳು
(ಹೊ.ರಾ. ಸತ್ಯನಾರಾಯಣರೊಡನೆ) ೨೦೦೨
೬. ತುಪಾಕಿ ವೆಂಕಟರಮಣಾಚಾರ್ಯರ ಮತ್ತು
ಪಾವಂಜೆ ಲಕ್ಷ್ಮೀನಾರಣಪ್ಪ ಅವರ ಕೀರ್ತನೆಗಳು ೨೦೦೩
೭. ಶ್ರೀ ವಿಶ್ವೇಂದ್ರತೀರ್ಥರ ಹಾಗೂ ಇತರ ದ.ಕ. ಹರಿದಾಸರ ಕೀರ್ತನೆಗಳು
(ಎಂ. ರಾಜಗೋಪಾಲಾಚಾರ್ಯರೊಡನೆ) ೨೦೦೩
೮. ಶ್ರೀ ಶ್ರೀಪಾದರಾಜರ ಮತ್ತು ಶ್ರೀ ವ್ಯಾಸರಾಯರ ಕೀರ್ತನೆಗಳು ೨೦೦೩
೯. ಶ್ರೀದವಿಠಲ ಹಾಗೂ ಧಾರವಾಡ ಜಿಲ್ಲೆಯ ಇತರ
ಹರಿದಾಸರ ಕೀರ್ತನೆಗಳು ೨೦೦೩
೧೦. ಇಂದಿರೇಶರ ಹಾಗೂ ಧಾರವಾಡ ಜಿಲ್ಲೆಯ
ಇತರ ಹರಿದಾಸರ ಕೀರ್ತನೆಗಳು ೨೦೦೩

ಪಾ.ವೆಂ. ಆಚಾರ್ಯರ ಸಮಗ್ರ ಕೃತಿಗಳು

೧. ಪಾ.ವೆಂ. ಆಚಾರ್ಯರ ಹರಟೆಗಳು (ಅ.ರಾ. ಮಿತ್ರರೊಡನೆ) ೨೦೦೦
೨. ಪಾ.ವೆಂ. ಆಚಾರ್ಯರ ನಗೆ ಬರಹಗಳು (ಅ.ರಾ. ಮಿತ್ರರೊಡನೆ) ೨೦೦೦
೩. ಪಾ.ವೆಂ. ಆಚಾರ್ಯರು ಕಂಡ ಉಡುಪಿಯ ಪರಿಸರ ೨೦೦೧
೪. ಬಯ್ಯ ಮಲ್ಲಿಗೆ (ತುಳು ಕವನಗಳು) ೨೦೦೧
೫. ಹಿಂದೂ ಮುಸ್ಲಿಮ್ ಮತ್ತು ಇತರ ಕತೆಗಳು ೨೦೦೨
೬. ಬ್ರಾಹ್ಮಣರೇನು ಮಾಡಬೇಕು? (ವೈಚಾರಿಕ ಬರಹಗಳು) ೨೦೦೨
೭. ಇವರೇ ಲಾಂಗೂಲಾಚಾರ್ಯರು
(ಡಾ. ಎಸ್.ಎಲ್. ಶ್ರೀನಿವಾಸಮೂರ್ತಿಯೊಡನೆ) ೨೦೦೨
೮. ಓದುಗರೊಡನೆಯ ಹರಟೆಗಳು ೨೦೦೩
೯. ಸುಭಾಷಿತ ಚಮತ್ಕಾರ ೨೦೦೪
೧೦. ಜಗದ್ವಿಖ್ಯಾತರು ೨೦೦೩
೧೧. ಖ್ಯಾತಿವೆತ್ತ ಭಾರತೀಯರು ೨೦೦೩
೧೨. ಹೊಸಗನ್ನಡದ ಹಿರಿಯರು ೨೦೦೪

ಕಿರಿಯರಿಗಾಗಿ

೧. ಶಾಸನ ಪಿತಾಮಹ ಬಿ.ಎಲ್. ರೈಸ್ ೧೯೭೮
೨. ಗಳಗನಾಥರು ೧೯೮೨
೩. ರೆವರೆಂಡ್ ಎಫ್. ಕಿಟೆಲ್ ೧೯೮೩
೪. Dr. H.J. Bhabha ೧೯೯೯

ಇತರೆ

೧. ಗ್ರಂಥಾಲಯ ತಂತ್ರ ೧೯೫೫
೨. ಅವಿವಾಹಿತೆ ೧೯೫೫
೩. ಪ್ರೇಕ್ಷಣೀಯ ಕರ್ನಾಟಕ ೧೯೯೬

* *

ಉದಯಭಾನು ಸುವರ್ಣ ಪುಸ್ತಕ ಮಾಲೆ

ಸಂಪಾದಕ ಮಂಡಲಿ

ಪ್ರಧಾನ ಸಂಪಾದಕರು
ಡಾ. ಪಿ.ವಿ. ನಾರಾಯಣ
ಹಿರಿಯ ಸಾಹಿತಿಗಳು

ಡಾ. ಕೋ.ವೆಂ. ರಾಮಕೃಷ್ಣೇ ಗೌಡ
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಜಯನಗರ

ಡಾ. ವೈ.ಸಿ. ಕಮಲ
ಸಹ ಪ್ರಾಧ್ಯಾಪಕರು, ನ್ಯಾಷನಲ್ ಕಾಲೇಜು

ಡಾ. ಟಿ. ಪದ್ಮ
ಉಪನ್ಯಾಸಕರು, ನ್ಯಾಷನಲ್ ಕಾಲೇಜು

ಉದಯಭಾನು ಕಲಾಸಂಘ

ಸಂಘದ ಗೌರವ ಸದಸ್ಯರು	:	ನಾಡೋಜ ಡಾ. ಜಿ. ನಾರಾಯಣ (೨೦೧೧)
		ಶ್ರೀ ವಿ.ಎಸ್. ಕೃಷ್ಣಯ್ಯರ್ (೨೦೧೧)
		ಪ್ರೊ. ಎಲ್.ಎಸ್. ಶೇಷಗಿರಿ ರಾವ್
		ಶ್ರೀಮತಿ ಲೀಲಾದೇವಿ. ಆರ್. ಪ್ರಸಾದ್
		ನ್ಯಾಯಮೂರ್ತಿ ಶ್ರೀ ಎ.ಜೆ. ಸದಾಶಿವ
		ಪ್ರೊ. ಎಂ.ಎಚ್. ಕೃಷ್ಣಯ್ಯ
		ಪ್ರೊ. ಎಚ್.ಆರ್. ರಾಮಕೃಷ್ಣ ರಾವ್

ಕಾರ್ಯಕಾರಿ ಸಮಿತಿ

ಅಧ್ಯಕ್ಷರು	:	ಶ್ರೀ ಬಿ. ಕೃಷ್ಣ
		ಶ್ರೀ ಎನ್.ಆರ್. ಚಂದ್ರನ್ (೨೦೦೯)
ಉಪಾಧ್ಯಕ್ಷರು	:	ಶ್ರೀ ಟಿ. ಶ್ರೀನಿವಾಸ್
		ಶ್ರೀ ಟಿ.ಕೆ. ತಿಮ್ಮರಾಜಶೆಟ್ಟಿ
ಸಂಸ್ಥಾಪಕ ಗೌರವ ಕಾರ್ಯದರ್ಶಿ	:	ಶ್ರೀ ಎಂ. ನರಸಿಂಹ
ಸಹಾಯಕ ಕಾರ್ಯದರ್ಶಿಗಳು	:	ಶ್ರೀ ಕೆ.ಎನ್. ಸೋಮಶೇಖರ್
		ಶ್ರೀ ಜಿ. ನಾಗರಾಜ
ಕೋಶಾಧ್ಯಕ್ಷರು	:	ಶ್ರೀ ವಿ. ನಾಗರಾಜನ್
ಆಂತರಿಕ ಲೆಕ್ಕ ಪರಿಶೋಧಕರು	:	ಶ್ರೀ ಎಚ್.ಎಸ್. ಕಪಿನಯ್ಯ
ಸಮಿತಿ ಸದಸ್ಯರು	:	ಶ್ರೀ ಎಲ್. ವೆಂಕಟಪ್ಪ, ಸಂಸ್ಥಾಪಕರು
		ಶ್ರೀ ಎನ್. ಸೂರ್ಯನಾರಾಯಣ
		ಶ್ರೀ ರಾ. ಕೃಷ್ಣಕುಮಾರ್
		ಡಾ. ನಾ. ಗೀತಾಚಾರ್ಯ
		ಶ್ರೀಮತಿ ಜಯಂತಿ ಜಿ. ಜಗನ್ನಾಥ
		ಶ್ರೀ ಟಿ.ಆರ್. ಸತ್ಯನಾರಾಯಣ
		ಶ್ರೀ ಎ.ಡಿ. ನಾರಾಯಣ
		ಶ್ರೀ ಬಿ.ಎಸ್. ಸತ್ಯನಾರಾಯಣ
		ಪ್ರೊ. ಎಚ್.ಆರ್. ರಾಮಕೃಷ್ಣ ರಾವ್
		ಡಾ. ಜಿ. ಕೃಷ್ಣಪ್ಪ
		ಪ್ರೊ. ಎಸ್. ಅನಿಲ್‌ಕುಮಾರ್
ವಿಶೇಷ ಆಹ್ವಾನಿತರು	:	ಶ್ರೀ ಎನ್. ಆರ್. ಪಂಡಿತಾರಾಧ್ಯ
		ಶ್ರೀ ಬಿ.ಆರ್. ಮುದ್ದುರಾಜ್
		ಶ್ರೀ ಎಂ.ಜಿ. ಸಂಪತ್‌ಕುಮಾರ್

ಉದಯಭಾನು ಉನ್ನತ ಅಧ್ಯಯನ ಕೇಂದ್ರ
ಗೌರವ ಕಾರ್ಯನಿರ್ವಹಣಾ ಮಂಡಲಿ (Governing Council)

ಗೌರವ ನಿರ್ದೇಶಕರು

ಪ್ರೊ. ಎಚ್.ಆರ್. ರಾಮಕೃಷ್ಣ ರಾವ್

ಆಡಳಿತ ನಿರ್ದೇಶಕರು/ಸಿ.ಇ.ಓ.

ಶ್ರೀ ಎಂ. ನರಸಿಂಹ

ಪದನಿಮಿತ್ತ ಸದಸ್ಯರು

ಶ್ರೀ ಬಿ. ಕೃಷ್ಣ, ಶ್ರೀ ವಿ. ನಾಗರಾಜನ್, ಶ್ರೀ ರಾ. ಕೃಷ್ಣಕುಮಾರ್

ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಅಧ್ಯಯನಾಂಗ

ಗೌರವ ಡೀನ್

ಡಾ. ಸುರೇಶ್ ಪಾಟೀಲ

ಗೌರವ ಸದಸ್ಯರು

ಡಾ. ಪಿ.ವಿ. ನಾರಾಯಣ
ಡಾ. ಜಿ.ಬಿ. ಹರೀಶ್
ಡಾ. ಎನ್. ರವಿ

ವಿಜ್ಞಾನ ಮತ್ತು ತಂತ್ರಜ್ಞಾನ ಅಧ್ಯಯನಾಂಗ

ಗೌರವ ಡೀನ್

ಶ್ರೀ ಪಿ.ಡಿ. ಗೋಪಾಲ್

ಗೌರವ ಸದಸ್ಯರು

ಪ್ರೊ. ಎಚ್.ಆರ್. ರಾಮಕೃಷ್ಣರಾವ್
ಶ್ರೀ ಟಿ.ಆರ್. ಅನಂತರಾಮು
ಡಾ. ವೈ. ತುಳಜಪ್ಪ

ಆಡಳಿತ ಮತ್ತು ನಿರ್ವಹಣ ಅಧ್ಯಯನಾಂಗ

ಗೌರವ ಡೀನ್

ಡಾ. ಟಿ.ವಿ. ರಾಜು

ಗೌರವ ಸದಸ್ಯರು

ಪ್ರೊ. ಎಚ್.ಆರ್. ಅಪ್ಪಣ್ಣಯ್ಯ
ಡಾ. ಕೆ. ಶೇಷಮೂರ್ತಿ
ಪ್ರೊ. ಎಸ್. ಹರೀಶ್
ಪ್ರೊ. ಎ. ಪದ್ಮನಾಭ

ಉದಯಭಾನು ಕಲಾಸಂಘದ ಪ್ರಕಟಣೆಗಳು

೧. ಬೆಂಗಳೂರು ದರ್ಶನ* (೧೯೭೫)
– ಸಂ : ಶ್ರೀವತ್ಸ

೨. ಕೆಂಪೇಗೌಡನಗರ ದರ್ಶನ*
– ಸಂ : ಶ್ರೀವತ್ಸ

೩. ಆಸ್ವಾದ – ಎಂ.ವಿ. ಸೀತಾರಾಮಯ್ಯ ಅಭಿನಂದನಾ ಗ್ರಂಥ
– ಸಂ : ಶ್ರೀವತ್ಸ, ಅನಂತ ಪದ್ಮನಾಭರಾವ್

೪. ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ*
ಪ್ರಧಾನ ಸಂಪಾದಕರು : ಎಲ್.ಎಸ್. ಶೇಷಗಿರಿ ರಾವ್

೫. ಬೆಂಗಳೂರು ದರ್ಶನ (೨೦೦೫) (ಎರಡು ಬೃಹತ್ ಸಂಪುಟಗಳು)*
ಪ್ರಧಾನ ಸಂಪಾದಕರು : ಎಲ್.ಎಸ್. ಶೇಷಗಿರಿ ರಾವ್
ಉದಯಭಾನು ಉನ್ನತ ಅಧ್ಯಯನ ಮಾಲೆ

ಉದಯಭಾನು ಉನ್ನತ ಅಧ್ಯಯನ ಮಾಲೆ

೧. ಅಮರ್ತ್ಯಸೇನ್
– ಡಾ. ಆರ್. ಕೋಮಲ, ಡಾ. ಶುಭ ರಮೇಶ್

೨. ಕೆರೆಗಳು ಬತ್ತಿದಾಗ – ಜಲಸಮಸ್ಯೆ
– ಟಿ.ಆರ್. ಅನಂತರಾಮು

೩. ಮಣ್ಣಿಂದ ಕಾಯ – ದಾಸ ಸಾಹಿತ್ಯ ಮೀಮಾಂಸೆ
– ಡಾ. ಹೆಚ್.ಎನ್. ಮುರಳೀಧರ

೪. ಕರ್ನಾಟಕದ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳು
– ಬೆ.ಗೋ. ರಮೇಶ್

೫. ಮಾರುಕಟ್ಟೆ ಪ್ರಕ್ರಿಯೆಯಲ್ಲಿ ಜಾಹೀರಾತು
– ಎಸ್. ಅನಿಲ್‌ಕುಮಾರ್

೬. ಕನ್ನಡದಲ್ಲಿ ವಿಜ್ಞಾನ ಸಂವಹನ
– ಸಂ : ಪ್ರೊ. ಎಚ್.ಆರ್. ರಾಮಕೃಷ್ಣರಾವ್, ಟಿ.ಆರ್. ಅನಂತರಾಮು

೭. ವಿಜ್ಞಾನ ಸಂಪುಟ – ೧
–ಸಂ:ಬೆಳ್ಳಾವೆ ವೆಂಕಟನಾರಣಪ್ಪ, ನಂಗಪುರಂ ವೆಂಕಟೇಶಯ್ಯಂಗಾರ್ಯ, (೧೯೧೮ ಮತ್ತು ೧೯೧೯)

೮. ವಿಜ್ಞಾನ ಸಂಪುಟ – ೨
ಸಂಕಲನ : ಪ್ರೊ. ಎಚ್.ಆರ್. ರಾಮಕೃಷ್ಣರಾವ್, ಟಿ.ಆರ್. ಅನಂತರಾಮು (೨೦೧೨)

೯. ಮಾಧ್ಯಮ ಕರ್ನಾಟಕ
– ಸಂ : ನಾಗೇಶ ಹೆಗಡೆ

೧೦. ಕಾವ್ಯಶೋಧಕ
– ಸಂ : ಪ್ರೊ. ಎಚ್.ಆರ್. ರಾಮಕೃಷ್ಣರಾವ್, ಎಂ. ನರಸಿಂಹ

ಉದಯಭಾನು ಸುವರ್ಣ ಪುಸ್ತಕ ಮಾಲೆ

ಪ್ರಧಾನ ಸಂಪಾದಕರು : ಡಾ. ಪಿ.ವಿ. ನಾರಾಯಣ

೧) ಡಾ. ಸುಲೋಚನ ಗುಣಶೀಲ
– ಡಾ. ವೈ.ಸಿ. ಕಮಲ

೨) ಡಾ. ವಿಮಲಾ ರಂಗಾಚಾರ್
– ಎಂ.ಎ. ಜಯರಾಮರಾವ್

೩) ನೀಲತ್ತಹಳ್ಳಿ ಕಸ್ತೂರಿ
– ಬೆ.ಗೋ. ರಮೇಶ್

೪) ಡಾ. ಅಶೋಕ ಪೈ
– ಡಾ. ಸಿ.ಆರ್. ಚಂದ್ರಶೇಖರ್

೫) ಡಾ. ಸಿ.ಆರ್. ಚಂದ್ರಶೇಖರ್
– ಡಾ. ಕೆ.ಆರ್. ಶ್ರೀಧರ್

೬) ರಾಗಿ ಲಕ್ಷ್ಮಣಯ್ಯ
– ಡಾ. ಶರಣಬಸವೇಶ್ವರ ಅಂಗಡಿ

೭) ದಾಶರಥಿ ದೀಕ್ಷಿತ್
– ಲೋಕನಾಥ್ ದೀಕ್ಷಿತ್

೮) ಬಿ.ಎಸ್. ಎಸ್. ಕೌಶಿಕ್
– ಎಂ.ಡಿ. ಕೌಶಿಕ್

೯) ಕಂಪ್ಯೂಟರ್ ಕನ್ನಡ ಕೆ.ಪಿ.ರಾವ್
– ಶ್ರೀನಿಧಿ

೧೦) ಶಾ.ಮಂ. ಕೃಷ್ಣರಾಯರು
– ಡಾ. ವರದಾ ಶ್ರೀನಿವಾಸ್

೧೧) ಡಾ. ಕೆ. ಉಲ್ಲಾಸ ಕಾರಂತ
– ಸುಮಂಗಲಾ ಎಸ್. ಮುಮ್ಮಿಗಟ್ಟಿ

೧೨) ನಾಡಿಗೇರ ಕೃಷ್ಣರಾಯರು
– ಪ್ರತಿಭಾ ನಾಡಿಗೇರ್

೧೩) ಪದ್ಮಭೂಷಣ ಸಂಗೀತ ಸಾಮ್ರಾಟ್ ಡಾ. ಆರ್.ಕೆ. ಶ್ರೀಕಂಠನ್
– ಕೆ. ಮುರುಳಿಧರ್

೧೪) **ಕಿ.ರಂ. ನಾಗರಾಜ**
– ಎಲ್.ಎನ್. ಮುಕುಂದರಾಜ್

೧೫) **ಕಲಾಗುರು ಆರ್.ಎಂ. ಹಡಪದ್**
– ಸುಂಕಂ ಗೋವರ್ಧನ

೧೬) **ಡಾ.ಎಚ್.ಎಸ್. ದೊರೆಸ್ವಾಮಿ**
– ಈ. ಬಸವರಾಜು

೧೭) **ಡಾ.ಬಿ.ಟಿ. ಲಲಿತಾ ನಾಯಕ್**
– ಡಾ. ಎಂ. ರವಿನಾಯ್ಕ

೧೮) **ಡಾ. ಜಿ.ರಾಮಕೃಷ್ಣ**
– ಡಾ.ಎನ್. ಗಾಯತ್ರಿ

೧೯) **ಬಿ.ವಿ. ರಾಮಮೂರ್ತಿ**
– ಎಸ್. ವೆಂಕಟೇಶ್

೨೦) **ಚಿಂದೋಡಿ ಲೀಲಾ**
– ಸರಸ್ವತಿ ಅರುಣಕುಮಾರ್

೨೧) **ಚಿಟ್ಟಾಣಿ ರಾಮಚಂದ್ರ ಹೆಗಡೆ**
– ಜಿ.ಎಸ್. ಭಟ್ಟ

೨೨) **ಪ್ರೊ. ಬಿ. ಕೃಷ್ಣಪ್ಪ**
– ಡಾ. ಎಸ್.ಆರ್. ಕೇಶವ

೨೩) **ಡಾ. ಬಿ.ಪಿ. ರಾಧಾಕೃಷ್ಣ**
– ಟಿ.ಎಂ. ಶಿವಶಂಕರ್

೨೪) **ಪ್ರೊ. ಜೆ.ಆರ್. ಲಕ್ಷ್ಮಣರಾವ್**
– ಡಾ. ಟಿ.ವಿ. ಬಾಲಕೃಷ್ಣ ಅಡಿಗ

೨೫) **ಯಮುನಾ ಮೂರ್ತಿ**
– ಭಾರ್ಗವಿ ನಾರಾಯಣ

೨೬) **ಡಾ. ಬಿ.ಕೆ.ಎಸ್. ಅಯ್ಯಂಗಾರ್**
– ಡಾ. ಎಸ್.ಎನ್. ಓಂಕಾರ್

೨೭) **ಎಚ್.ವೈ. ಶಾರದಾಪ್ರಸಾದ್**
– ಕೆ. ಸತ್ಯನಾರಾಯಣ

೨೮) **ಬೆಳಕಿನ ಮಾಂತ್ರಿಕ ವಿ.ಕೆ. ಮೂರ್ತಿ**
– ಎನ್.ಎಸ್. ಶ್ರೀಧರ ಮೂರ್ತಿ

೨೯) **ಡಾ. ಬಿ.ಎಸ್. ವಿಶ್ವನಾಥ**
– ಎಲೆ ಶಶಿಧರ

೩೦) **ನ. ಭದ್ರಯ್ಯ**
– ಡಾ. ಅರ್ಜುನಪುರಿ ಅಪ್ಪಾಜಿಗೌಡ

೩೧) ಚಿಗಟೇರಿಯ ಚೇತನ ಮುದೇನೂರು ಸಂಗಣ್ಣ
– ಡಾ. ಚಿಕ್ಕಣ್ಣ ಯಣ್ಣೆಕಟ್ಟೆ

೩೨) ಸುರೇಂದ್ರ ಕೌಲಗಿ
– ಕೆ.ಪಿ. ಸುರೇಶ್

೩೩) ಡಾ. ಲೀಲಾದೇವಿ ಆರ್. ಪ್ರಸಾದ್
– ಡಾ. ವೈ.ಸಿ. ಕಮಲ

೩೪) ಕೆ.ವಿ. ರಮೇಶ್
– ದೀಪಿಕಾ ಸಾವಿತ್ರಿ

೩೫) ಆರ್.ಎಲ್. ನರಸಿಂಹಯ್ಯ
– ಸುಮಂಗಲಾ ಎಸ್. ಮುಮ್ಮಿಗಟ್ಟಿ

೩೬) ಕ್ಯಾಪ್ಟನ್ ಜಿ.ಆರ್. ಗೋಪಿನಾಥ್
– ಶಶಿಕಾಂತ ಎಂ. ಮುಮ್ಮಿಗಟ್ಟಿ

೩೭) ಪ್ರೊ. ಎಮ್.ಪಿ.ಎಲ್. ಶಾಸ್ತ್ರಿ
– ಡಾ. ಎಸ್.ಎನ್. ಪ್ರಾಣೇಶ್

೩೮) ಡಾ. ಎಂ.ಎಚ್. ಮರಿಗೌಡ
– ಪ್ರೊ. ಆರ್. ವಸಂತ್ ಕುಮಾರ್

೩೯) ಶ್ರೀನಿವಾಸ ಹಾವನೂರ
– ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ

೪೦) ಬಿ. ರಾಚಯ್ಯ
– ನಾಗೇಶ್ ಸೋಸ್ಲೆ

೪೧) ಪ್ರೊ.ಎಸ್.ಕೆ. ರಾಮಚಂದ್ರರಾಯರು
– ಡಾ. ಜಿ.ಬಿ. ಹರೀಶ್

ಆಂತರಿಕ ಪ್ರಕಟಣೆಗಳು :

೧. ವಾರ್ಷಿಕ ಸಂಚಿಕೆ – ಕಲಾವಿಕಾಸ*

೨. ಉದಯ ಸೌರಭ – ತ್ರೈಮಾಸಿಕ ಸಂಘದ ಮುಖವಾಣಿ*

ಪುಸ್ತಕಗಳ ಮಾಹಿತಿಗಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಬಹುದು.
(ದೂ : 08026601831/08026609343) * ಪ್ರತಿಗಳು ಲಭ್ಯವಿಲ್ಲ.

ಉದಯಭಾನು ಸುವರ್ಣ ಪುಸ್ತಕ ಮಾಲೆ

ಉದಯಭಾನು ಕಲಾಸಂಘ ಆರಂಭಗೊಂಡದ್ದು ೧೯೬೫ರಲ್ಲಿ, ಸಹಜವಾಗಿಯೇ ಸಣ್ಣ ಪ್ರಮಾಣದಲ್ಲಿ; ತನ್ನ ಐವತ್ತು ವರ್ಷಗಳ ಇರುವಿಕೆಯಲ್ಲಿ ಕ್ರಮೇಣ ವಿಕಾಸಗೊಳ್ಳುತ್ತ ಇದೇ ವರ್ಷ (೨೦೧೫) ಸುವರ್ಣ ಮಹೋತ್ಸವ ಆಚರಿಸುತ್ತಿದೆ. ಆ ಹೆಮ್ಮೆಯ ಕ್ಷಣವನ್ನು ಚಿರಸ್ಮರಣೀಯವಾಗಿಸಲು ಸಂಸ್ಥೆಯು ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ಅವುಗಳಲ್ಲಿ ಮುಖ್ಯವಾದ ಒಂದು ಎಂದರೆ ಐವತ್ತು ಕಿರುಹೊತ್ತಗೆಗಳ ಪ್ರಕಟಣೆ. ವಿವಿಧ ಕ್ಷೇತ್ರಗಳ ಐವತ್ತು ಮಂದಿ ಕನ್ನಡ ನಾಡಿನ ಸಮಕಾಲೀನ ಸಾಧಕರ ಬದುಕು ಮತ್ತವರ ಕೊಡುಗೆಗಳ ಬಗ್ಗೆ ಆಯಾ ಕ್ಷೇತ್ರದ ಪರಿಣತರಿಂದ ಗ್ರಂಥಗಳನ್ನು ಬರೆಸಿ ಪ್ರಕಟಿಸುವುದು. ಈ ಸಾಧಕರಲ್ಲಿ ಬಹುಮಂದಿ ನಮ್ಮ ಕಣ್ಣೆದುರಿಗೇ ಇರುವವರು, ಮತ್ತೆ ಕೆಲವರು ಕೆಲಕಾಲದ ಹಿಂದಷ್ಟೇ ಕಣ್ಮರೆಯಾದವರು. ಇದಕ್ಕೆ 'ಉದಯಭಾನು ಸುವರ್ಣ ಪುಸ್ತಕ ಮಾಲೆ' ಎಂಬ ಹೆಸರನ್ನು ನೀಡಲಾಗಿದೆ. ಈ ಸಾಧಕರು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದವರಾಗಿರಬೇಕು; ಅವರ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆಯನ್ನು ಕೊಟ್ಟಿರಬೇಕು. ಅವರ ಬಗ್ಗೆ ಜನರಿಗೆ ಸ್ಥೂಲವಾಗಿ ತಿಳಿದಿರಬಹುದಾದರೂ ಅವರ ಕಾರ್ಯವೈಶಿಷ್ಟ್ಯದ ವಿವರಣೆ ನೀಡುವುದು; ಅಂಥವರ ಬದುಕು–ಸಾಧನೆಗಳ ಬಗ್ಗೆ ತಿಳಿವಳಿಕೆ ನೀಡುವುದು–ಈ ಮಾಲೆಯ ಉದ್ದೇಶ. ಇಲ್ಲಿಯವರೆಗೆ ೪೫ ಕೃತಿಗಳು ಪ್ರಕಟವಾಗಿವೆ. ಇದೀಗ ಎಂಟನೆಯ ಕಂತಿನ ಏಳು ಪುಸ್ತಕಗಳ ಬಿಡುಗಡೆಯ ಸಂಭ್ರಮ.

ಡಾ. ಎಸ್.ಎಲ್. ಶ್ರೀನಿವಾಸಮೂರ್ತಿ

ಬೆಂಗಳೂರಿನ ಬಸವನಗುಡಿಯಲ್ಲಿರುವ ವಿಜಯ ವಿಭಜಿತ ಪದವಿ ಪೂರ್ವ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಇವರು ಮೂಲತಃ ಕೋಲಾರದವರು. ಸಸ್ಯ ಅಂಗಾಂಶ ಕೃಷಿ (Plant tissue Culture) ಕ್ಷೇತ್ರದಲ್ಲಿ ಹಲವು ವರ್ಷಗಳ ಅನುಭವ. ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಎಂ.ಎ. ಹಾಗೂ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದಿಂದ ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ.

'ಶಾಸನ ಪಿತಾಮಹ' ಎಂದು ಪ್ರಸಿದ್ಧರಾಗಿದ್ದ ಬೆಂಜಮಿನ್ ಲೂಯಿರೈಸ್‌ರವರ ಜೀವನ ಮತ್ತು ಸಾಧನೆಯನ್ನು ಕುರಿತಂತೆ ರಚಿಸಿದ ಮಹಾಪ್ರಬಂಧಕ್ಕೆ ಬೆಂಗಳೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿ. ಈ ಸಂಬಂಧವಾಗಿ ಆಕ್ಸ್‌ಫರ್ಡ್, ಕೇಂಬ್ರಿಡ್ಜ್, ಲಂಡನ್ ಮುಂತಾದ ವಿಶ್ವವಿದ್ಯಾಲಯಗಳಿಗೆ ಭೇಟಿ ನೀಡಿ ಅಪರೂಪದ ದಾಖಲೆಗಳನ್ನು ಸಂಗ್ರಹಿಸಿದ ಹೆಗ್ಗಳಿಕೆ.

ಡಾ. ಶ್ರೀನಿವಾಸ ಹಾವನೂರರ ಒಡಗೂಡಿ ಪಾ.ವೆಂ. ಆಚಾರ್ಯರ ಸಮಗ್ರ ಬರಹಗಳ ಹಲವು ಸಂಪುಟಗಳನ್ನು ಸಂಪಾದಿಸಿದ್ದಾರೆ. ಸಂಶೋಧನೆ, ಕೃತಿ ಸಂಪಾದನೆ, ಪುಸ್ತಕ ವಿಮರ್ಶೆ, ಸಚಿತ್ರ ಲೇಖನಗಳ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಉದಯಭಾನು ಕಲಾಸಂಘ (ನೋಂ.)
ಉದಯಭಾನು ಉನ್ನತ ಅಧ್ಯಯನ ಕೇಂದ್ರ
ಕೆಂಪೇಗೌಡನಗರ, ಬೆಂಗಳೂರು – ೫೬೦ ೦೧೯